ರಾಜಶೇಖರ ನೀರಮಾನ್ವಿಯವರ ಸಣ್ಣಕತೆಗಳು : ಸಾಂಸ್ಕೃತಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಪದವಿಗಾಗಿ ಸಾದರ ಪಡಿಸಿರುವ ಸಂಪ್ರಬಂಧ)

ಸಂಶೋಧಕರು

ಆರ್.ರಾಜಶೇಖರ

ಮಾರ್ಗದರ್ಶಕರು

ಡಾ.ಎಂ.ಮಲ್ಲಿಕಾರ್ಜುನ ವಣೇನೂರು

ಮುಖ್ಯಸ್ಥರು

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೮-೦೯

ರಾಜಶೇಖರ ನೀರಮಾನ್ವಿಯವರ ಸಣ್ಣಕತೆಗಳು : ಸಾಂಸ್ಕೃತಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಪದವಿಗಾಗಿ ಸಾದರ ಪಡಿಸಿರುವ ಸಂಪ್ರಬಂಧ)

ಸಂಶೋಧಕರು
ಆರ್.ರಾಜಶೇಖರ

ಮಾರ್ಗದರ್ಶಕರು
ಡಾ.ಎಂ.ಮಲ್ಲಿಕಾರ್ಜುನ ವಣೇನೂರು
ಮುಖ್ಯಸ್ಥರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೦೮-೦೯

ಮಾರ್ಗದರ್ಶಕರ ದೃಢೀಕರಣ ಪತ್ರ

ರಾಜಶೇಖರ ನೀರಮಾನ್ವಿಯವರ ಸಣ್ಣಕತೆಗಳು: ಸಾಂಸ್ಕೃತಿಕ ಅಧ್ಯಯನ ಎಂಬ ಸಂಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್, ಪದವಿಗಾಗಿ ಆರ್.ರಾಜಶೇಖರ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : 8-10-09

ಸ್ಥಳ : ಕನ್ನಡ ವಿಶ್ವವಿದ್ಯಾಲಯ, ಹಂಪಿ

ಡಾ.ಎಂ.ಮಲ್ಲಿಕಾರ್ಜುನ ವಣೇನೂರು
ಮಾರ್ಗದರ್ಶಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಸಂಶೋಧಕರ ಪ್ರಮಾಣ ಪತ್ರ

ರಾಜಶೇಖರ ನೀರಮಾನ್ವಿಯವರ ಸಣ್ಣಕತೆಗಳು: ಸಾಂಸ್ಕೃತಿಕ ಅಧ್ಯಯನ ಎಂಬ ಸಂಪ್ರಬಂಧವನ್ನು ಡಾ. ಮಲ್ಲಿಕಾರ್ಜುನವಣೇನೂರು ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಎಂ.ಫಿಲ್, ಪದವಿಗಾಗಿ ಭಾಷಾನಿಕಾಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಲಿ, ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : 8 - 10 - 2005

ಸ್ಥಳ : ಕನ್ನಡ ವಿಶ್ವವಿದ್ಯಾಲಯ, ಹಂಪಿ

ಆರ್.ರಾಜಶೇಖರ
ಸಂಶೋಧಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪರಿವಿಡಿ

ಅಧ್ಯಾಯ - ಒಂದು

ಅಧ್ಯಯನದ ಉದ್ದೇಶ, ಮಹತ್ವ, ವ್ಯಾಪ್ತಿ, ವಿಧಾನ

ಅಧ್ಯಾಯ - ಒಂದು

ಅಧ್ಯಯನದ ಉದ್ದೇಶ, ಮಹತ್ವ, ವ್ಯಾಪ್ತಿ, ವಿಧಾನ

೧.೧ ಪ್ರವೇಶ:

ಸಾಹಿತ್ಯವು ನಿಂತ ನೀರಲ್ಲ. ಅದು ಯಾವಾಗಲೂ ಚಲನಶೀಲವಾಗಿರುತ್ತದೆ. ಪರಿವರ್ತನೆಯೇ ಅದರ ಪ್ರಮುಖ ಲಕ್ಷಣ. ಹಳೆಯ ನೀರನ್ನು ಹೊಸ ನೀರು ಕೊಚ್ಚಿಕೊಂಡೊಯ್ಯುವಂತೆ ಅದು ಕಾಲಕಾಲಕ್ಕೆ ಸೃಷ್ಟಿಯಾಗುತ್ತಾ ಅಂದಿನ ಸಾಮಾಜಿಕ ಚಿತ್ರವನ್ನು, ಸಂಸ್ಕೃತಿಯ ಮಟ್ಟವನ್ನು ಬಿಂಬಿಸುವ ಮಾನವನ ಜೀವನವನ್ನು ಪ್ರತಿಬಿಂಬಿಸುತ್ತದೆ. ಕನ್ನಡ ಸಾಹಿತ್ಯವು ಕೂಡಾ ಇದಕ್ಕೆ ಹೊರತಲ್ಲ. ಹಳೆಗನ್ನಡದಿಂದ ಹೊಸಗನ್ನಡದವರೆಗೆ ಕನ್ನಡ ಸಾಹಿತ್ಯವು ಹಲವು ರೀತಿಯಲ್ಲಿ ಬೆಳೆದು ಬಂದಿದೆ. ಹೊಸಗನ್ನಡ ಸಾಹಿತ್ಯವು ಪ್ರಮುಖವಾಗಿ ನಾಲ್ಕು ಘಟ್ಟಗಳಲ್ಲಿ ವೈವಿಧ್ಯಮಯವಾಗಿ ಬೆಳೆದುಕೊಂಡು ಬಂದಿದೆ. ನವೋದಯ, ನವ್ಯ, ದಲಿತ ಮತ್ತು ಬಂಡಾಯ ಈ ನಾಲ್ಕು ಘಟ್ಟಗಳು ಹುಲುಸಾಗಿ ಬೆಳೆದಿವೆ. ಹೀಗೆ ಸಮೃದ್ಧವಾಗಿ ಬೆಳೆಯಲು ಹಲವಾರು ಸಾಹಿತ್ಯ ಪ್ರಕಾರಗಳು ಕಾರಣವಾಗಿವೆ. ಅವುಗಳಲ್ಲಿ ಕಥಾ ಸಾಹಿತ್ಯವೂ ಕೂಡಾ ಒಂದು ಹೊಸ ಹೆದ್ದಾರಿಯನ್ನೇ ನಿರ್ಮಿಸಿದೆ. ಕನ್ನಡ ಸಾಹಿತ್ಯದಲ್ಲಿ ಆಂಗ್ಲಭಾಷೆಯ Short storyಗೆ ಸಂವಾದಿಯಾಗಿ ಕತೆ ಎಂಬುದಾಗ ಬಳಸಲಾಗುತ್ತಿದೆ. ಕತೆಯು ಅಲ್ಪಕಾಲದಲ್ಲಿ ಓದುಗನಿಗೆ ಅರ್ಥವಾಗುವಂತಹ ಸರಳವಾದ ಭಾಷೆಯಲ್ಲಿ ಘಟನೆಗಳನ್ನು, ವಸ್ತುವಿಷಯಗಳನ್ನು ಹೇಳುವಂತಹ ಕ್ರಮ ಇದಾಗಿದೆ. ಆದುದರಿಂದಲೇ ಇಂತಹ ಕತೆಗಳನ್ನು ಬರೆಯುವುದಕ್ಕೆ ಎಲ್ಲಾರು ತಮ್ಮದೇ ಆದ ಪ್ರಯತ್ನವನ್ನು ಮಾಡಿ, ಯಶಸ್ವಿಯಾಗಿರುವುದನ್ನು ಗುರುತಿಸಬಹುದು. ಹೀಗೆ ಆಧುನಿಕ ಸಾಹಿತ್ಯ ಪ್ರಕಾರಗಳಲ್ಲಿ ಸಣ್ಣಕತೆಯು ಒಂದು. ಇದನ್ನು "ಮೈಯನರ್ ಫಾರ್ಮ್" ಎಂದು ಕರೆಯುತ್ತಾರೆ. ಇಂತಹ ಸಾಹಿತ್ಯ ಪ್ರಕಾರವು ನಾಲ್ಕು ಘಟ್ಟಗಳಲ್ಲಿ ಬೆಳೆದುಕೊಂಡು ಬಂದ ರೀತಿಯನ್ನು ಈ ಕೆಳಗಿನಂತೆ ಕಾಣಬಹುದಾಗಿದೆ.

[illegible]

[illegible]

[illegible]

[illegible]

[illegible]

ನವೋದಯ ಕಾಲದ ಸಂದರ್ಭದಲ್ಲಿ ಕಾವ್ಯ, ಕಾದಂಬರಿ ಮುಂತಾದ ಸಾಹಿತ್ಯ ಪ್ರಕಾರಗಳು ಬೆಳೆದಂತೆ ಸಣ್ಣಕಥಾ ಸಾಹಿತ್ಯ ಬೃಹತ್ತಾಗಿ ಬೆಳೆಯಲಿಲ್ಲ. ಇದಕ್ಕೆ ಕಾರಣವೇನೆಂದರೆ ವಿಸ್ತಾರವಾದ ಬದುಕಿನ ಅನುಭವವುಳ್ಳವರು ತಮ್ಮ ಅನುಭವಗಳನ್ನು ಅಭಿವ್ಯಕ್ತಿಸಲು ಕಥಾ ಪ್ರಕಾರ ಸೂಕ್ತವಲ್ಲವೆಂದು ಭಾವಿಸಿದರು. ಹಾಗೆಂದು ಈ ಪ್ರಕಾರವನ್ನು ನಿರ್ಲಕ್ಷಿಸಿಲ್ಲ. ಕುವೆಂಪು, ಬೇಂದ್ರೆ, ಕಾರಂತ, ಮಾಸ್ತಿ ಮುಂತಾದ ದೊಡ್ಡ ಲೇಖಕರೂ ಕೂಡಾ ಸಣ್ಣಕತೆಗಳನ್ನು ಬರೆದರು. ಅಲ್ಲದೇ ತಮ್ಮ ಲೋಕಾನುಭವವನ್ನು ಅಭಿವ್ಯಕ್ತಿಸಲು ಸಣ್ಣಕತೆಯೇ ಸೂಕ್ತವಾದ ಪ್ರಕಾರವೆಂದು ಭಾವಿಸಿದರು. ಹೀಗಾಗಿ ಮಾಸ್ತಿಯವರನ್ನು "ಸಣ್ಣಕತೆಗಳ ಜನಕ" ಎಂದು ಕರೆಯಲಾಗುತ್ತದೆ.

ವಸಾಹತುಶಾಹಿ ಆಳ್ವಿಕೆ ಪ್ರಾರಂಭವಾದ ಮೇಲೆ ಆಧುನೀಕತೆಯು ಬೆಳೆಯಲಾರಂಭಿಸಿತು. ಇದರ ಪರಿಣಾಮವಾಗಿ ಹೊಸ ಹೊಸ ಆಲೋಚನೆಗಳು ಮೂಡತೊಡಗಿದವು. ಸಂಪ್ರದಾಯ, ಸಮಾಜ, ಸಮುದಾಯಗಳು ಆಧುನೀಕತೆಯೆಡೆಗೆ ಸಾಗಲಾರಂಭಿಸಿದವು. ಇಂತಹ ಅಂಶಗಳನ್ನು ಕುರಿತು ಮಾಸ್ತಿ ಮುಂತಾದ ಲೇಖಕರು ತಮ್ಮ ಕತೆಗಳಲ್ಲಿ ಅಭಿವ್ಯಕ್ತಿಸಿದ್ದಾರೆ.

ಎರಡನೇ ತಲೆಮಾರಿನ ಲೇಖಕರು, ಅಭಿವೃದ್ಧಿಯಾಗುತ್ತಿರುವ ಸಮಾಜದಲ್ಲಿ ವ್ಯಕ್ತಿ ಮತ್ತು ಸಮಾಜದ ಸಂಬಂಧವನ್ನು ಕುರಿತು ಆಲೋಚಿಸಿ ವ್ಯಕ್ತಿ ವಿಶಿಷ್ಟತೆಯನ್ನು ಎತ್ತಿಹಿಡಿದರು. ಇವರ ಸಾಹಿತ್ಯವನ್ನು ಕನ್ನಡದಲ್ಲಿ ನವ್ಯಸಾಹಿತ್ಯ ಎಂದು ಗುರುತಿಸಲಾಗಿದೆ. ಮುಖ್ಯವಾಗಿ ಯು.ಆರ್.ಅನಂತಮೂರ್ತಿ, ಲಂಕೇಶ್, ಚಿತ್ತಾಲ, ಬಿ.ಸಿ.ರಾಮಚಂದ್ರಶರ್ಮ, ಶಾಂತಿನಾಥ ದೇಸಾಯಿ, ಮುಂತಾದ ಕಥಾ ಲೇಖಕರು ನಗರ ಕೇಂದ್ರಿತ, ಒಂಟಿತನ, ಹತಾಶೆ, ನೋವು,ವ್ಯಕ್ತಿ ಪ್ರಜ್ಞೆ ಈ ಮುಂತಾದ ಅಂಶಗಳನ್ನು ತಮ್ಮ ಕತೆಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ಮುಂದುವರೆದಂತೆ ಕನ್ನಡ ಸಾಹಿತ್ಯದಲ್ಲಿ ಬಂಡಾಯ, ದಲಿತ ಸಾಹಿತ್ಯ ಚಳುವಳಿ ಕಾಣಿಸಿಕೊಂಡಿತು, ಬಡವರು, ಅಲಕ್ಷಿತರೂ, ಸಮಾಜದ ತಳ ಅಂಚಿನಲ್ಲಿರುವ, ಮುಂತಾದವರು ಅಕ್ಷರ ಕಲಿತು ಮೊದಲ ಬಾರಿಗೆ ತಮ್ಮ ವಿಶಿಷ್ಟ ಅನುಭವಗಳನ್ನು ಸಾಹಿತ್ಯ ಲೋಕಕ್ಕೆ ಪರಿಚಯಿಸಿದರು. ಈ ಸಾಹಿತ್ಯ ಚಳುವಳಿಯಲ್ಲಿ ದೇವನೂರು ಮಹಾದೇವ, ಕುಂ.ವೀ, ಭಾನುಮುಷ್ತಾಕ್, ಬಿ.ಟಿ.ಲಲಿತಾನಾಯಕ್ ಮುಂತಾದವರು ನಿಕೃಷ್ಟ ಬದುಕನ್ನು ತಮ್ಮ ಕಥಾಲೋಕದ ಮೂಲಕ ಅಭಿವ್ಯಕ್ತಿಸಿ, ಹೊಸ ಸಂವೇದನೆಯನ್ನು ತಂದರು. ಕಥಾ ಸಾಹಿತ್ಯವು ಇವರಿಂದ ಹೊಸ ಆಯಾಮ ಪಡೆಯಿತು. ನಮ್ಮ ಕಾಲದಲ್ಲಿ ಅತ್ಯಂತ ಶ್ರೇಷ್ಟ ಕತೆಗಾರರು ಎನಿಸಿಕೊಂಡಿರುವಂತಹ ಕಥನ ಕಲೆಯಲ್ಲಿ ತನ್ನದೇ ಆದ ವಿಶಿಷ್ಟ ಛಾಪು ಮೂಡಿಸಿ, ಸಶಕ್ತವಾದ ಕಾವ್ಯಾತ್ಮಕ ಗದ್ಯದ ಮಾದರಿಯೊಂದನ್ನು ಸೃಷ್ಟಿಸಿದವರಲ್ಲಿ ರಾಜಶೇಖರ ನೀರಮಾನ್ವಿಯವರು ಅಗ್ರಗಣ್ಯರಾಗಿದ್ದಾರೆ.

ಕಥನ ಕಲೆಯನ್ನು ತನ್ನ ಮುಖ್ಯ ಅಭಿವ್ಯಕ್ತಿ ಮಾಧ್ಯಮವನ್ನಾಗಿ ಬಳಸಿಕೊಂಡ ನೀರಮಾನ್ವಿಯವರು ತಮ್ಮ ಕತೆಗಳಲ್ಲಿ ಅಭಿವ್ಯಕ್ತಿಯಾಗಿರುವ ವ್ಯಕ್ತಿ, ಸಮಾಜ, ನಗರ ಹಳ್ಳಿಯ ಜೀವನ, ತನ್ನತನದ ಹುಡುಕಾಟ, ಭೂಮಾಲೀಕರು, ಮಹಿಳಾಲೋಕ, ಮಕ್ಕಳಲೋಕ, ಗಂಡುಹೆಣ್ಣಿನ ಸಂಬಂಧಗಳು,

ಮಾನವೀಯ ಮೌಲ್ಯಗಳು, ಸಾಮಾಜಿಕ ಶೋಷಣೆ ಈ ಮುಂತಾದ ಅಂಶಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಚರ್ಚೆಗೆ ಒಳಪಡಿಸಲಾಗುತ್ತದೆ.

೧.೨ ಅಧ್ಯಯನದ ಉದ್ದೇಶ

ನವ್ಯ ಕಥಾ ಸಾಹಿತ್ಯದ ಗುಂಗಿನಲ್ಲಿ ಬರೆಯುತ್ತಿದ್ದ ಹಲವು ಕತೆಗಾರರಂತೆ, ರಾಜಶೇಖರ ನೀರಮಾನ್ವಿಯವರು ಕೂಡಾ ಒಬ್ಬರು. ಆದರೆ ಬಂಡಾಯ ಸಾಹಿತ್ಯ ಹಾಗೂ ಸಂಘಟನೆಗಳು ಒಟ್ಟಾಗಿ ಸಾಂಸ್ಕೃತಿಕ ಲೋಕದಲ್ಲಿ ಹೊಸ ಅಲೆ ಪ್ರಾರಂಭವಾದ ಮೇಲೆ ಬರವಣಿಗೆಯನ್ನು ಬದಲಿಸಿಕೊಂಡ ನೀರಮಾನ್ವಿಯವರು ತಮ್ಮ ಕೆಲವು ಕತೆಗಳನ್ನು ಬಂಡಾಯದ ಮಾದರಿಯಲ್ಲಿ ಬರೆಯಲು ಪ್ರಾರಂಭಿಸಿದರು. ಜನ ಸಮುದಾಯಗಳ ಬದುಕಿನ ನೋವು, ಅವಮಾನ, ದಬ್ಬಾಳಿಕೆಗಳು, ಪ್ರೇಮವಿರಸಗಳು, ಮನುಷ್ಯಸಂಬಂಧಗಳು, ಗ್ರಾಮೀಣ ಜನಜೀವನದ ಪರಿಸರ, ಅನ್ಯಾಯ, ಅನೀತಿಗಳನ್ನು ಖಂಡಿಸಿ, ಅವುಗಳನ್ನು ತಮ್ಮ ಕತೆಯ ವಸ್ತುವನ್ನಾಗಿಸಿ, ತಮ್ಮದೇ ಆದ ತಂತ್ರ, ಭಾಷೆ, ಶೈಲಿಯೊಂದಿಗೆ ಬರೆದು ತೋರಿಸಿ ಕನ್ನಡ ಕಥಾ ಸಾಹಿತ್ಯದಲ್ಲಿ ಕಾಣದೇ ಇರುವಂತಹ ಬೇರೊಂದು ಲೋಕವನ್ನು ತೆರೆದು ತೋರಿಸಿದರು. ನೀರಮಾನ್ವಿಯವರು ಕನ್ನಡ ಕಥಾಸಾಹಿತ್ಯ ಲೋಕಕ್ಕೆ "ಹಂಗಿನರಮನೆಯಹೊರಗೆ" "ಕರ್ಪೂರದ ಕಾಯದಲ್ಲಿ" ಎಂಬಂತಹ ಎರಡು ಪ್ರಸಿದ್ಧ ಕಥಾಸಂಕಲನಗಳನ್ನು ಕೊಟ್ಟಿದ್ದಾರೆ. ಇವರ ಕತೆಗಳಲ್ಲಿ ಪ್ರಾದೇಶಿಕ ಭಾಷೆಯ ಸೊಗಡು, ಸ್ಥಳ ನಾಮಗಳ ಇತಿಹಾಸ, ಹಾಗೂ ವೈಶಿಷ್ಟ್ಯಗಳು ನಗರ ಹಳ್ಳಿಯ ಜೀವನ, ವ್ಯಕ್ತಿತ್ವದ ಶೋಧ, ಅಸ್ತಿತ್ವದ ಹುಡುಕಾಟ, ಜೀವನ ಮೌಲ್ಯಗಳು, ಕಥನ ಕ್ರಮ ನಿರೂಪಣೆಯಲ್ಲಿ ತಮ್ಮದೇ ಆದ ಅನುಭವದ ಹಿನ್ನಲೆಯಲ್ಲಿ ಬರವಣಿಗೆಯನ್ನು ರೂಢಿಸಿಕೊಂಡರು. ರಾಜಶೇಖರ ನೀರಮಾನ್ವಿಯವರು ತಮ್ಮ ಕತೆಗಳನ್ನು ಕುರಿತಂತೆ, ವಿಮರ್ಶಕರ ದಿವ್ಯ ನಿರ್ಲಕ್ಷ್ಯದ ನಡುವೆಯೂ ಜೀವಂತವಾಗಿ ಉಳಿಯುವ, ಓದುಗರ ಮನಸ್ಸನ್ನು ತಟ್ಟಿ ನಡುಗಿಸುವ ಶಕ್ತಿ ಇದೆ. ಹೀಗೆ ವಿಮರ್ಶಕರ ನಿರ್ಲಕ್ಷ್ಯಕ್ಕೆ ಒಳಗಾಗಿದ್ದರೂ ಕೂಡಾ ಇವರ ಕತೆಗಳ ವಸ್ತು, ತಂತ್ರ, ಶೈಲಿ, ಭಾಷೆ ಈ ಮುಂತಾದವುಗಳನ್ನು ಹಾಗೂ ನವ್ಯ ಮತ್ತು ದಲಿತ ಬಂಡಾಯ ಸಾಹಿತ್ಯಕ್ಕೆ ಇವರ ಕತೆಗಳು ಹೇಗೆ ಅನ್ವಯವಾಗುತ್ತವೆ ಎಂಬ ಅಂಶಗಳನ್ನು ಕುರಿತು ಅಧ್ಯಯನ ಮಾಡುವುದು ಈ ಪ್ರಬಂಧದ ಮುಖ್ಯ ಉದ್ದೇಶವಾಗಿದೆ.

೧.೩ ಅಧ್ಯಯನದ ಮಹತ್ವ

ರಾಜಶೇಖರ ನೀರಮಾನ್ವಿಯವರು ನವ್ಯ ಕಥಾಸಾಹಿತ್ಯದ ಅಂತ್ಯದಲ್ಲಿ ಹಾಗೂ ಬಂಡಾಯದ ಸಂದರ್ಭದಲ್ಲಿ ಮೂಡಿಬಂದ ಅತ್ಯುತ್ತಮ ಕತೆಗಾರರು. ಇವರು ಹೈದ್ರಾಬಾದ್ ಕರ್ನಾಟಕದ ಭಾಗಕ್ಕೆ ಸೇರಿದವರು. ಇಂತಹ ಹೈದ್ರಾಬಾದ್ ಕರ್ನಾಟಕವು, ಸಾಹಿತ್ಯಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಹೀಗೆ ಎಲ್ಲಾ ಕ್ಷೇತ್ರಗಳಲ್ಲೂ ಹಿಂದುಳಿದಂತಹ ಪ್ರದೇಶವಾಗಿತ್ತು. ಆದರೂ ಕೂಡಾ ಹೈದ್ರಾಬಾದ್ ಕರ್ನಾಟಕವು

ಸಾಹಿತ್ಯಿಕವಾಗಿ ಸಾಂಸ್ಕೃತಿಕವಾಗಿ ತನ್ನದೇ ಆದ ವಿಶಿಷ್ಟತೆಯಿಂದ ಮೆರೆದಂತಹ ಪ್ರದೇಶವಾಗಿದೆ. ನಮ್ಮ ಭಾರತ ದೇಶಕ್ಕೆ ಸ್ವಾತಂತ್ರ್ಯ ಬರುವುದಕ್ಕಿಂತ ಮುಂಚೆ ಈ ಪ್ರದೇಶವು ನಿಜಾಮರ ಆಳ್ವಿಕೆಗೆ ಒಳಪಟ್ಟಿತ್ತು. ಹಾಗಾಗಿ ಈ ಪ್ರದೇಶ ಶೈಕ್ಷಣಿಕವಾಗಿ ಹಿಂದುಳಿದಿತ್ತು. ಕಾರಣವೆಂದರೆ ಇಲ್ಲಿನ ಜನರು ಇಂಗ್ಲೀಷ್ ಶಿಕ್ಷಣದಿಂದ ವಂಚಿತರಾಗಿ, ಉರ್ದುಭಾಷೆಯನ್ನು ಖಡ್ಡಾಯವಾಗಿ ಕಲಿಯಬೇಕೆಂಬ ಒತ್ತಡದ ಪರಿಸರ ನಿರ್ಮಾಣವಾಗಿತ್ತು. ಇಂತಹ ಸಂದರ್ಭದಲ್ಲಿ ಹೈದ್ರಬಾಧ್ ಕರ್ನಾಟಕದ ಭಾಗದಲ್ಲಿ ಸಿದ್ಧಯ್ಯ ಪುರಾಣಿಕ, ಡಿ.ಕೆ.ಭೀಮಸೇನರಾವ್, ಮಾನ್ವಿನರಸಿಂಗರಾಯರಂತವರು ಸಾಹಿತ್ಯ ಕೃಷಿಯಲ್ಲಿ ತೊಡಗಿ ಸಾಹಿತ್ಯದ ವಿವಿಧ ಪ್ರಕಾರಗಳಾದ ಕತೆ, ಕಾದಂಬರಿ ಮೊದಲಾದವುಗಳನ್ನು ಬರೆದು ಇಲ್ಲಿಯ ಸತ್ವವನ್ನು ಎತ್ತಿ ತೋರಿಸಿದರು. ಕ್ರಮೇಣವಾಗಿ ಮುಂದುವರೆಯುತ್ತಾ ಹೈದ್ರಬಾದ್ ಕರ್ನಾಟಕದ ಭಾಗದಲ್ಲಿ ಮಾತ್ರವಲ್ಲದೇ ಇಡೀ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಅತ್ಯಂತ ಶಕ್ತಿಯುತವಾದ, ಮೌಲ್ಯಯುತವಾದ, ಕತೆಗಳನ್ನು ಬರೆಯುವ ಸಾಧ್ಯತೆಯನ್ನು ತೋರಿಸಿದವರು ರಾಜಶೇಖರ ನೀರಮಾನ್ವಿ, ಚೆನ್ನಣ್ಣವಾಲೀಕಾರ, ಜಂಬಣ್ಣ ಅಮರುಚಿಂತಕ ಹಾಗೂ ಇನ್ನಿತರ ಕತೆಗಾರರು. ರಾಜಶೇಖರ ನೀರಮಾನ್ವಿಯವರು ಅರವತ್ತರ ದಶಕದಲ್ಲಿ ಕತೆಗಳನ್ನು ಬರೆಯಲು ಆರಂಭಿಸಿದರು. ಇವರು ನವ್ಯದ ಶೈಲಿಯನ್ನು ಅನುಸರಿಸಿದರೂ, ಬಂಡಾಯದ ಧೋರಣೆಯಲ್ಲಿ ತಮ್ಮ ಕತೆಗಳನ್ನು ಅಭಿವ್ಯಕ್ತಿಸಿದರು.

ಇವರು ತಮ್ಮ ಕತೆಗಳಲ್ಲಿ ಮುಖ್ಯವಾಗಿ ಗ್ರಾಮೀಣ ಜೀವನದ ಘಟನೆಗಳು, ರಾಜಕೀಯ ಬೆಳವಣಿಗೆಗಳು, ವ್ಯವಸ್ಥೆಯು ಅಡಗಿಸಿಕೊಂಡಂತಹ ಕ್ರೂರತೆಗಳು, ಕೆಳವರ್ಗದವರು ಮೂಕವಾಗಿ ಅನುಭವಿಸುವ ಶೋಷಣೆಗಳು ಹೀಗೆ ಬದುಕಿನ ಅನುಭವದ ತೆಕ್ಕೆಗೆ ಸಿಕ್ಕ ಹತ್ತು ಹಲವು ಮಗ್ಗುಲುಗಳ ಚಿತ್ರಣಗಳನ್ನು ತಮ್ಮ ಕತೆಗಳ ಮೂಲಕ ಕಟ್ಟಿ ಕೊಡುವ ಕ್ರಮ ಅಥವಾ ರೀತಿ ವಿಶಿಷ್ಟ ಬಗೆಯದು. ನೀರಮಾನ್ವಿಯವರ ಬರವಣಿಗೆಯಲ್ಲಿ ಆಧುನಿಕ ಬದುಕಿನ ತಲ್ಲಣ, ಮನುಷ್ಯನ ಅಸ್ತಿತ್ವ, ಸಾಮಾಜಿಕ ಸ್ಥಿತ್ಯಂತರ, ಬಿರುಕು ಬಿಟ್ಟ ಬದುಕು, ಹತಾಶೆ, ಮನುಷ್ಯ ಸಂಬಂಧಗಳ ಹುಡುಕಾಟ, ಈ ಹಿನ್ನಲೆಯಲ್ಲಿ ನೀರಮಾನ್ವಿಯವರ ಕಥನ ಕ್ರಮವನ್ನು ಅರ್ಥೈಸುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಕೈಗೊಳ್ಳಲಾಗಿದೆ.

೧.೪ ಅಧ್ಯಯನದ ವ್ಯಾಪ್ತಿ

“ರಾಜಶೇಖರ ನೀರಮಾನ್ವಿಯವರ ಸಣ್ಣಕತೆಗಳು ಸಾಂಸ್ಕೃತಿಕ ಅಧ್ಯಯನ” ಎಂಬ ವಿಷಯದ ಹಿನ್ನಲೆಯಲ್ಲಿ ನೀರಮಾನ್ವಿಯವರ “ಹಂಗಿನರ ಮನೆಯ ಹೊರಗೆ” “ಕರ್ಪೂರದ ಕಾಯದ”ಲ್ಲಿ ಎಂಬ ಕಥಾಸಂಕಲನಗಳನ್ನು ನನ್ನ ಅಧ್ಯಯನದ ಆಕರಗಳನ್ನಾಗಿ ತೆಗೆದುಕೊಳ್ಳಲಾಗಿದೆ. ನೀರಮಾನ್ವಿಯವರು ಸಾಹಿತ್ಯದ ವಿವಿಧ ಪ್ರಕಾರಗಳಾದ ನಾಟಕ, ಅನುವಾದ ಮೊದಲಾದವುಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದು ಅವರ ಇಡಿಯಾದ ಸಾಹಿತ್ಯ ರಚನೆಯನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇದಕ್ಕೆ ಪೂರಕವಾಗಿ ಬಂದತಹ ವಿಮರ್ಶಾ ಲೇಖನಗಳನ್ನು ಕೂಡಾ ಗಮನಿಸಲಾಗಿದೆ.

೧.೫. ಅಧ್ಯಯನದ ವಿಧಾನ

ಆಧುನಿಕ ಕನ್ನಡ ಕತೆಗಳ ಅಧ್ಯಯನಕ್ಕೆ ಅದರದೇ ಆದ ಅಧ್ಯಯನದ ಮಾದರಿ ಇಲ್ಲ, ಆದರೂ ಕೂಡಾ ರಾಜಶೇಖರ ನೀರಮಾನ್ವಿಯವರ ಕತೆಗಳನ್ನು ಅಸ್ತಿತ್ವವಾದದ ಹಿನ್ನಲೆಯಲ್ಲಿ ಗ್ರಹಿಸಬಹುದು. ನವ್ಯದ ಗುಂಗಿನಲ್ಲಿ ಬರೆಯುತ್ತಿದ್ದ ನೀರಮಾನ್ವಿಯವರು ಅಂಬೇಡ್ಕರ್, ಗಾಂಧೀ, ಲೋಹಿಯಾ ಮುಂತಾದವರ ವಿಚಾರಧಾರೆಗಳಿಂದ ತಮ್ಮ ಕತೆಗಳನ್ನು ರಚಿಸಿದ್ದಾರೆ.

ದಲಿತರ ಜೀವನ ವಿಧಾನ, ನೋವು, ನಲಿವು, ದೌರ್ಜನ್ಯಗಳು ಮುಂತಾದ ಅಂಶಗಳು ದಲಿತ ಲೋಕದಲ್ಲಿ ಕಂಡು ಬಂದಿರುವುದನ್ನು ಸೈದ್ಧಾಂತಿಕ ನೆಲೆಯಲ್ಲಿ ಗ್ರಹಿಸಿದ್ದೇನೆ. ಅದೇ ರೀತಿಯದಾಗಿ ಮಹಿಳೆಯರ ಸ್ಥಾನಮಾನಗಳು ನೋವು ನಲಿವುಗಳು ಈ ಮುಂತಾದ ಅಂಶಗಳನ್ನು ಮಹಿಳಾವಾದದ ನೆಲೆಯಲ್ಲಿ ಗ್ರಹಿಸಿದ್ದೇನೆ. ಆ ನಂತರ ನೀರಮಾನ್ವಿಯವರು ತಮ್ಮ ಕತೆಗಳಲ್ಲಿ ಗ್ರಾಮೀಣ ಮತ್ತು ನಗರಗಳ ಸ್ವರೂಪವನ್ನು ರಾಯಚೂರಿನ ಭಾಷೆಯಲ್ಲಿ ಹಿಡಿದಿಟ್ಟಿರುವುದನ್ನು ಗಮನಿಸಬಹುದು. ಈ ಹಿನ್ನೆಲೆಯಲ್ಲಿ ರಾಜಶೇಖರ ನೀರಮಾನ್ವಿಯವರ ಸಣ್ಣಕತೆಗಳು ಸಾಂಸ್ಕೃತಿಕ ಅಧ್ಯಯನವನ್ನು ಮಾಡಲಾಗಿದೆ.

ಅಧ್ಯಾಯ - ಎರಡು

ಇದುವರೆಗಿನ ಅಧ್ಯಯನದ ಸಮೀಕ್ಷೆ

ಅಧ್ಯಾಯ - ಎರಡು

ಇದುವರೆಗಿನ ಅಧ್ಯಯನದ ಸಮೀಕ್ಷೆ

೨.೧. ಪ್ರವೇಶ

ರಾಜಶೇಖರನೀರಮಾನ್ವಿಯವರು ಹೈದ್ರಾಬಾದ್ ಕರ್ನಾಟಕದ ಪ್ರತಿಭಾನ್ವಿತ ಕತೆಗಾರರಲ್ಲಿ ಒಬ್ಬರಾಗಿದ್ದಾರೆ. ಇವರು ನವ್ಯದ ಅಂತಿಮ ಘಟ್ಟದಲ್ಲಿ ಹಾಗೂ ದಲಿತ ಬಂಡಾಯ ಸಾಹಿತ್ಯದ ಆರಂಭದ ಘಟ್ಟದಲ್ಲಿ ಬರುವಂತಹ ಒಬ್ಬ ಶಕ್ತ ಕತೆಗಾರರಾಗಿದ್ದು, ಕನ್ನಡ ಕಥಾ ಸಾಹಿತ್ಯ ಲೋಕಕ್ಕೆ ತನ್ನದೇ ಆದಂತಹ ಕಥಾ ಸಂಕಲನಗಳನ್ನು ಕೊಡುಗೆಯಾಗಿ ನೀಡಿದ್ದಾರೆ. ಅದರಲ್ಲಿ ಹಂಗಿನರಮನೆಯ ಹೊರಗೆ (೧೯೭೮)ರಲ್ಲಿ ಕರ್ಪೂರದ ಕಾಯದಲ್ಲಿ (೧೯೯೦)ರಲ್ಲಿ ಎರಡು ಕಥಾ ಸಂಕಲನಗಳನ್ನು ಹೊರ ತಂದಿದ್ದಾರೆ. ಇವಿಷ್ಟೇ ಕತೆಗಳಿಂದ ಕನ್ನಡದಲ್ಲಿ ಉಳಿಯಬಲ್ಲ ಕತೆಗಾರರಲ್ಲಿ ನೀರಮಾನ್ವಿಯವರು ಒಬ್ಬರು. ಇವರ ಕತೆಗಳಿಗೆ ಸಂಬಂಧಿಸಿದಂತೆ ಅನೇಕ ಲೇಖನಗಳು, ವಿಮರ್ಶೆಗಳು ಬಂದಿರುವುದರಿಂದ ಅವೆಲ್ಲಾವುಗಳನ್ನು ವಿಮರ್ಶಾತ್ಮಕವಾಗಿ ಸಮೀಕ್ಷಿಸಿದ್ದೇನೆ. ಇದರಿಂದ ನನ್ನ ಅಧ್ಯಯನದಲ್ಲಿ ತೊಡಗಿಸಿಕೊಳ್ಳಬೇಕಾದ ಹಾದಿಯನ್ನು ಕಂಡುಕೊಂಡಿದ್ದೇನೆ. ಅಂದರೆ ಕತೆಗಳಲ್ಲಿನ ಮೌಲ್ಯಗಳು, 'ಸಾಮಾಜಿಕ ಕಳಕಳಿ' 'ತನ್ನತನದ ಹುಡುಕಾಟ' 'ಕಲ್ಪನೆ ಮತ್ತು ವಾಸ್ತವಿಕ ಚಿತ್ರಣ'. ಈ ಮುಂತಾದ ಅಂಶಗಳನ್ನು ಈ ಅಧ್ಯಯನದಲ್ಲಿ ಕಂಡುಕೊಂಡು ಅಧ್ಯಯನದ ಸಮೀಕ್ಷೆಯನ್ನು ಮಾಡಲಾಗಿದೆ.

೨.೨. ಈ ಲೇಖನ ಭಾಗದಲ್ಲಿ ಚರ್ಚೆಯಾಗಿರುವಂತಹ ಅಂಶಗಳು

ಡಾ.ದಸ್ತಗೀರ್‌ಸಾಬ್ ದಿನ್ನಿ ಅವರು ಸಂಪಾದಿಸಿರುವ ಜಂಬಣ್ಣಅಮರಚಿಂತಕ ಮತ್ತು ರಾಜಶೇಖರ ನೀರಮಾನ್ವಿ ಸಾಹಿತ್ಯ ಎಂಬ ಸಂಪಾದಿತ ಕೃತಿಯಲ್ಲಿ, ಪ್ರೊ.ಮಲ್ಲಿಕಾರ್ಜುನ ಹಿರೇಮಠರವರು ನೀರಮಾನ್ವಿಯವರ ಕತೆಗಳಲ್ಲಿ ಕಲ್ಪನೆ ಮತ್ತು ವಾಸ್ತವಿಕ ಚಿತ್ರಣ ಎಂಬ ಲೇಖನವನ್ನು ಬರೆದಿದ್ದಾರೆ. ಈ ಲೇಖನದಲ್ಲಿ ಈ ರೀತಿ ತಿಳಿಸುತ್ತಾರೆ.

[illegible]

ಕತೆಗಾರನು ಹೇಳುವಂತಹ ವಿಚಾರಗಳು ಜೀವನಾನುಭವಗಳಿಂದ ಕೂಡಿದವುಗಳಾಗಿದ್ದು. ಇಂತಹ ಅನುಭವಗಳು ಎಷ್ಟೇ ನೈಜವಾಗಿರಲಿ, ವಾಸ್ತವವಾಗಿರಲಿ, ಕತೆಯಲ್ಲಿ ಅವು ಯತಾವತ್ ಆಗಿರದೆ ಕಲ್ಪನೆ ಮತ್ತು ವಾಸ್ತವಾಂಶಗಳಿಂದ ಕೂಡಿರುತ್ತವೆ ಎಂಬುದನ್ನು ಹಿರೇಮಠರು ತಮ್ಮ ಲೇಖನದಲ್ಲಿ ಚರ್ಚಿಸಿದ್ದಾರೆ. ಈ ಮೇಲಿನ ಅಂಶವನ್ನು ಕತೆಗಳ ವಿಶ್ಲೇಷಣೆಯ ಮೂಲಕ ಪರಿಶೀಲಿಸಬಹುದು.

'ಹಂಗಿನರಮನೆಯ ಹೊರಗೆ' ಕತೆಯು ಅಸ್ತಿತ್ವತವಾದದ ಹಿನ್ನಲೆಯಲ್ಲಿ ರಚನೆಯಾಗಿದೆ.ವ್ಯಕ್ತಿಯ ಸ್ವಾತಂತ್ರ್ಯದ ಹಂಬಲ, ತಲ್ಲಣ, ಪ್ರೀತಿ, ಪಾಪಪ್ರಜ್ಞೆ ಈ ಮುಂತಾದ ಅಂಶಗಳಿಂದ ಹೊರತಾಗಿಲ್ಲ. ರೋಗ ಪೀಡಿತನಾಗಿ ಆಸ್ಪತ್ರೆಯಲ್ಲಿ ಹಾಸಿಗೆ ಹಿಡಿದಿರುವ ಕಥಾನಾಯಕನ ಆತ್ಮನಿರೂಪಣೆಯಲ್ಲಿ ಆತ್ಮವಿಮರ್ಶೆ ನಡೆಯುತ್ತದೆ. ವ್ಯವಸ್ಥೆಯ ವಿರುದ್ಧ ತಳೆದಿರುವ ಕಥಾನಾಯಕನ ಮಾನಸಿಕ ಬಂಡಾಯವನ್ನು ಲೇಖನದಲ್ಲಿ ಚರ್ಚಿಸಲಾಗಿದೆ.

ಭಾವನೆ ವಿಚಾರಗಳ ಕೊನೆಯಿಲ್ಲದ ವೃತ್ತದಲ್ಲಿ ಸಿಲುಕಿರುವ ವ್ಯಕ್ತಿಯ ತೊಳಲಾಟದ ಕತೆಯನ್ನು ವೃತ್ತ ಒಳಗೊಂಡಿದೆ. ಅನುಭವದಿಂದ ಮಾಗಿದ ಶಂಕರಪ್ಪಗೌಡನ ವ್ಯಕ್ತಿತ್ವವನ್ನು ಕೇಂದ್ರವಾಗಿಟ್ಟುಕೊಂಡು, ಅವನ ಪ್ರಜ್ಞೆಯ ಮೂಲಕ ಲೇಖಕ ವೃತ್ತ ಕತೆಯನ್ನು ನಿರೂಪಿಸಿದ್ದಾನೆ. ಗ್ರಾಮೀಣ ಪರಿಸರ, ರಜಾಕಾರರ ಹಾವಳಿ, ಹೆಂಡತಿಯ ಸಾವು, ಮಗನ ವರ್ತನೆ, ಸ್ವಾತಂತ್ರ್ಯೋತ್ತರ ಬದುಕಿನ ಚಿತ್ರಣ ಮುಂತಾದ ಅಂಶಗಳನ್ನು ಕುರಿತು ಲೇಖನದಲ್ಲಿ ಚರ್ಚಿಸಿದ್ದಾರೆ.

"ದುರಸ್ತಿ ಕತೆಯು ಕಣ್ಣಿಗೆ ಕಟ್ಟುವಂತಹ ವಾಸ್ತವಾಂಶಗಳಿಂದ ಕೂಡಿದೆ. ಹೊಸ ಬದುಕನ್ನು ಕಟ್ಟಿಕೊಡಬೇಕೆನ್ನುವ ಒಬ್ಬ ಶೋಷಿತನ ತವಕಗಳನ್ನು ಚಿತ್ರಿಸುವ ಕತೆಯಾಗಿದೆ. ಈ ಲೇಖನದಲ್ಲಿ ತಿಮ್ಮನ ಶೋಷಣೆ, ಗಂಗಿ, ನಾಗಮ್ಮ, ಗೌಡರ ವೈಯಕ್ತಿಕ ಬದುಕು, ಸಿಮೆಂಟ್ ಕಳ್ಳಸಾಗಾಣಿಕೆ, ಹುಡುಗಿಯರ ಮಾರಾಟ, ನೈತಿಕ ಅಧಃಪತನ ಮುಂತಾದ ವಾಸ್ತವಾಂಶಗಳನ್ನು ಲೇಖನದಲ್ಲಿ ಕುರಿತು ಚರ್ಚಿಸಲಾಗಿದೆ.

"ಭೂತ" ಕತೆಯಲ್ಲಿ ನಾಯಕನ ಭೂತ ಕಾಲವನ್ನು ಬಗೆಯುತ್ತದೆ. ಇದರಲ್ಲಿ ವರ್ತಮಾನ, ಭೂತಕಾಲ, ವಾಸ್ತವತೆಯ ನಿಗೂಢತೆ, ವಂಶ ಪಾರಂಪರ್ಯ ರಕ್ತ ಸಂಬಂಧದ ಅಂಶಗಳು ಕಂಡು ಬರುತ್ತವೆ. ಕತೆಯಲ್ಲಿ ನಾಯಕ ರಮೇಶನಿಗೆ ಭೂತ ಎರಗುವುದು, ಅದನ್ನು ಬಿಡಿಸಲು ಪೀರಲಹಬ್ಬಕ್ಕೆ ಕರೆದುಕೊಂಡು ಹೋಗುವುದು, ಹೀಗೆ ಮೂಢನಂಬಿಕೆ, ಆಚರಣೆಗಳನ್ನು ಕುರಿತು ಲೇಖನದಲ್ಲಿ ಚರ್ಚಿಸಲಾಗಿದೆ.

"ಬಿಸಿಲುಗುದುರೆ" ಕತೆಯಲ್ಲಿ ಒಂಟಿತನ, ದೇವರು, ಪಾಪಪುಣ್ಯಗಳಂತಹ ಅಂಶಗಳನ್ನು ಈ ಲೇಖನದಲ್ಲಿ ಚರ್ಚಿಸಲಾಗಿದೆ. ನೀರಮಾನ್ವಿಯವರ ಎರಡನೆಯ ಕಥಾ ಸಂಕಲನ "ಕರ್ಪೂರದ ಕಾಯದಲ್ಲಿ" ಹೆಚ್ಚು ಸಮಾಜ ಮುಖಿಯಾಗಿದೆ. ಗ್ರಾಮೀಣ ಬದುಕಿನ ನೆಲೆಗಳು, ಆಧುನಿಕ ಬದುಕಿನ ನೆಲೆಗಳು, ವ್ಯಕ್ತಿಯ ಪ್ರಜ್ಞೆ, ಲೇಖನದಲ್ಲಿ ವಾಸ್ತವಾಂಶಗಳನ್ನು ಕುರಿತು ಚರ್ಚಿಸಲಾಗಿದೆ.

"ನೆಲೆ" ಕತೆಯು ವ್ಯಕ್ತಿ ಕೇಂದ್ರಿತವಾಗಿದೆ. ರಂಗಮ್ಮನ ಶೋಷಣೆ, ಬವಣೆ, ಸೆಣಸಾಟಗಳು, ಗ್ರಾಮೀಣ ಭಾಷೆ, ಅನ್ಯಾಯದ ವಿರುದ್ಧ ಪ್ರತಿಭಟನೆ ಹಾಗೂ ಸಾಮಾನ್ಯ ಜನರ ಬದುಕಿನ ಬರ್ಬರತೆಯನ್ನು ಕುರಿತು ಚರ್ಚಿಸಲಾಗಿದೆ.

"ತಮಂಧ ಕಿರಿದೆನ್ನಬಹುದೇ ಅಯ್ಯಾ" ಇದು ಒಂದು ಪ್ರವಾಸ ಕಥನದಂತಿದೆ. ಇಲ್ಲಿ ಪುಣ್ಯಯಾತ್ರೆ, ಮನುಷ್ಯರ ಕಾಮ, ಮೂಢನಂಬಿಕೆ ಹಾಗೂ ಆಚರಣೆಗಳನ್ನು ಕುರಿತು ಚರ್ಚಿಸಲಾಗಿದೆ.

"ಗುಡಿಯ ನೋಡಿರಣ್ಣಾ" ಕತೆಯಲ್ಲಿ ಮನುಷ್ಯ ಸಂಬಂಧಗಳು ಜಾತಿ ಮತಗಳಿಗಿಂತ ಮುಖ್ಯ ಎಂಬುದನ್ನು ರವಿ ಮತ್ತು ಸುಧಾಳ ಮೂಲಕ ಎತ್ತಿ ಹಿಡಿಯಲಾಗಿದೆ. ಒಟ್ಟಿನಲ್ಲಿ ಈ ಕತೆಯಲ್ಲಿ ಮನುಷ್ಯ ಸಂಬಂಧಗಳನ್ನು ಕುರಿತು ಚರ್ಚಿಸಲಾಗಿದೆ.

"ಎಂಥಾ ಮೋಜಿನ ಕುದುರೆ" ಕತೆಯು ವಿಷಯಾಸಕ್ತ ಲಂಪಟನ ಕತೆಯಾಗಿದ್ದು, ಹಲವಾರು ಹೆಣ್ಣುಗಳೊಂದಿಗೆ ಸಂಬಂಧ ಹೊಂದಿದ್ದ ವಿಜಯ ಲೈಂಗಿಕ ರೋಗಕ್ಕೆ ತುತ್ತಾಗಿ ದುರಂತಕ್ಕೀಡಾಗುತ್ತಾನೆ ಎಂಬುದನ್ನು ಚರ್ಚಿಸಿದ್ದಾರೆ.

"ಬೆತ್ತಲೆ ಸ್ವಾಮಿ" ಕತೆಯಲ್ಲಿ ಸ್ವಾರ್ಥತೆ, ಸಾಮಾಜಿಕತೆ, ರಾಜಕೀಯತೆಯ ಭ್ರಷ್ಟಾಚಾರ ಮುಂತಾದ ಅಂಶಗಳನ್ನು ಕುರಿತು ಚರ್ಚಿಸಲಾಗಿದೆ.

ಹೀಗೆ ನೀರಮಾನ್ವಿಯವರು ಕೆಲವೇ ಕೆಲವು ಕತೆಗಳನ್ನು ಬರೆದೂ ಕನ್ನಡದ ಮುಖ್ಯ ಕತೆಗಾರರಲ್ಲಿ ಒಬ್ಬರಾಗಿ ಪರಿಗಣಿತರಾಗಿದ್ದಾರೆ.

ಡಾ.ದಸ್ತಗೀರ್‌ಸಾಬ್ ದಿನ್ನಿಯವರು ಸಂಪಾದಿಸಿರುವ "ಜಂಬಣ್ಣಅಮರುಚಿಂತಕ ಮತ್ತು ರಾಜಶೇಖರ ನೀರಮಾನ್ವಿಯವರ ಸಾಹಿತ್ಯ" ಎಂಬ ಸಂಪಾದಿತ ಕೃತಿಯಲ್ಲಿ, ಡಾ.ಅಮರೇಶ ನುಗಡೋಣಿಯವರು ವ್ಯಕ್ತಿ ತನ್ನತನದ ಹುಡುಕಾಟ ಎಂಬ ಲೇಖನವನ್ನು ಬರೆದಿದ್ದಾರೆ. ಈ ಲೇಖನದಲ್ಲಿ ಹೀಗೆ ತಿಳಿಸುತ್ತಾರೆ.

ಕನ್ನಡ ಸಣ್ಣಕತೆಗಳ ಸಂದರ್ಭದಲ್ಲಿ ಯಾರೂ ಹೇಳಬೇಕಾದ ಮಾತೆಂದರೆ, ರಾಜಶೇಖರ ನೀರಮಾನ್ವಿ ಶಕ್ತಕತೆಗಾರ. ಕೆಲವೇ ಕತೆಗಳನ್ನು ಬರೆದಿದ್ದರು, ನೆನಪಿನಲ್ಲಿ ಉಳಿಯುವ ಕತೆಗಾರರಾಗಿದ್ದಾರೆ. ಇವರ ಕತೆಗಳನ್ನು ಕುರಿತಾಗಿ 'ವ್ಯಕ್ತಿ ತನ್ನತನದ ಹುಡುಕಾಟ', ಎಂಬ ಅಂಶದ ಆಧಾರದ ಮೇಲೆ ಈ ಲೇಖನವನ್ನು ಕುರಿತು ಚರ್ಚಿಸಿದ್ದಾರೆ.

"ವೃತ್ತ" ಕತೆಯು ಶಂಕರಪ್ಪಗೌಡನ ಪ್ರಜ್ಞೆಯಲ್ಲಿ ಬಿಚ್ಚಿಕೊಳ್ಳುತ್ತಾ ಬೆಳೆಯುತ್ತದೆ. ಗೌಡರು ಸಾಯುವ ಮುನ್ನ ತನ್ನ ಬದುಕಿನ ಅವಲೋಕನ ನಡೆಯುತ್ತದೆ. ನಾಯಿಯ ಸಾವು, ತನ್ನ ಹೆಂಡತಿಯ ನೆನಪು, ಸಮಾಜ ವಿರೋಧಿ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದ ತನ್ನ ಮಗನಿಂದಾಗಿ ಗೌಡರು ಸಾಯುವುದು, ಸ್ವಾತಂತ್ರ್ಯ ಚಳುವಳಿ, ರಚಾಕಾರರ ಹಾವಳಿ, ಕತೆಯಲ್ಲಿ ಹೂ ಅರಳಿದಂತೆ ಬಿಚ್ಚಿಕೊಳ್ಳುತ್ತದೆ ಎಂಬುದನ್ನು ಲೇಖನದಲ್ಲಿ ಪ್ರಮುಖವಾಗಿ ಚರ್ಚಿಸಲಾಗಿದೆ. ಒಟ್ಟಿನಲ್ಲಿ ಕುಟುಂಬ ಸಮಾಜದ ಒಳಗಿರುವ ವ್ಯಕ್ತಿ ಈ ಸಂಸ್ಥೆಗಳಿಗೆ ಮುಖಾಮುಖಿಯಾಗಿ ಶೋಧಿಸಿ ತನ್ನನ್ನು ಗುರುತಿಸಿಕೊಳ್ಳುವ ಕ್ರಿಯೆ ಇಲ್ಲಿ ಕಂಡುಬರುತ್ತದೆ.

"ದುರಸ್ತಿ" ಕತೆಯಲ್ಲಿ ತಿಮ್ಮನಗರದಲ್ಲಿ ಸೈಕಲ್ ರಿಕ್ಷಾ ತುಳಿಯುವ ದುಡಿಮೆಗಾರ. ಜಾತಿ, ಬಡತನ, ದುಡಿಮೆಯಲ್ಲಿ ಯಾವ ವ್ಯತ್ಯಾಸವನ್ನೂ ಕಾಣದವನು. ಅನೈತಿಕ ಸಂಬಂಧ ಹೊಂದಿರುವ ಗಂಗಿಯ ಜೊತೆಯಲ್ಲಿ ತನ್ನತನವನ್ನು ರಕ್ಷಿಸಿಕೊಳ್ಳುವುದು ಸವಾಲಾಗುತ್ತದೆ ಎಂಬಂತಹ ಅಂಶಗಳನ್ನು ಕುರಿತು ಚರ್ಚಿಸಲಾಗಿದೆ.

'ವೃತ್ತ'ಕತೆಯು ಹಳ್ಳಿಗೆ ಸಂಬಂಧಿಸಿದ್ದರೆ, ದುರಸ್ತಿ ಕತೆಯು ನಗರ ಜೀವನಕ್ಕೆ ಸಂಬಂಧಿಸಿದುದಾಗಿದೆ. ಈ ಅಂಶಗಳನ್ನು ಇಲ್ಲಿ ಮುಖ್ಯವಾಗಿ ಲೇಖಕರು ಚರ್ಚೆಗೆ ಎತ್ತಿಕೊಂಡಿದ್ದಾರೆ.

ಕುಟುಂಬ ಸಮಾಜ ಹಾಗೂ ವ್ಯಕ್ತಿಯ ನಡುವಿನ ಅಂತರ್ ಸಂಬಂಧದ ತೀವ್ರಶೋಧ ಭೂತ ಕತೆಯಲ್ಲಿ ಕಾಣುತ್ತೇವೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ. ಈ ಕತೆಯ ನಾಯಕ ರಮೇಶ ವಿದ್ಯಾವಂತ. ಈತ ಹಲವು ಸಂಕಷ್ಟಗಳಲ್ಲಿ ಸಿಕ್ಕುಬೀಳುತ್ತಾನೆ. ಇಂತಹ ಸಂಕಷ್ಟಗಳಿಂದ ಮುಕ್ತನಾಗಬೇಕೆಂದು, ಮಾಡುವಂತಹ ಹೋರಾಟವು ಇಲ್ಲಿ ಪ್ರಮುಖವಾಗಿ ಕಂಡುಬಂದಿದೆ. ದೆವ್ವ, ಭೂತ ಎಂಬಂತಹ ಮೂಢನಂಬಿಕೆಗಳು, ಮೋಹರಂ ಹಬ್ಬಗಳು ಹೀಗೆ ಆಚರಣೆಗಳು ಯಾವ ರೀತಿ ಕಂಡುಬರುತ್ತವೆ ಎಂಬುದನ್ನು ಚರ್ಚಿಸಲಾಗಿದೆ. ಒಟ್ಟಿನಲ್ಲಿ ರಮೇಶನು ತನ್ನ ಅಸ್ತಿತ್ವವನ್ನು ಕಂಡುಕೊಳ್ಳಲು ಪ್ರಯತ್ನಿಸುವುದು ಲೇಖನದಲ್ಲಿ ಚರ್ಚೆಯಾಗಿದೆ.

"ಹಂಗಿನರಮನೆಯ ಹೊರಗೆ" ನವ್ಯ ಕಥಾ ಸಾಹಿತ್ಯದಲ್ಲಿ ಈ ಕತೆಯ ಪಾತ್ರವನ್ನು ಗುರುತಿಸಬಹುದು. ಕತೆಯಲ್ಲಿ ನಾಯಕ ರೋಗ ಪೀಡಿತನಾಗಿರುತ್ತಾನೆ. ಒಬ್ಬ ವ್ಯಕ್ತಿಯಾಗಿ ತನ್ನ ಕುಟುಂಬದಲ್ಲಿ ಅಸ್ತಿತ್ವವನ್ನು ಕಳೆದುಕೊಂಡಿದ್ದಾನೆ. ಇದರ ಹುಡುಕಾಟದಲ್ಲಿಯೇ ಸಾಗಿ ತಾನು ಬದುಕಿರುವಂತಹ ಸಮಾಜವನ್ನು ಹೀಗಳೆಯುತ್ತಾ, ನನ್ನ ಪಾಲಿಗೆ ಸಮಾಜ ಸತ್ತಂತಾಗಿ ಬಿಟ್ಟಿದೆ ಎಂದು ಹೇಳುವಂತಹ ನಾಯಕನ ಮನಸ್ಸಿನ ವಿಚಾರಗಳು ಇಲ್ಲಿ ಪ್ರಮುಖವಾಗಿ ಚರ್ಚೆಯಾಗಿವೆ. ತಿಮ್ಮ ಆಶಾವಾದಿ, ರಮೇಶ ನಿರಾಶವಾದಿ, ರೋಗಿ ಮೌನಿ ಹೀಗೆ ಮೂರು ಕತೆಗಳ ನಾಯಕರ ಗುಣ ಮೌಲ್ಯಗಳನ್ನು ಅಳೆದು ಭೂತ ವರ್ತಮಾನಗಳ ಮುಖಾಮುಖಿಯಾಗಿಸುವ ರೀತಿ ನಡೆದಿದೆ ಎಂಬುದನ್ನು ತಿಳಿಯಬಹುದು.

ಕುಟುಂಬ ಸಮಾಜ ಮತ್ತು ವ್ಯಕ್ತಿಯ ಅಂತರ್‌ಕ್ರಿಯೆಯಲ್ಲಿ ಸಾಗುತ್ತದೆ. ಮನುಷ್ಯತ್ವವನ್ನು ಕಳೆದುಕೊಂಡಾಗ ವ್ಯಕ್ತಿ ತನ್ನತನವನ್ನು ಉಳಿಸಿಕೊಳ್ಳಲು ಹೇಗೆ ಪ್ರಯತ್ನಿಸಲಾಗುತ್ತದೆ ಎಂಬುದನ್ನು ನೆಲೆ ಕತೆಯು ಒಳಗೊಂಡಿದೆ. ರಂಗಮ್ಮ ಈ ಕತೆಯ ನಾಯಕಿ. ಗಂಡ ಮತ್ತು ಅವಳ ತಂದೆ ಬೇರೆಯವರಿಗೆ ಮಾರಿದಾಗ, ತನ್ನತನ ಉಳಿಸಿಕೊಳ್ಳಲು ಸ್ವಾತಂತ್ರ್ಯ ಮತ್ತು ಆಯ್ಕೆಯ ಹಕ್ಕನ್ನು ಪಡೆಯಲು ರಂಗಮ್ಮ ಹೋರಾಟ ನಡೆಸುವ ಪರಿಯನ್ನು ಅವಳ ವ್ಯಕ್ತಿತ್ವವನ್ನು ಈ ಲೇಖನ ಸಮರ್ಥವಾಗಿ ಕಟ್ಟಿಕೊಟ್ಟಿದೆ.

ವ್ಯಕ್ತಿ ಪ್ರಜ್ಞೆ ಕೇಂದ್ರಿತ ಎಂಬ ಅಂಶದ ಆಧಾರದ ಮೇಲೆ ನೀರಮಾನ್ವಿಯವರ ಕಥಾತಂತ್ರವನ್ನು 'ಬಿಸಿಲುಗುದುರೆ', 'ಎಂಥಾ ಮೋಜಿನ ಕುದುರೆ', 'ತಮಂಧ ಕಿರಿದೆನ್ನಬಹುದೇ ಅಯ್ಯಾ' ಎಂಬ ಮೂರು

ಕತೆಗಳನ್ನು ಈ ಲೇಖನದಲ್ಲಿ ಏಕಕಾಲಕ್ಕೆ ಚರ್ಚಿಸಿದ್ದಾರೆ. ಸಮಾಜ, ಸಮೂಹ ಪ್ರಜ್ಞೆಯ ಮೂಲಕ ಕತೆಯನ್ನು ಕಟ್ಟುವ ಆಯಾಮ ಇವರ ಕತೆಗಳಲ್ಲಿದೆ ಎಂದು ತಿಳಿಸುತ್ತಾರೆ.

'ಬೆತ್ತಲೆಸ್ವಾಮಿ', 'ಪ್ರಜಾಪ್ರಭುತ್ವದಲ್ಲಿ ಒಂದು ಸಾವು', 'ಗುಡಿಯ ನೋಡಿರಣ್ಣಾ 'ಕರ್ಪೂರದ ಕಾಯದಲ್ಲಿ' ಈ ಕತೆಗಳಲ್ಲಿ ವ್ಯಕ್ತಿ ಪ್ರಜ್ಞೆಗಿಂತ ಸಮೂಹ ಪ್ರಜ್ಞೆಯನ್ನು ಆಧಾರವಾಗಿಟ್ಟುಕೊಂಡು ಈ ಕತೆಗಳನ್ನು ಲೇಖನದಲ್ಲಿ ಚರ್ಚಿಸಲಾಗಿದೆ.

ನೀರಮಾನ್ವಿಯವರು ಲಂಕೇಶ್, ತೇಜಸ್ವಿ, ಮುಂತಾದವರ ನವ್ಯದ ಜಾಡಿನಿಂದ ಹೊರಬಂದು ಲೋಹಿಯಾ, ಗಾಂಧಿ, ಅಂಬೇಡ್ಕರ್‌ರವರ ಪ್ರಭಾವದಿಂದ ಕತೆಯನ್ನು ಬರೆದರು, ಎಂಬುದು ಗಮನಿಸಬೇಕಾದ ಅಂಶವಾಗಿದೆ. ಒಟ್ಟಾರೆಯಾಗಿ ಸಮಾಜವಾದ, ಮಾನವೀಯತೆ, ಸಾಮಾಜಿಕ ನ್ಯಾಯ, ಶೋಷಣೆ ಅನ್ಯಾಯ ಈ ವಿಚಾರಗಳು ಇವರ ಕತೆಗಳಲ್ಲಿ ಕಾಣಬಹುದು.

ಕನ್ನಡ ಕಥಾ ಸಾಹಿತ್ಯ ಸಂದರ್ಭದಲ್ಲಿ ರಾಜಶೇಖರ ನೀರಮಾನ್ವಿಯವರ ಕಥನ ತಂತ್ರ ವಿಶೇಷವಾದದ್ದು. ಭೂತ ವರ್ತಮಾನಗಳನ್ನು ತೊಡಕಿಲ್ಲದಂತೆ ನಿರ್ವಹಿಸುವುದು, ಸನ್ನಿವೇಶ, ಭಾಷೆಯ ಬಳಕೆ, ಕಾಲದ ಪ್ರಜ್ಞೆ ಈ ಎಲ್ಲಾ ಅಂಶಗಳು ಈ ಲೇಖನದಲ್ಲಿ ಚರ್ಚೆಯಾಗಿರುವಂತಹ ವಿಶೇಷ ಅಂಶಗಳೆಂದು ಗಮನಿಸಬಹುದು.

ಅಲ್ಲಮಪ್ರಭು ಬೆಟ್ಟದೂರುರವರು ಬರೆದಿರುವ ರಾಜಶೇಖರ ನೀರಮಾನ್ವಿ ಹಾಗೂ ಅವರ ಕತೆಗಳು ಎಂಬ ಲೇಖನದಲ್ಲಿ ಈ ರೀತಿ ತಿಳಿಸುತ್ತಾರೆ.

ನೀರಮಾನ್ವಿಯವರು ಕಥಾಸಾಹಿತ್ಯ ಲೋಕಕ್ಕೆ ಎರಡು ಕಥಾ ಸಂಕಲನಗಳನ್ನು ಕೊಡುಗೆಯಾಗಿ ನೀಡಿದ್ದಾರೆ. ಈ ಕತೆಗಾರರು ಧೀರ್ಘ ಮೌನವನ್ನು ತಾಳಿದ್ದರೂ, ಇವರ ಕತೆಗಳು ಮಾತನಾಡುತ್ತಲೇ ಇವೆ. ಪ್ರಜ್ಞಾವಂತರ ವಲಯದಲ್ಲಿ ಇವರು ಕನ್ನಡದ ಅಪರೂಪದ ಕತೆಗಾರರೆಂದು ಗುರುತಿಸಲ್ಪಟ್ಟಿದ್ದರೂ, ವಿಮರ್ಶಕರು ಇವರ ಬಗ್ಗೆ ಏನೂ ಬರೆದಂತಿಲ್ಲ. ಈ ಹಿನ್ನಲೆಯಲ್ಲಿ ಅವರ ಕತೆಗಳ ಪರಿಚಯ ಹಾಗೂ ವಿಶ್ಲೇಷಣೆಯ ಅಗತ್ಯವಿದೆ ಎಂದು ತಿಳಿಸುತ್ತಾರೆ.

"ವೃತ್ತ" ಕತೆಯಲ್ಲಿ ಶಂಕರಪ್ಪಗೌಡ, ಗೌಡಕೀ ಮನೆತನದಲ್ಲಿ ಹುಟ್ಟಿ ತನ್ನ ಹೆಂಡತಿಯ ಸಹಾಯದಿಂದ ಉತ್ತಮ ವ್ಯಕ್ತಿತ್ವ ರೂಪಿಸಿಕೊಂಡವನು. ಇಲ್ಲಿ ಪಾಪಪ್ರಜ್ಞೆ ಮತ್ತು ಸ್ವವಿಮರ್ಶೆಯುಳ್ಳ ವ್ಯಕ್ತಿಯಾಗಿ ಚಿತ್ರಿತನಾಗಿದ್ದಾನೆ. ಇಲ್ಲಿ ವಿಶೇಷವಾಗಿ ನಾಯಿಯ ಸಾಹಸ, ಒಕ್ಕಲು ಮನೆತನದ ಚಿತ್ರಣ, ರಜಾಕಾರರ ಹಾವಳಿ, ಗೌಡನ ಆತ್ಮವಿಮರ್ಶೆ ಗೌಡರ ಮನೆತನದಲ್ಲಿ ಹುಟ್ಟಿದ ಕತೆಗಾರ ಗೌಡಕಿಯನ್ನು ಈ ಕತೆಯಲ್ಲಿ ಪ್ರಶ್ನಿಸುತ್ತಿರುವುದು ಗಮನಾರ್ಹ ಸಂಗತಿಯಾಗಿ ಕಂಡುಬಂದಿದೆ.

"ಭೂತ" ಕತೆಯ ನಾಯಕ ರಮೇಶ ವಿದ್ಯಾವಂತನೆಂದು ಈ ಲೇಖನದ ಆರಂಭದ ಭಾಗದಲ್ಲಿ ತಿಳಿಸಲಾಗಿದೆ. ತನ್ನ ಹಿರಿಯರ ಭೂತಕಾಲದ ಇತಿಹಾಸ ತಿಳಿಯಲು ಹೋಗಿ ತೊಂದರೆಗೆ ಒಳಗಾಗುತ್ತಾನೆ.

[illegible]

ಇಲ್ಲಿ ಆಪತ್ಕಾಲದ ಅಥವಾ ಕೆಟ್ಟದರ ಸಂಕೇತವಾಗಿ ಬೆಕ್ಕುಗಳು ಗುದ್ದಾಡುವದು. ಹಾವು ಇಲಿಯನ್ನು ತಿನ್ನುವುದು ಚರ್ಚಿತವಾಗಿದೆ. ರಮೇಶನಿಗೆ ಭೂತ ಹಿಡಿದಾಗ ಆಯನೂರಿಗೆ ಕರೆದುಕೊಂಡು ಹೋಗುವುದು. ಅಲ್ಲಿ ಒಂದು ಹೆಣ್ಣು ಬಾಡ್‌ಖಾವ್ ಎಂದು ಕರೆಯುವುದು, ಅವಳನ್ನು ಬಾರು ಕೋಲಿನಿಂದ ಹೊಡೆಯುವದು ಹೀಗೆ ಮುಂತಾದ ಅಂಶಗಳು ಚರ್ಚಿತವಾಗಿವೆ.

"ಹಂಗಿನರಮನೆಯ ಹೊರಗೆ" ಈ ಕಥಾ ವಿಶ್ಲೇಷಣೆಯ ಆರಂಭದಲ್ಲಿ ಹಿರಿಯರ ಸರ್ವಾಧಿಕಾರದ ಆಡಳಿತದಲ್ಲಿ ಮಕ್ಕಳು ನಲುಗಿ ಹೋಗುತ್ತಾರೆ. ಅವರಿಗೆ ಸ್ವತಂತ್ರ್ಯವಾಗಿ ಚಿಂತಿಸಿ, ತಮ್ಮ ಬದುಕನ್ನು ರೂಪಿಸಿಕೊಳ್ಳಲು ಹಿರಿಯರು ಹೇಗೆ ಅಡೆತಡೆಯಾಗಿ ಬರುತ್ತಾರೆಂದು ಚರ್ಚಿಸಲಾಗಿದೆ. ಅನಾರೋಗ್ಯದಿಂದ ಬಳಲುತ್ತಿದ್ದರೂ, ಇಲ್ಲಿಯ ನಾಯಕನ ಚಿಂತನೆ ಆರೋಗ್ಯ ಪೂರ್ಣವಾಗಿದೆ. ಈ ಹಿಂದೆ ಚರ್ಚಿಸಲಾದ ಎರಡೂ ಲೇಖನಗಳಿಗಿಂತ ತುಂಬಾ ವಿಶೇಷವಾಗಿ ಈ ಲೇಖನದಲ್ಲಿ ವಿಶ್ಲೇಷಣೆ ನಡೆಸಲಾಗಿದೆ. ಇನ್ನುಳಿದಂತೆ ಸ್ವಾತಂತ್ರ್ಯ, ಸಮಾಜದ ಬಗ್ಗೆ ಆಕ್ರೋಶ, ತನ್ನ ಹೆಂಡತಿ, ತನ್ನ ಪ್ರೇಮಿಯ ಬಗ್ಗೆ ಈ ಲೇಖನದಲ್ಲಿ ತುಂಬಾ ಅರ್ಥಪೂರ್ಣವಾಗಿ ಚರ್ಚೆಯಾಗಿದೆ.

'ದುರಸ್ತಿ' ಕತೆಯು ತಿಮ್ಮನ ಸುತ್ತ ಸುತ್ತುತ್ತಾ ನಡೆಯುತ್ತದೆ. ತಿಮ್ಮನ ರಕ್ತ ಸಂಬಂಧಿಕರು, ತಿಮ್ಮನ ಹುಟ್ಟು ಇತ್ಯಾದಿ ಅಂಶಗಳನ್ನು ಈ ಕಥಾ ಅನ್ವೇಷಣೆಯಲ್ಲಿ ಕಾಣಬಹುದು.

ತಿಮ್ಮ ತಾನು ಪ್ರೀತಿಸಿದ ಗಂಗಿಯನ್ನು ಮದುವೆಯಾಗಲು ಬಯಸಿ ಅದರಿಂದ ಕೈಸುಟ್ಟುಕೊಳ್ಳುತ್ತಾನೆ. ತನ್ನ ತಂಗಿಯು ಕೂಡಾ ತಿಮ್ಮನ ನಂಬಿಕೆಗೆ ದ್ರೋಹವನ್ನು ಬಗೆಯುವ ಅಂಶವನ್ನು ಈ ಲೇಖನ ತಿಳಿಸುತ್ತದೆ.

'ಬಿಸಿಲುಗುದುರೆ' ಕಥಾ ನಾಯಕನ ವಿಶ್ಲೇಷಣೆಯಲ್ಲಿಯೇ ಸಾಗುತ್ತದೆ. ವ್ಯಕ್ತಿಯ ಜೀವನದಲ್ಲಿ ಯಾವಾಗಲೂ ನೇರವಾಗಿ, ದಿಟ್ಟವಾಗಿ ಇರಬೇಕು. ಅದು ಒಳ್ಳೆಯ ವಿಚಾರವೇ ಆಗಿರಲಿ, ಕೆಟ್ಟ ವಿಚಾರವೇ ಆಗಿರಲಿ, ರಾಮನ್‌ರಾಘವನಂತೆ ಇರಬೇಕು ಎಂದು ಇಲ್ಲಿ ಚರ್ಚೆಯಾಗಿರುವ ಪ್ರಮುಖ ಅಂಶ. ದೇವರು, ಒಂಟಿತನ, ಪ್ರೀತಿ, ಕೊಂಕುನುಡಿಗಳು, ವ್ಯಂಗ್ಯನೋಟ, ಕತೆಗಾರನ ಒಳನೋಟ ಈ ಎಲ್ಲಾ ಅಂಶಗಳನ್ನು ಲೇಖನ ಪ್ರತಿಬಿಂಬಿಸುತ್ತದೆ.

'ತಮಂಧ ಕಿರಿದೆನ್ನಬಹುದೇ ಅಯ್ಯಾ' ಕಥಾನಾಯಕ ತೀರ್ಥಯಾತ್ರೆಗೆ ಹೋಗುವದು. ಈ ತೀರ್ಥಯಾತ್ರೆಯ ಸಾಧಕ ಬಾದಕಗಳು ತನ್ನ ಗಂಡ ಹೆಂಡತಿಯನ್ನು ನೀರಿಗೆ ದೂಕಿ ಬೇರೆಯವರ ಜೊತೆ ಸಂಬಂಧ ಇಟ್ಟುಕೊಂಡಿರುವುದು, ಭಿಕ್ಷುಕರು, ಕುಷ್ಟರೋಗಿಗಳು ಈ ಮುಂತಾದವುಗಳ ಚಿತ್ರಣ ನಾವು ಇಲ್ಲಿ ಕಾಣುತ್ತೇವೆ. 'ಬೆತ್ತಲೆಸ್ವಾಮಿ' ಇಲ್ಲಿ ಪವಾಡ ಪುರುಷನಾಗಿದ್ದಾನೆ. ಬೆತ್ತಲೆಸ್ವಾಮಿಯನ್ನು ನಂಬಿದವರು ಅಥವಾ ಪೂಜಿಸಿದವರು ಯಾವ ಯಾವ ಉಪಯೋಗಗಳನ್ನು ಪಡೆದುಕೊಳ್ಳುತ್ತಾರೆ ಎಂಬಂತಹ ಅಂಶಗಳನ್ನು ಇಲ್ಲಿ ಪ್ರಮುಖವಾಗಿ ಗುರುತಿಸುತ್ತೇವೆ.

'ಪ್ರಜಾಪ್ರಭುತ್ವದಲ್ಲಿ ಸಾವು' ಆರಂಭದಲ್ಲಿ ಒಬ್ಬ ವ್ಯಕ್ತಿಯು ವಿಷ ಕುಡಿದಿದ್ದರಿಂದ ಅವನನ್ನು ಆಸ್ಪತ್ರೆಗೆ ಸೇರಿಸುವುದು, ಆ ವ್ಯಕ್ತಿಯ ಸಾವು, ಈತನ ಹೆಂಡತಿಯ ಭೇಟಿ, ಪುರಸಭೆಯ ಅಧ್ಯಕ್ಷನ ಮಗನ ಸಾವು, ಕ್ರೂರವಾದ ಸಮಾಜ ಇಂತಹ ಅಂಶಗಳು ಇಲ್ಲಿ ಚರ್ಚೆಯಾಗಿವೆ.

ಗುಡಿಯ ನೋಡಿರಣ್ಣಾ ಈ ಕತೆಯಲ್ಲಿ ಸಾಂಪ್ರದಾಯಿಕ ವಿವಾಹದ ಮಹತ್ವ, ಅಂತರ್ ಜಾತಿಯ ವಿವಾಹ, ಕುಟುಂಬದವರು ಸುಧಾಳನ್ನು ಮೆಚ್ಚಿಕೊಳ್ಳುವ ಪರಿ, ಮನುಷ್ಯ ಸಂಬಂಧಗಳು ಇಲ್ಲಿ ಗುರುತಿಸುವಂತಹ ಅಂಶಗಳಾಗಿವೆ. 'ಎಂಥಾ ಮೋಜಿನ ಕುದುರೆ' ಆಧುನಿಕ ದಾಂಪತ್ಯದ ವಿಶ್ಲೇಷಣೆಯನ್ನು ಇಲ್ಲಿ ಕಾಣುತ್ತೇವೆ. ವಿಜಯ ಮತ್ತು ರೇಖಾಳ ದಾಂಪತ್ಯ ಜೀವನ, ಅವರ ಸಮಸ್ಯೆಗಳು, ವಿಜಯನಿಗೆ ಇದ್ದಂತಹ ಲೈಂಗಿಕ ರೋಗ, ವಿಜಯನ ಸಾವು ಹೀಗೆ ಈ ವ್ಯಕ್ತಿಯ ಸುತ್ತಲೂ ಈ ಕತೆಯು ನಿರೂಪಿತವಾಗಿದೆ ಎಂಬುದನ್ನು ಈ ಲೇಖನ ತಿಳಿಸುತ್ತದೆ.

'ನೆಲೆ' ಇಲ್ಲಿ ರಂಗಮ್ಮನಾಯಕಿ ತಾನು ಬದುಕಿರುವಂತಹ ಸಮಾಜವನ್ನು ಎದುರಿಸುವುದು. ತನ್ನ ಅಸ್ತಿತ್ವ ಕಂಡುಕೊಳ್ಳಲು ಪ್ರಯತ್ನಿಸುವುದು ರಂಗಮ್ಮನ ದಿಟ್ಟ ಹೋರಾಟ ಈ ಅಂಶಗಳಿಂದ ಹೊರತಾಗಿಲ್ಲ. "ಕರ್ಪೂರದ ಕಾಯದಲ್ಲಿ ಬೆಂಕಿಯುಸಿರಾಟ" ಈ ಲೇಖನ ಭಾಗವು ಭಾಷಾಚಳುವಳಿ ರೈತ ಚಳುವಳಿಯ ಹಿನ್ನಲೆಯಲ್ಲಿ ಚರ್ಚಿತವಾಗಿದೆ.

೨.೩. ಈ ಲೇಖನ ಭಾಗದಲ್ಲಿ ಚರ್ಚೆಯಾಗದಿರುವಂತಹ ಅಂಶಗಳು

ಡಾ.ಮಲ್ಲಿಕಾರ್ಜುನ ಹಿರೇಮಠರವರು ರಾಜಶೇಖರ ನಿರಮಾನ್ವಿಯವರ ಕತೆಗಳ ಮೇಲೆ "ಕಲ್ಪನೆ ಮತ್ತು ವಾಸ್ತವಿಕ ಚಿತ್ರಣ" ಎಂಬ ಲೇಖನವನ್ನು ಬರೆದಿದ್ದಾರೆ. ಈ ಲೇಖನದಲ್ಲಿ ಸಮಸ್ತ ಕಥಾ ಸಂಕಲನದ ಬಗ್ಗೆ ಚರ್ಚೆಯಾಗದೇ ಕೆಲವು ಅಂಶಗಳನ್ನು ಆಧಾರವಾಗಿಟ್ಟುಕೊಂಡು ಚರ್ಚೆ ಮಾಡಲಾಗಿದೆ. ಇದರಲ್ಲಿ ಕೈ ಬಿಟ್ಟು ಹೋಗಿರುವಂತಹ ಅಂಶಗಳನ್ನು ನನ್ನ ಅನಿಸಿಕೆಯಲ್ಲಿ ವ್ಯಕ್ತಪಡಿಸಲು ಮುಂದಾಗಿದ್ದೇನೆ. 'ಹಂಗಿನರಮನೆಯ ಹೊರಗೆ' ಕತೆಯು, ಕಥಾನಾಯಕನ ಪ್ರಜ್ಞೆಯಲ್ಲಿ ಸಾಗಿದೆ. ಆತನಿಗೆ ಸಹಾಯವನ್ನು ಮಾಡಿದಂತಹ ತನ್ನ ತಮ್ಮ ಹಾಗೂ ಸ್ನೇಹಿತನನ್ನು ವಿಶೇಷವಾಗಿ ಈ ಲೇಖನದಲ್ಲಿ ವ್ಯಕ್ತಪಡಿಸಲಾಗಿಲ್ಲ. ತನ್ನ ಹೆಂಡತಿಯು ಆತನ ಬಗ್ಗೆ ಅನುಕಂಪತೋರಿದಾಗ, ಈಕೆಯ ನಿಜವಾದ ರೂಪವೇನು ಎಂಬುದನ್ನು ಹಾಗೂ ತನ್ನ ಪ್ರೇಯಸಿ ಕಿರಣಳು ಮಾಡುವಂತಹ ಉಪಚಾರವನ್ನು ಈ ಲೇಖನ ವಿಶೇಷವಾಗಿ ಬಿಚ್ಚಿಕೊಡಲು ಸಾಧ್ಯವಾಗಿಲ್ಲ. ಒಟ್ಟಾರೆಯಾಗಿ ನಾಲ್ಕು ಕೋಣೆಗಳ ಮಧ್ಯ ನಡೆಯುವಂತಹ ಕೌಟುಂಬಿಕ ವಿಚಾರಗಳಿಗೆ ಮಾತ್ರ ಸೀಮಿತವಾಗಿದೆ ಎಂದು ಹೇಳಬಹುದು.

'ವೃತ್ತ' ಕತೆಯಲ್ಲಿ ಕೇವಲ ಶಂಕರಪ್ಪ ಗೌಡನನ್ನು ಮಾತ್ರ ಕೇಂದ್ರವಾಗಿಟ್ಟುಕೊಂಡು ಈ ಲೇಖನ ಸಾಗಿದೆ. ಈ ಕತೆಯಲ್ಲಿ ಬರುವಂತಹ ದಲಿತರು, ಮಕ್ಕಳು, ಮಹಿಳೆಯರು, ಕೂಲಿಕಾರ್ಮಿಕರು, ಆಳುಗಳು ಈ ಮುಂತಾದ ಅಂಶಗಳಿಂದ ಈ ಲೇಖನ ಹೊರತಾಗಿ ರಚನೆಯಾಗಿದೆ. ಅದೇ ರೀತಿಯದಾಗಿ 'ದುರಸ್ತಿ'ಕತೆಯಲ್ಲಿ ಕಥಾ ನಾಯಕ ತಿಮ್ಮ ಆತನ ಸುತ್ತಲೂ ಈ ಲೇಖನ ಪ್ರತಿಬಿಂಬಿತವಾಗಿದೆ. ಗಂಗಿ,

ನಾಗಮ್ಮ, ಗೌಡರ ವೈಯಕ್ತಿಕ ಚಿತ್ರಣವನ್ನು, ಇಲ್ಲಿ ಕಾಣಲು ಸಾಧ್ಯವಾಗಿಲ್ಲ. ತಿಮ್ಮನ ಕಷ್ಟ, ನೋವು, ಈ ಲೇಖನದಲ್ಲಿ ಸಂಪೂರ್ಣವಾಗಿ ಚಿತ್ರಿತವಾಗಿಲ್ಲ.

'ಭೂತ' ರಮೇಶನ ಸುತ್ತ ನಡೆಯುವಂತಹ ಒಂದು ಕತೆಯಾಗಿದೆ. ಇದರಲ್ಲಿ ಬರುವಂತಹ ಬ್ರಾಹ್ಮಣರು, ಮ್ಯಾಳೂರು ಗೌಡತಿ, ಆಳುಗಳು, ಬೇಟೆಯ ವಿಷಯಗಳಿಂದ ಹೊರತಾಗಿ ರಚನೆಯಾಗಿದೆ. ಈ ಲೇಖನದಲ್ಲಿ ಇಂತಹ ಅಂಶಗಳು ಬಿಟ್ಟುಹೋಗಿವೆ. "ಬಿಸಿಲುಗುದುರೆ" ಕತೆಯ ಪ್ರಸ್ತಾಪ ಈ ಲೇಖನದಲ್ಲಿ ಅಷ್ಟಾಗಿ ಕಂಡುಬರುವುದಿಲ್ಲ.

ಇವರ ಎರಡನೆಯ ಕಥಾಸಂಕಲನ ಕರ್ಪೂರದ ಕಾಯದಲ್ಲಿ 'ನೆಲೆ' ಕತೆಯಲ್ಲಿ ಗ್ರಾಮೀಣರ ಜೀವನ ರಂಗಮ್ಮನ ಪರಿಸರ, ರಂಗಮ್ಮನ ತಂದೆಯ ಹಿನ್ನಲೆ, ಇಂತಹ ಅಂಶಗಳನ್ನು ವ್ಯಕ್ತಪಡಿಸಲು ಈ ಲೇಖನದಲ್ಲಿ ಸಾಧ್ಯವಾಗಿಲ್ಲ. "ತಮಂಧ ಕಿರಿದೆನ್ನಬಹುದೇ ಅಯ್ಯಾ" ಲೇಖನದಲ್ಲಿ ಕಥಾ ನಾಯಕನ ಬಗ್ಗೆ ಹೆಚ್ಚಿನ ವಿವರಗಳು ಹೇಳಿಲ್ಲ. ಇದು ಒಂದು ಪ್ರವಾಸ ಕಥನದಂತೆ, ಆದರೂ ಕೂಡಾ ದೇವರು, ದಿಂಡಿರು ಎಂದು ಮೂಢನಂಬಿಕೆಗಳಿಂದ ಹೊರತಾಗಿಲ್ಲ ಇದು ಕಲ್ಪನಾತೀತವಾಗಿ ರಚನೆಯಾಗಿದೆ. "ಕರ್ಪೂರದ ಕಾಯದಲ್ಲಿ" ನಮ್ಮ ಜ್ವಲಂತ ಸಮಸ್ಯೆಯಾದ ಮರಾಠಿ ಕನ್ನಡ ಚಳುವಳಿ, ರೈತ ಚಳುವಳಿಗಳ ಬಗ್ಗೆ ವಿಚಾರದ ಪ್ರತಿಪಾದನೆಯಲ್ಲಿ ಈ ಲೇಖನ ತುಂಬಾ ಕೊರತೆಯಿಂದ ಕೂಡಿದೆ.

'ಗುಡಿಯ ನೋಡಿರಣ್ಣಾ' ಈ ಕತೆಯಲ್ಲಿ ರವಿಯ ಅತ್ತೆಯ ಬಗ್ಗೆ ಅಷ್ಟಾಗಿ ಮಾಹಿತಿಯನ್ನು ಒಳಗೊಂಡಿಲ್ಲ. ಮನುಷ್ಯ ಸಂಬಂಧಗಳು, ಜಾತಿ-ಮತ ಮುಂತಾದವುಗಳ ಬಗ್ಗೆ ಪರಿಚಯಾತ್ಮಕ ಮಾಹಿತಿ ಮಾತ್ರ ಇಲ್ಲಿ ನೀಡಲಾಗಿದೆ. ಕತೆಯ ಭಾಗವಾದಂತಹ ಸಿನಿಕತನ, ವ್ಯಂಗ್ಯ ಮುಂತಾದ ಅಂಶಗಳಿಂದ ಹೊರತಾಗಿ ರಚನೆಯಾಗಿದೆ. 'ಎಂಥಾ ಮೋಜಿನ ಕುದುರೆಯಲ್ಲಿ' ಕಥಾನಾಯಕನ ಬಗ್ಗೆ ಮಾಹಿತಿಯನ್ನು ನೀಡದೇ ಅವನು ದುರಂತಕ್ಕೀಡಾಗುವ ವಿಷಯವನ್ನು ಮಾತ್ರ ಪ್ರಸ್ತಾಪಿಸಲಾಗಿದೆ. ಬೆತ್ತಲೆ ಸ್ವಾಮಿಯ ಪ್ರಭಾವದಿಂದ ಎಂತಹ ಅನುಕೂಲಗಳು ಒದಗಿಬರುತ್ತವೆ ಎಂಬುದನ್ನು ಈ ಲೇಖನ ಭಾಗ ಚಿತ್ರಿಸಲು ಅಸಹಾಯಕವಾಗಿ ಕೊರತೆಯಿಂದ ಕಾಣುತ್ತಿದೆ. ಈ ಎಲ್ಲಾ ಅಂಶಗಳು ಲೇಖನದಲ್ಲಿ ಚರ್ಚೆಯಾಗಿದ್ದರೆ. ಇನ್ನೂ ಕಥೆಯ ನೋಡುಗರಿಗೆ ಉತ್ತಮವೆನಿಸುತಿತ್ತು.

ಡಾ. ಅಮರೇಶ ನುಗಡೋಣಿಯವರು -"ವ್ಯಕ್ತಿತನ್ನತನದಹುಡುಕಾಟ" ಎಂಬ ಶೀರ್ಷಿಕೆಯನ್ನಿಟ್ಟುಕೊಂಡು ಈ ಲೇಖನ ಪ್ರಕಟವಾಗಿದೆ. ಈ ಲೇಖನದಲ್ಲಿಯು ಕೂಡಾ ಕತೆಯಲ್ಲಿ ಬರುವಂತಹ ಕೆಲವು ಅಂಶಗಳು ಬಿಟ್ಟು ಹೋಗಿವೆ. ಅವುಗಳನ್ನು ಈ ಮುಂದಿನಂತೆ ನನ್ನ ಅನಿಸಿಕೆಯಲ್ಲಿ ವ್ಯಕ್ತಪಡಿಸುತ್ತಿದ್ದೇನೆ. ವೃತ್ತ ಕತೆಯು ಶಂಕರಪ್ಪಗೌಡನ ಪ್ರಜ್ಞೆಯಲ್ಲಿ ಬಿಚ್ಚಿಕೊಳ್ಳುತ್ತಾ ಬೆಳೆಯುತ್ತದೆ. ಬೇರೆ ಪಾತ್ರಗಳ ಪ್ರಸ್ತಾಪ ಇಲ್ಲಿ ಕಂಡುಬಂದಿಲ್ಲ. ಸಮಾಜದಲ್ಲಿ ಗೌಡರಿಗೆ ವಿಶೇಷವಾದ ಮರ್ಯಾದೆಯನ್ನು ನೀಡುತ್ತಾರೆ. ಅದಕ್ಕೆ ಕಾರಣವಾಗುವಂತಹ ಅಂಶಗಳು ಇದರಲ್ಲಿ ಚರ್ಚಿತವಾಗಿಲ್ಲ.

'ದುರಸ್ತಿ' ಕತೆಯಲ್ಲಿ ತಿಮ್ಮ ತಾನು ಯಾವ ಜಾತಿಗೆ ಸೇರಿದವನು ಎಂಬ ವಿಷಯದ ಕಡೆಗೆ ಈ ಲೇಖನ ಚರ್ಚಿತವಾಗಿಲ್ಲ. ಹೆಣ್ಣುಗಳನ್ನು ಸಾಗಿಸುವುದು, ಸೂಳೆಪದ್ಧತಿ, ಅನೈತಿಕ ಸಂಬಂಧಗಳನ್ನು

ವಿವರವಾಗಿ ಚರ್ಚಿಸಲು ಈ ಲೇಖನ ವಿಫಲವಾಗಿದೆ. 'ಭೂತ' ಕತೆಯಲ್ಲಿ ರಮೇಶ ನಾಯಕನಾಗಿರುತ್ತಾನೆ. ಇಂತಹ ರಮೇಶನ ವಂಶ ಸಂಬಂಧ, ಪಾಳೆಗಾರಿಕೆಯ ಸಂಪ್ರದಾಯ, ಭೂತ ಬಿಡಿಸುವ ಅಂಶಗಳು ಈ ಲೇಖನ ಭಾಗದಲ್ಲಿ ಕಂಡುಬರುವುದಿಲ್ಲ.

'ಹಂಗಿನರಮನೆಯ ಹೊರಗೆ' ಎಂಬ ಲೇಖನವು ಕಥಾನಾಯಕನ ಆಂತರಿಕ ಮೌಲ್ಯಗಳನ್ನು ಪ್ರತಿಪಾದಿಸಲು ಕೊರತೆಯನ್ನು ಎದುರಿಸಿದೆ. ತಾನು ದ್ವೇಷಿಸುತ್ತಿರುವ ಸಮಾಜ ಬಂಧು ಬಳಗ, ಮುಂತಾದವುಗಳ ಬಗ್ಗೆ ಕೇವಲ ಪರಿಚಯ ಮಾತ್ರ ಲೇಖನ ಭಾಗದಲ್ಲಿ ಕಾಣಬಹುದು. ವ್ಯಕ್ತಿ ತನ್ನತನವನ್ನು ಉಳಿಸಿಕೊಳ್ಳಲು ಸಮಾಜದಲ್ಲಿ ಯಾವ ರೀತಿಯದಾಗಿ ಹೋರಾಟ ಮಾಡಬೇಕು ಎಂಬುದರ ಬಗ್ಗೆ ರಂಗಮ್ಮನ ಪಾತ್ರದ ಮೂಲಕ ತಿಳಿಸಲಾಗಿದೆ. ರಂಗಮ್ಮ ಅನಾಹುತಗಳಿಗೆ ಸಿಕ್ಕಿಬಿದ್ದು ಅವುಗಳಿಂದ ಹೊರ ಬರುವಂತಹ ಅಂಶವನ್ನು ಮಾತ್ರ ಇಲ್ಲಿ ಚರ್ಚಿಸಲಾಗಿದೆ.

ವ್ಯಕ್ತಿ ಪ್ರಜ್ಞೆ ಕೇಂದ್ರಿತ ಎಂಬ ಅಂಶದ ಆಧಾರದ ಮೇಲೆ ರಚನೆಯಾಗಿರುವ ಬಿಸಿಲುಗುದುರೆ, ಎಂಥಾಮೋಜಿನಕುದುರೆ, ಹಾಗೂ ತಮಂಧ ಕಿರಿದೆನ್ನಬಹುದೇ ಅಯ್ಯಾ ಈ ಕತೆಗಳಲ್ಲಿನ ನಾಯಕರು ದುರ್ಬಲರಾಗಿ ತಮ್ಮ ಎದುರಾಳಿಗಳಿಂದ ಸೋಲನ್ನು ಒಪ್ಪಿಕೊಳ್ಳುವ ಪರಿಯನ್ನು ಈ ಲೇಖನದಲ್ಲಿ ಹೇಳಿಕೆಯ ರೂಪದಲ್ಲಿ ಮಾತ್ರ ಪ್ರಸ್ತಾಪವಾಗಿದೆ. ಅದೇ ರೀತಿಯದಾಗಿ ಇವರ ಇನ್ನುಳಿದ ಕತೆಗಳ ಲೇಖನದಲ್ಲಿ ಸಮೂಹ ಕೇಂದ್ರಿತ ಪ್ರಜ್ಞೆಯಿಂದ ರಚನೆಯಾಗಿದೆ ಎಂದು ಹೇಳಿ ಅದು ಹೇಗೆ ಎಂಬುದನ್ನು ಚರ್ಚಿಸಲು ವಿಫಲವಾಗಿದೆ.

ಅಲ್ಲಮ ಪ್ರಭು ಬೆಟ್ಟದೂರರು 'ನೀರಮಾನ್ವಿ ಹಾಗೂ ಅವರ ಕತೆಗಳು' ಎಂಬ ಲೇಖನವನ್ನು ಪ್ರಕಟಪಡಿಸಿದ್ದಾರೆ. ಈ ಲೇಖನದಲ್ಲಿ ಕತೆಗಳ ಬಗ್ಗೆ ವಿಶ್ಲೇಷಣೆಯನ್ನು ಮಾತ್ರ ಕಾಣಬಹುದು. ವೃತ್ತ ಕತೆಯು ಈ ಹಿಂದಿನ ಲೇಖನಗಳಲ್ಲಿ ಶಂಕರಪ್ಪಗೌಡನ ಪ್ರಜ್ಞೆಯಲ್ಲಿ ಬಿಚ್ಚಿಕೊಳ್ಳುತಿತ್ತು. ಆದರೆ ಈ ಲೇಖನ ಮಾತ್ರ ಕತೆಯಲ್ಲಿ ಬರುವಂತಹ ಎಲ್ಲಾ ಪಾತ್ರಗಳ ಮೇಲೆ ವಿಶೇಷವಾದ ಬೆಳಕನ್ನು ಚೆಲ್ಲಿದೆ. ಆದರೆ ಇದು ವಿಮರ್ಶಾತ್ಮಕವಾಗಿ ಇರದೆ, ಕತೆಯ ರೂಪದಲ್ಲಿರುವುದನ್ನು ಕಾಣಬಹುದು.

ಹಂಗಿನರಮನೆಯ ಹೊರಗೆ ಈ ಹಿಂದಿನ ಎರಡು ಲೇಖನಗಳಲ್ಲಿ ಚರ್ಚೆಯಾಗಿರುವಂತಹ ವಿಷಯವನ್ನು ಪ್ರಸ್ತಾಪಿಸಿದೆ. ತನ್ನ ಹೆಂಡತಿ, ಪ್ರೇಯಸಿಯ ಬಗ್ಗೆ ಮಾಹಿತಿಯನ್ನು ನೀಡಲು ವಿಫಲವಾಗಿದೆ. ದುರಸ್ತಿ ಕತೆಯಲ್ಲಿ ತಿಮ್ಮ ನಾಯಕ ಈತನ ತಾಯಿಯೂ ಊರಿನ ಗೌಡನಿಗೂ ಯಾವ ರೀತಿ ಸಂಬಂಧ ವಿತ್ತೆಂಬುದನ್ನು ತಿಳಿಸಲು ಈ ಲೇಖನ ವಿಫಲವಾಗಿದೆ. ಅಥವಾ ಇದರಲ್ಲಿ ಚರ್ಚೆಯಾಗಿಲ್ಲ. ತಿಮ್ಮನ ಸ್ನೇಹಿತ ರಾಮಣ್ಣನ ಪಾತ್ರವನ್ನು ಕೇವಲ ಹೆಸರಿನಿಂದ ಮಾತ್ರ ಸೂಚಿಸಿ ಆತನ ಬಗ್ಗೆ ವಿವರಣೆಯನ್ನು ನೀಡಿಲ್ಲ. 'ಬಿಸಿಲುಗುದುರೆ' ಕಥಾನಾಯಕನ ವಿಶ್ಲೇಷಣೆಯಲ್ಲಿ ತೊಡಗುವ ಈ ಲೇಖನ ದೇವರು, ಒಂಟಿತನ, ಪ್ರೀತಿ, ವ್ಯಂಗ್ಯ ನೋಟ ಮುಂತಾದ ಅಂಶಗಳನ್ನು ಹೇಳಿಕೆಯ ರೂಪದಲ್ಲಿ ಚರ್ಚೆಯಾಗಿದೆಯೇ ಹೊರತು ಅದರ ಸಮಗ್ರ ವಿವರ ಇದರಲ್ಲಿ ಸಿಗುವುದಿಲ್ಲ.

'ಕರ್ಪೂರದ ಕಾಯದಲ್ಲಿ' ಬರುವ ತಮಂಧ ಕಿರಿದೆನ್ನಬಹುದೇ ಅಯ್ಯಾ ಇದರಲ್ಲಿ ಕಥಾನಾಯಕ ತೀರ್ಥಯಾತ್ರೆಗೆ ಹೋಗುವುದು, ಅಲ್ಲಿ ಭೇಟಿ ನೀಡಿದಂತಹ ನದಿಗಳು, ದೇವಾಲಯಗಳು, ಧಾರ್ಮಿಕ ಅಂಶಗಳು, ರಾಜಕೀಯ ಹಾಗೂ ಜಾತ್ಯತೀತತೆಯ ವಿಚಾರಗಳು ಈ ಲೇಖನ ಭಾಗದಲ್ಲಿ ಚರ್ಚೆಯಾಗಿಲ್ಲ. 'ಬೆತ್ತಲೆ ಸ್ವಾಮಿ' ಎಂಬ ಕತೆಯಲ್ಲಿ ಪವಾಡ ಪುರುಷನೆಂದು ಕರೆಯಿಸಿಕೊಂಡವನ ನೈಜ ಚಿತ್ರಣವಿದೆ. ಈ ಲೇಖನದಲ್ಲಿ ಬೆತ್ತಲೆ ಸ್ವಾಮಿಯನ್ನು ನಂಬಿದವರಿಗೆ ಯಾವ ಉಪಯೋಗಗಳು ಆಗುತ್ತವೆ ಎಂಬುದನ್ನು ಹೇಳಿಕೆಯ ರೂಪದಲ್ಲಿ ಚರ್ಚೆಯಾಗಿದೆಯೇ ಹೊರತು ಇದರ ವಿವರಗಳು ಸಂಪೂರ್ಣವಾಗಿಲ್ಲ.

'ಪ್ರಜಾಪ್ರಭುತ್ವದಲ್ಲಿ ಸಾವು' ಕತೆಯಲ್ಲಿ ಒಬ್ಬ ವ್ಯಕ್ತಿ ವಿಷವನ್ನು ಕುಡಿಯಲು ಕಾರಣಗಳೇನು ಎಂಬುದನ್ನು ಚರ್ಚಿಸಿಲ್ಲ. ಆತನನ್ನು ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆ ನೀಡಿಸುವ ವಿಷಯ ಪುರಸಭೆಯ ಅಧ್ಯಕ್ಷನ ಮಗ ಸತ್ತಾಗ ಏನೆಲ್ಲಾ ಘಟನೆಗಳು ಸಂಭವಿಸುತ್ತವೆ ಎಂಬುದನ್ನು ಈ ಲೇಖನ ಭಾಗದಲ್ಲಿ ಚರ್ಚೆಯಾಗಿಲ್ಲ.

ಅದೇ ರೀತಿಯದಾಗಿ 'ಗುಡಿಯ ನೋಡಿರಣ್ಣಾ' ಕತೆಯಲ್ಲಿ ಸಾಂಪ್ರದಾಯಿಕ ವಿವಾಹ ಪದ್ಧತಿಯ ಕೆಲವು ಸೂಕ್ಷ್ಮ ವಿಚಾರಗಳನ್ನು ಮಾತ್ರ ಈ ಲೇಖನ ಭಾಗದಲ್ಲಿ ಚರ್ಚಿಸಲಾಗಿದೆ.

'ಎಂಥಾ ಮೋಜಿನ ಕುದುರಿ' ಆಧುನಿಕ ಜೀವನದ ದಾಂಪತ್ಯವನ್ನು ಕುರಿತು ಚರ್ಚಿಸುವಾಗ ಈ ಲೇಖನದಲ್ಲಿ ಕೇವಲ ಪಾತ್ರಗಳ ಮೂಲಕ ಕಥಾ ಭಾಗದ ಅಂಶಗಳನ್ನು ಮಾತ್ರ ಚರ್ಚಿಸಲಾಗಿದೆ. ಕತೆಯ ವಿವರಣೆ ಚರ್ಚಿತವಾಗಿಲ್ಲ.

ನೆಲೆ ಕತೆಯಲ್ಲಿ ರಂಗಮ್ಮ ಹಲವಾರು ಸಂಕಷ್ಟಗಳನ್ನು ಎದುರಿಸುತ್ತಾಳೆ. ಇಡೀ ಸಮಾಜದ ವಿರುದ್ಧ ತನ್ನ ನೆಲೆಯನ್ನು ಕಂಡುಕೊಳ್ಳಲು ಹೋರಾಟ ಮಾಡುತ್ತಾಳೆ. ಆದರೆ ಈ ಲೇಖನದಲ್ಲಿ ಆಕೆಯ ಸಾಹಸದ ಸಂಪೂರ್ಣ ವಿವರಣೆ ನೀಡಲು ಸಾಧ್ಯವಾಗಿಲ್ಲ ಅಥವಾ ವಿಫಲವಾಗಿದೆ. "ಕರ್ಪೂರದ ಕಾಯದಲ್ಲಿ ಬೆಂಕಿಯುಸಿರಾಟ", "ಪ್ರಜಾಪ್ರಭುತ್ವದಲ್ಲಿ ಸಾವು", ಈ ಲೇಖನ ಭಾಗವು ಕೂಡಾ ಕತೆಯ ಎಲ್ಲಾ ಅಂಶಗಳನ್ನು ಕೆಲವು ಮಾತುಗಳಲ್ಲಿ ಹಿಡಿದಿಡಲು ಸಾಧ್ಯವಾಗಿಲ್ಲ.

೨.೪.ಉಪಸಂಹಾರ

ರಾಜಶೇಖರ ನೀರಮಾನ್ವಿಯವರು ಕನ್ನಡ ಕಥಾ ಸಾಹಿತ್ಯ ಲೋಕಕ್ಕೆ ಎರಡು ಕಥಾ ಸಂಕಲನಗಳನ್ನು ಕೊಡುಗೆಯಾಗಿ ನೀಡಿದ್ದಾರೆ. ಈ ಕಥಾಸಂಕಲನದ ಮೇಲೆ ೩ ಲೇಖನಗಳು ಪ್ರಕಟವಾಗಿದ್ದು. ಪ್ರೊ.ಮಲ್ಲಿಕಾರ್ಜುನ ಹಿರೇಮಠರವರ "ನೀರಮಾನ್ವಿಯವರ ಕತೆಗಳಲ್ಲಿ ಕಲ್ಪನೆ ಮತ್ತು ವಾಸ್ತವಿಕ ಚಿತ್ರಣ" ಎಂಬ ಅಂಶದ ಆಧಾರದ ಮೇಲೆ ಇವರ ಕತೆಗಳ ಮೇಲೆ ಲೇಖನ ಪ್ರಕಟವಾಗಿದ್ದು, ತುಂಬಾ ಸೂಕ್ಷ್ಮವಾದ ಪ್ರಮುಖವಾದ ವಿಚಾರಗಳ ಬಗ್ಗೆ ಚರ್ಚೆ ನಡೆಸಿ ಇವರ ಕತೆಗಳು ತುಂಬಾ ಸತ್ವ ಪೂರ್ಣವಾಗಿವೆ ಎಂಬುದನ್ನು ಸಾರಿದ್ದಾರೆ.

ಡಾ. ಅಮರೇಶ ನುಗಡೋಣಿಯವರು 'ವ್ಯಕ್ತಿತನ್ನ ತನದ ಹುಡುಕಾಟ' ಎಂಬ ಅಂಶದ ಆಧಾರದ ಮೇಲೆ ನೀರಮಾನ್ವಿ ಕತೆಗಳನ್ನು ವಿಶ್ಲೇಷಣೆಗೆ ಒಳಪಡಿಸಿ ತುಂಬಾ ಅರ್ಥಪೂರ್ಣವಾಗಿ ಚರ್ಚಿಸಿ ಮನುಷ್ಯ ಸಮಾಜದಲ್ಲಿ ತನ್ನ ಅಸ್ತಿತ್ವವನ್ನು ಕಂಡುಕೊಳ್ಳಲು ಯಾವ ರೀತಿ ಪ್ರಯತ್ನ ಪಡುತ್ತಾನೆ ಎಂಬುದನ್ನು ಇವರ ಕತೆಗಳ ಹಿನ್ನಲೆಯಲ್ಲಿ ಲೇಖನ ಪ್ರಕಟಿಸಿ ಇವರ ಕತೆಗಳ ಮಹತ್ವವನ್ನು ಅಗತ್ಯವನ್ನು ಕುರಿತು ಚಿಂತಿಸಿದ್ದಾರೆ. ಡಾ.ಅಲ್ಲಮ ಪ್ರಭು ಬೆಟ್ಟದೂರುರವರ 'ನೀರಮಾನ್ವಿ ಹಾಗೂ ಅವರ ಕತೆಗಳು' ಎಂಬ ಲೇಖನವು ಇವರ ಸಮಸ್ತ ಕತೆಗಳನ್ನು, ವಿವರವಾಗಿ ಚರ್ಚಿಸಿ, ಇವರ ಕತೆಗಳ ಜೀವಂತಿಕೆಯನ್ನು ಕುರಿತು ಚರ್ಚಿಸಿದ್ದಾರೆ. ಒಟ್ಟಾರೆಯಾಗಿ ತಮ್ಮ ಕಾವ್ಯಮಯ ಶೈಲಿಯಿಂದ ರಾಯಚೂರಿನ ಗ್ರಾಮೀಣ ಭಾಷೆಯ ಸೊಗಡಿನಿಂದ, ಆಳವಾದ ಚಿಂತನೆಯಿಂದ, ನಿರೂಪಣೆಯ ಸೊಗಸಿನಿಂದ ಇವರ ಕತೆಗಳು ಮತ್ತೆ ಓದುವಂತಿವೆ.

ಅಡಿಟಿಪ್ಪಣಿ

೧. ಪ್ರೊ.ಮಲ್ಲಿಕಾರ್ಜುನ ಹಿರೇಮಠ, ನೀರಮಾನ್ವಿಕತೆಗಳಲ್ಲಿ ಕಲ್ಪನೆ ಮತ್ತು ವಾಸ್ತವಿಕ ಚಿತ್ರಣ, ಜಂಬಣ್ಣ ಅಮರು ಚಿಂತಕ ಮತ್ತು ಡಾ.ರಾಜಶೇಖರ ನೀರಮಾನ್ವಿ ಸಾಹಿತ್ಯ, ಪು.೨೬ ರಿಂದ ೩೫, ೨೦೦೮

೨. ಡಾ.ಅಮರೇಶ ನುಗಡೋಣಿ, ನೀರಮಾನ್ವಿ ಕತೆಗಳು ವ್ಯಕ್ತಿ ತನ್ನ ತನದ ಹುಡುಕಾಟ, ಜಂಬಣ್ಣ ಅಮರು ಚಿಂತಕ ಮತ್ತು ಡಾ.ರಾಜಶೇಖರ ನೀರಮಾನ್ವಿ ಸಾಹಿತ್ಯ, ಪು.೩೬ ರಿಂದ ೪೨, ೨೦೦೮

೩. ಅಲ್ಲಮ ಪ್ರಭುಬೆಟ್ಟದೂರು, ರಾಜಶೇಖರ ನೀರಮಾನ್ವಿ ಹಾಗೂ ಅವರ ಕತೆಗಳು, ಗೌರವ ಪ್ರಶಸ್ತಿ ಪುರಸ್ಕೃತರ ಸಾಹಿತ್ಯ ಸಾಧನೆ, ಪು. ೨೫ ರಿಂದ ೩೫

ಅಧ್ಯಾಯ - ಮೂರು

ಕನ್ನಡ ನವ್ಯ ಕಥಾ ಸಾಹಿತ್ಯ ಮತ್ತು ರಾಜಶೇಖರ ನೀರಮಾನ್ವಿ ಕತೆಗಳ ಸ್ಥಾನ

[illegible]

[illegible]

[illegible]
[illegible]

ಅಧ್ಯಾಯ - ಮೂರು

ಕನ್ನಡ ನವ್ಯ ಕಥಾ ಸಾಹಿತ್ಯ ಮತ್ತು ರಾಜಶೇಖರ ನೀರಮಾನ್ವಿ ಕತೆಗಳ ಸ್ಥಾನ

ನಮ್ಮ ದೇಶಕ್ಕೆ ವಾಸಕ್ಕಾಗಿ ಬಂದಂತಹ ವಸಾಹತುಶಾಹಿಗಳು ಕೇವಲ ವಾಸಿಸದೇ ಇಲ್ಲಿಯ ಆಡಳಿತ ವ್ಯವಸ್ಥೆಯನ್ನು ಕಂಡು ನಮ್ಮ ಮೇಲೆ ಪ್ರಾಬಲ್ಯವನ್ನು ಸಾಧಿಸಿದರು. ಭಾರತೀಯರು ಅನಾಗರೀಕರು, ಹಿಂದುಳಿದವರು, ಕಪ್ಪು ಜನರು, ಇವರಿಗೆ ನಮ್ಮ ಚಿಂತನೆಗಳನ್ನು ತುಂಬಿ ಇತಿಹಾಸದ ಪ್ರಜ್ಞೆಯನ್ನು ಕಟ್ಟಿಕೊಡಬೇಕು ಎಂಬ ಉದ್ದೇಶದಿಂದ ಇಂಗ್ಲೀಷ್ ಶಾಲೆಗಳನ್ನು ಆರಂಭಿಸಿ ಶಿಕ್ಷಣ ನೀಡಲು ಪ್ರಾರಂಭಿಸಿದರು. ಹೀಗೆ ಇವರು ಶಿಕ್ಷಣ ಕ್ಷೇತ್ರದಲ್ಲಿ ಗಣನೀಯವಾದ ಸಾಧನೆ ಮಾಡಿದುದರ ಫಲವಾಗಿ, ವಿದ್ಯಾವಂತರ ಸಂಖ್ಯೆಯು ಹೆಚ್ಚುತ್ತಾ ಹೋಗಿ ಹಳೆಯ ಸಂಪ್ರದಾಯಗಳು ನಾಶವಾಗುತ್ತಾ ಹೊಸ ಸಂಪ್ರದಾಯಗಳು ಬೆಳೆವಣಿಗೆಯಾಗಲು ಸಾಧ್ಯವಾಯಿತು. ಅಂದರೆ ನಮ್ಮಲ್ಲಿ ಅಜ್ಞಾನ, ಮೂಡನಂಬಿಕೆ, ಆಚರಣೆಗಳು, ದೈವತ್ವದ ಅಂಶಗಳು ಕ್ರಮೇಣ ನಾಶವಾಗತೊಡಗಿದವು. ಅಲ್ಲಿಯವರೆಗೆ ನಮ್ಮಲ್ಲಿ ಶಿಕ್ಷಣ ಪದ್ಧತಿಯು ಮಠಮಾನ್ಯಗಳಲ್ಲಿ, ದೇವಸ್ಥಾನಗಳಲ್ಲಿ, ಸಂಘಸಂಸ್ಥೆಗಳಲ್ಲಿ ನಡೆಯುತ್ತಿತ್ತು. ಇದರಿಂದ ಸಿಗುವಂತಹ ಶಿಕ್ಷಣ ನಮ್ಮನ್ನು ಸ್ವಾವಲಂಬಿಯಾಗಲು ಬಿಡುತ್ತಿರಲಿಲ್ಲ, ಪಾಶ್ಚಾತ್ಯರಿಂದಾಗಿ ನಮ್ಮಲ್ಲಿ ಆಲೋಚನೆಗಳು ಬೆಳವಣಿಗೆಯಾಗತೊಡಗಿದವು. ಕ್ರಮೇಣವಾಗಿ ಈ ಬದಲಾವಣೆಯು ಸಾಹಿತ್ಯ ಕ್ಷೇತ್ರಗಳಲ್ಲೂ ವಿಸ್ತರಿಸುತ್ತಾ ಹೋಯಿತು. "ಸಾಹಿತ್ಯದ ಮಟ್ಟಿಗೆ ಮುಖ್ಯವಾಗಿ ಎರಡು ಪರಿಣಾಮಗಳಾದವು ಮೊದಲನೆಯದು ಹೊಸದೊಂದು ಜೀವನ ಮನೋಧರ್ಮ ದರ್ಶನವಾದುದು, ಎರಡನೆಯದು ಹೊಸದೊಂದು ಸಾಹಿತ್ಯ ಜಗತ್ತು ಲಭ್ಯವಾದುದು.

ಅಂದಿನ ಕಾಲದಲ್ಲಿ ಇಂಗ್ಲೇಂಡಿನ ಚರಿತ್ರೆಯನ್ನು ಪ್ರೌಢಶಾಲಾ ಹಂತದಲ್ಲಿಯೇ ಓದುತ್ತಿದ್ದರು. ಅದರಲ್ಲಿ ಶೇಕ್ಸ್‌ಪಿಯರ್, ಜೂಲಿಯಸ್ ಸೀಸರ್, ಪ್ಲೇಟೋನ ಸಂಭಾಷಣೆಗಳು, ಮಿಲ್ಟನ್, ವರ್ಡ್ಸ್‌ವರ್ತ್ ಮೊದಲಾದವರ ಕವನಗಳು, ಕಾದಂಬರಿಗಳು ಪಠ್ಯಪುಸ್ತಕಗಳಾಗಿರುತ್ತಿದ್ದವು. ಇದರಿಂದಾಗಿ ಇಂಗ್ಲೀಷ್ ಸಾಹಿತ್ಯವು ವಿದ್ಯಾರ್ಥಿಗಳಿಗೆ ಒಮ್ಮೆಲೆ ಲಭ್ಯವಾಯಿತು. ಇಂಗ್ಲೀಷ್ ಸಾಹಿತ್ಯ, ಇಂಗ್ಲೇಂಡಿನ ಚರಿತ್ರೆ ಇವುಗಳ ಅಧ್ಯಯನದಿಂದ ಎಲ್ಲಾವನ್ನು ಪ್ರಶ್ನಿಸುವ, ವಿಶ್ಲೇಷಿಸುವ, ಮನೋಧರ್ಮದ ಪರಿಚಯವಾಯಿತು. ಇದರಿಂದಾಗಿ ರಾಜನು ಭಗವಂತನ ಪ್ರತಿನಿಧಿ ಎಂಬ ನಂಬಿಕೆಯನ್ನು ಹೊಂದಿದ್ದ ಜನತೆಯು ರಾಜನ ಅಧಿಕಾರವನ್ನು ಪ್ರಶ್ನಿಸುತ್ತಾ ಹೋಗಿ ಸ್ವಾತಂತ್ರ್ಯವನ್ನು ಪಡೆದರು. ಇದರಿಂದಾಗಿ ಹೊಸದೊಂದು ಜೀವನ ಮನೋಧರ್ಮ ದರ್ಶನವಾಯಿತು."[2]

"ಎರಡನೆಯದಾಗಿ ಹೊಸದೊಂದು ಸಾಹಿತ್ಯ ಜಗತ್ತು ಲಭ್ಯವಾಯಿತು. ಮಿಲ್ಟನ್ನನ ಕವನಗಳಲ್ಲಿ ಸ್ವಾತಂತ್ರ್ಯ ಪ್ರೇಮದ ಅಭಿವ್ಯಕ್ತಿ ಶೆಲ್ಲಿ, ಬೈರನ್ ಮುಂತಾದವರು ಸಮಾಜವನ್ನು ಎಚ್ಚರಿಸುವ ಕ್ರಾಂತಿಕಾರರಾದರು ವರ್ಡ್ಸ್‌ವರ್ತ್ "ರೈತರ ಅಸಹಾಯಕರ ದುಃಖ, ಕಷ್ಟ, ಸರಳತೆ ಮುಂತಾದವುಗಳನ್ನು ತಮ್ಮ ಕವನಗಳಲ್ಲಿ ಬರೆದರು. ರಸ್ಕಿನ್ ಮೊದಲಾದ ಸಾಹಿತಿಗಳು ಸಮಕಾಲೀನ ಸಮಾಜದ ಸಮಸ್ಯೆಗಳ ಸೂಕ್ಷ್ಮ ವಿಶ್ಲೇಷಣೆ ಮಾಡಿದರು. ಇದರಿಂದಾಗಿ ನಮ್ಮಲ್ಲಿ ಹೊಸಗನ್ನಡ ಸಾಹಿತ್ಯ ಪ್ರಕಾರವು ಉದಯವಾಗಲು ಕಾರಣವಾಯಿತು."[3] ಕೇವಲ ಕಾವ್ಯವನ್ನು ಮಾತ್ರ ಬರೆಯುತ್ತಿದ್ದರು. ತದನಂತರ ಕತೆ, ಕಾದಂಬರಿ, ಲಲಿತಪ್ರಬಂಧ, ಆತ್ಮಚರಿತ್ರೆ ಇವೆಲ್ಲವು ಪಾಶ್ಚಾತ್ಯರ ಪ್ರಭಾವದಿಂದಾಗಿ ನಮ್ಮಲ್ಲಿ ಬೆಳವಣಿಗೆಯಾಗತೊಡಗಿದವು. ಇದನ್ನು ಅನುಕರಿಸಿದಂತಹ ನವೋದಯ ಕಾಲದ ಕವಿಗಳು ಮತ್ತು ಸಾಹಿತಿಗಳಾದ ಕುವೆಂಪು, ಬೇಂದ್ರೆ, ಕಾರಂತ, ಮಾಸ್ತಿ, ಮುಂತಾದವರು ಹಲವಾರು ಭಾಷೆಗಳನ್ನು ಕಲಿತಿದ್ದರಿಂದ ಇಂಗ್ಲೀಷ್ ಸಾಹಿತ್ಯವನ್ನು ಅಭ್ಯಾಸಮಾಡಿ ಕನ್ನಡದಲ್ಲಿ ನವೋದಯ ಪಂಥವನ್ನು ಆರಂಭಿಸಿ, ಶ್ರೀಮಂತಗೊಳಿಸುತ್ತಾ ಹೋದರು. ನವೋದಯದ ಕವಿಗಳು ವ್ಯಕ್ತಿಗಿಂತ ಸಮಾಜಕ್ಕೆ ಪ್ರಾಮುಖ್ಯತೆಯನ್ನು ನೀಡಿದರು. ಸಮಾಜದಲ್ಲಿ ವ್ಯಕ್ತಿಯು ಒಂದು ಭಾಗವಾಗಿದ್ದಾನೆ. ಸಮಾಜದ ಉದ್ಧಾರದಿಂದ ವ್ಯಕ್ತಿ ಬೆಳೆಯುತ್ತಾನೆ ಎಂಬುದು ಇವರ ಕಲ್ಪನೆ.

ಇಲ್ಲಿ ಸಾಮಾಜಿಕ ಜೀವನ, ಸಾಮಾಜಿಕ ಸಮಸ್ಯೆಗಳು ಮುಖ್ಯವಾಗಿರುತ್ತವೆ. ಹೀಗೆ ನವೋದಯ ಸಾಹಿತ್ಯವು ವ್ಯಕ್ತಿಯನ್ನು ಸಾಮಾಜಿಕ ಚೌಕಟ್ಟಿನಲ್ಲಿಟ್ಟು ಆತನನ್ನು ಅರ್ಥೈಸಲಾಗುತಿತ್ತು. ಆದ್ದರಿಂದಲೇ ಮನುಷ್ಯನ ಸಾಮಾಜಿಕ ವರ್ತನೆಗಳು ಆತನ ವ್ಯಕ್ತಿತ್ವ, ಅಂತರಂಗವನ್ನು ತಿಳಿಸಬಲ್ಲವು ಎಂದು ನವೋದಯ ಸಾಹಿತ್ಯವು ನಂಬುತ್ತದೆ.

ನವೋದಯ ಸಾಹಿತ್ಯ ಸಂದರ್ಭದಲ್ಲಿ ಬ್ರಿಟೀಷರು ಭಾರತವನ್ನು ಆಳುತ್ತಿದ್ದರು. ಅಂದರೆ ಭಾರತವು ಬ್ರಿಟೀಷರ ದಾಸ್ಯತ್ವದಲ್ಲಿತ್ತು. ಹೇಗಾದರು ಮಾಡಿ ಸ್ವಾತಂತ್ರ್ಯವನ್ನು ತಂದು ಕೊಡಬೇಕೆಂಬ ಉದ್ದೇಶದಿಂದ

ದೇಶಭಕ್ತಿ, ಆದ್ಯಾತ್ಮ, ಪ್ರಕೃತಿ ವರ್ಣನೆ, ನಾಡುನುಡಿಯ ಅಭಿಮಾನ, ಸಾಮಾಜಿಕ ಚಿಂತನೆ, ಸ್ವಾತಂತ್ರ್ಯದ ಹಂಬಲ, ಸ್ವಾಭಿಮಾನ, ರಾಷ್ಟ್ರೀಯತೆಯ ಕಲ್ಪನೆ ಇತ್ಯಾದಿ ಅಂಶಗಳನ್ನಿಟ್ಟುಕೊಂಡು ಸಾಹಿತ್ಯ ಕೃಷಿ ಮಾಡಿ ಇದರ ಮೂಲಕ ಸ್ವಾತಂತ್ರ್ಯದ ಬಗ್ಗೆ ಜಾಗೃತಿಯನ್ನು ಮೂಡಿಸಲು ಆರಂಭಿಸಿದರು. ಇಲ್ಲಿ ಸಮಾಜವೇ ಮುಖ್ಯಭಾಗವಾಗಿತ್ತು. ಮುಂದೆ ನವೋದಯ ಸಾಹಿತ್ಯದ ವಿರುದ್ಧ ಹುಟ್ಟಿಕೊಂಡಂತಹ ಒಂದು ಸಾಹಿತ್ಯ ಪ್ರಕಾರವೇ ನವ್ಯಸಾಹಿತ್ಯವಾಗಿದೆ.

ಆದ್ದರಿಂದ ಕನ್ನಡ ಸಾಹಿತ್ಯದಲ್ಲಿನ ಈ ಕಾಲವನ್ನು ಸಾಹಿತ್ಯಿಕ ಬೆಳವಣಿಗೆಯಲ್ಲಿನ ಹೊಸಹಂತದ ಆರಂಭದ ಕಾಲವೆಂದು ಪರಿಗಣಿಸಬಹುದು. ಮನುಷ್ಯನ ಖಾಸಗಿ ಕ್ಷಣಗಳ ಸಾಮಾಜಿಕತೆ, ಅವನ ಸಾಮಾಜಿಕ ಅನುಭವಗಳ ವ್ಯಕ್ತಿಗತ ಶೋಧನೆ, ಮಾನವನ ಅಂತರಂಗದ ಹುಡುಕಾಟ ಇವು ನವ್ಯ ಬರಹಗಾರರನ್ನು ಹೆಚ್ಚುಕಾಡುತ್ತವೆ. ಇವೆಲ್ಲವುಗಳ ಜೊತೆಗೆ ಪಶ್ಚಿಮದಿಂದ ಬಂದ ಸಾಹಿತ್ಯಿಕ, ವೈಜ್ಞಾನಿಕ, ತಾಂತ್ರಿಕ, ಮನಃಶಾಸ್ತ್ರೀಯ ವಿಚಾರಗಳು, ನಮ್ಮ ಬದುಕು ಮತ್ತು ಚಿಂತನೆಗಳ ಮೇಲೆ ಗಾಢ ಪ್ರಭಾವ ಬೀರುತ್ತಿದ್ದವು. ಇದಲ್ಲದೆ "ಭಾರತೀಯ ವಿಶ್ವವಿದ್ಯಾಲಯಗಳ ಇಂಗ್ಲೀಷ್ ವಿಭಾಗದ ಪಠ್ಯಾವಳಿಯಲ್ಲಿ ಎಲಿಯಟ್, ಲಾರೆನ್ಸ್ ಮುಂತಾದವರ ಸಾಹಿತ್ಯವನ್ನು ಪರಿಚಯಿಸಲಾಗುತಿತ್ತು"[೩] ಹೀಗೆ ಪರಿಚಯಿಸಲಾದ ಇಂಗ್ಲೀಷ್ ಸಾಹಿತ್ಯವನ್ನು ಓದಿಕೊಂಡು ಕನ್ನಡದ ಲೇಖಕರು ರೂಢಿಗತ ಮಾರ್ಗವನ್ನು ಬಿಟ್ಟು ಬದಲಾದ ಸಂವೇದನೆಗನುಣವಾಗಿ ಸಾಹಿತ್ಯದಲ್ಲಿ ಹೊಸದನ್ನು ತರಲು ಶ್ರಮಿಸಿದರು. ಈ ಎಲ್ಲಾ ಅಂಶಗಳು ಒಟ್ಟಿಗೆ ನವ್ಯ ಸಾಹಿತ್ಯ ಉದಯವಾಗಲಿಕ್ಕೆ ಕಾರಣವಾಯಿತು.

"ನವ್ಯ" ಎಂಬುದು ವಿಶಿಷ್ಟ ಸಂವೇದನೆ. ವಿಶಿಷ್ಟವಾದ ಜೀವನ ಧೋರಣೆ, ವಿಶಿಷ್ಟ ರೂಪಗಳು ಇವುಗಳೆಲ್ಲದರ ಸಂಬಂಧದಿಂದ ಹುಟ್ಟಿದ ವಿಶಿಷ್ಟ ಸಾಹಿತ್ಯ ಪರಂಪರೆ."[೪] ಇದು ಹೊಸದನ್ನು ಹುಟ್ಟುಹಾಕಲು ಬದ್ಧವಾದದು. ಹೀಗೆ ವಸ್ತು, ತಂತ್ರ, ಭಾಷೆ, ಈ ಎಲ್ಲಾದರ ಹೊಸದನ್ನು ಸೃಷ್ಟಿಸಲು ನಿರಂತರ ಪ್ರಯೋಗಶೀಲವಾಗಿರುತ್ತದೆ. ಅನುಭವವನ್ನು ನಿಖರವಾಗಿ, ಖಚಿತವಾಗಿ ಮತ್ತು ಸ್ಪಷ್ಟವಾಗಿ ಅಭಿವ್ಯಕ್ತಿಗೊಳಿಸಲು ಸಾಧ್ಯವಾಗುವಂತೆ ಆಡುಭಾಷೆಯನ್ನು ಬಳಸಿಕೊಳ್ಳುತ್ತವೆ.

ಈ ಎಲ್ಲಾ ಅಂಶಗಳನ್ನು ನವ್ಯ ಹೊಂದಿರುತ್ತದೆ. ಪಾಶ್ಚಾತ್ಯ ನವ್ಯ ಸಾಹಿತ್ಯವನ್ನು ಅನುಸರಿಸಿದರೂ ಕನ್ನಡ ನವ್ಯ ಸಾಹಿತ್ಯ ಅದರ ಸಂಪೂರ್ಣ ನೆರಳಲ್ಲ. ರಶಿಯಾ ಮತ್ತು ಇಂಗ್ಲೇಂಡಿನಲ್ಲಿ ಹುಟ್ಟಿಕೊಂಡ ನವ್ಯತೆಯಲ್ಲಿ ವ್ಯತ್ಯಾಸವಿದೆ. ಕನ್ನಡ ಸಂದರ್ಭದಲ್ಲಿಯೂ ಈ ನವ್ಯತೆ ಆಯಾ ಬರಹಗಾರನ ಪ್ರತಿಭೆ ಮತ್ತು ಸಾಮರ್ಥ್ಯವನ್ನವಲಂಬಿಸಿ ಬೆಳೆದಿದೆ. ಕನ್ನಡ ಸಾಹಿತ್ಯದಲ್ಲಿ ನವ್ಯತೆ ಕಾಣಿಸಿಕೊಳ್ಳಲು ಶುರುವಾದದ್ದು ೧೯೫೦ರ ಸುಮಾರು. ನವ್ಯ ಸಾಹಿತ್ಯದ ಸ್ವರೂಪವನ್ನು ಗಮನಿಸಿದರೆ ಇದು ನಮ್ಮ ಅನುಭವದಿಂದ ದೂರವೇ ಎಂಬ ಅಭಿಪ್ರಾಯ ಯಾರಿಗೂ ಬರುವಂತದ್ದೇ, ಆದರೆ ನಮ್ಮ ಸಾಹಿತ್ಯದಲ್ಲಿ ನವ್ಯತೆಯ ಅನಿವಾರ್ಯತೆ ಇತ್ತೆ ಎಂಬ ಅನುಮಾನ ಸುಳಿಯಲು ಕಾರಣವೆಂದರೆ ಔದ್ಯೋಗಿಕ ಕ್ರಾಂತಿಯಿಂದ

ಇಂಗ್ಲೇಂಡಿನಲ್ಲಿ ಜನಜೀವನ ಅಸ್ತವ್ಯಸ್ತಗೊಂಡು ಅಲ್ಲಿ ನವ್ಯ ಸಾಹಿತ್ಯ ಸೃಷ್ಟಿಯಾಗಲು ಕಾರಣವಾದಂತೆ ನಮ್ಮಲ್ಲಿ ಐತಿಹಾಸಿಕ ಅನಿವಾರ್ಯತೆ ಇರಲಿಲ್ಲವೆಂಬುದೇ ಕಾರಣ. ಆದರೂ ಸ್ವಾತಂತ್ರ್ಯಾ ನಂತರದ ಭಾರತ ಹಲವಾರು ಸಮಸ್ಯೆಗಳಿಗೆ ಗುರಿಯಾದದ್ದು ಸುಳ್ಳಲ್ಲ, ಆಶಾವಾದಿಯಾಗಿದ್ದ ಮನುಷ್ಯ ತಾನು ನಂಬಿಕೊಂಡಿದ್ದ ಮೌಲ್ಯಗಳ ಕುಸಿತದಿಂದ ಕಂಡ ಕನಸುಗಳು ಭಗ್ನವಾಗಿದ್ದರಿಂದ ಹಾಗೂ ಎಲ್ಲಾ ನಿರೀಕ್ಷೆಗಳು ಸುಳ್ಳಾಗತೊಡಗಿದ್ದಾಗ ಸಹಜವಾಗಿ ಆತನ ಸಂಬಂಧಗಳಲ್ಲಿ ಭಿನ್ನತೆ ಹಾಗೂ ಬದುಕಿನಲ್ಲಿ ಬದಲಾವಣೆಗಳು ಕಾಣತೊಡಗಿದವು. ಬದಲಾದ ಬದುಕಿಗೆ ಮನುಷ್ಯ ಸ್ಪಂದಿಸುವ ರೀತಿಯೇ ಬೇರೆಯಾಯಿತು. ಸಂವೇದನೆಯಲ್ಲಿ ಭಿನ್ನತೆ ಶುರುವಾದದ್ದೇ ನವ್ಯತೆ ಕಾಣಿಸಿಕೊಳ್ಳಲು ಕಾರಣವಾಯಿತು.

೧೯೫೦ರಲ್ಲಿ ಗೋಕಾಕರು ನವ್ಯ ಕಾವ್ಯದ ಬಗ್ಗೆ ಮೊದಲು ಪ್ರಸ್ತಾಪ ಮಾಡಿ ಅದರ ಬಗ್ಗೆ ಒಂದು ಸೈಂದ್ಧಾತಿಕ ಪುಸ್ತಕವನ್ನೇ ಬರೆದರು. ಹಾಗೂ ನವ್ಯ ಕಾವ್ಯವನ್ನು ಬರೆದರು. ಇವರ ಜೊತೆಯಲ್ಲಿಯೇ ಅಡಿಗರು ನವ್ಯ ಕಾವ್ಯದ ಬಗ್ಗೆ ಪ್ರಸ್ತಾಪಿಸಿ, ಕಾವ್ಯವನ್ನು ಬರೆದರು. ಆದರೆ ಮುಂದೆ ಗೊಕಾಕರ ನವ್ಯ ಹಲವು ವಿಮರ್ಶಕರಿಂದ ಉಗ್ರ ರೀತಿಯಲ್ಲಿ ಟೀಕೆಗೆ ಗುರಿಯಾಯಿತು. ಮಾನವ ಕೇಂದ್ರವುಳ್ಳ ಧೋರಣೆಯಾಗಿ ರೂಪುಗೊಳ್ಳಬೇಕೆಂದು ಗೋಕಾಕರು ಹೇಳಿದ್ದುದೇ "ಇದು ಪಾಶ್ಚ್ಯತ್ಯ ನವ್ಯಕ್ಕೆ ತೀರಾ ವಿರುದ್ಧವಾದ ಧೋರಣೆ ನವ್ಯದ ಪರಿಕಲ್ಪನೆಗೆ ವಿರೋಧವಾದಂತಹವು. ಆದ್ದರಿಂದ ಆಗ ಗೋಕಾಕರು ಕನ್ನಡದಲ್ಲಿ ಹೊಸದು ಬರೆಯಬೇಕೆಂದು ಇಚ್ಛಿಸಿದರಾದರೂ ನವ್ಯದ ಬಗೆಗೆ ಅವರು ತಾಳಿದ ದೃಷ್ಟಿಧೋರಣೆ ನವ್ಯದ್ದಲ್ಲ."[1] ಗೋಕಾಕರಲ್ಲಿ ನವ್ಯತೆ ಪ್ರಜ್ಞೆಯಾಗಿ ಮೂಡದೇ ಪ್ರತಿಜ್ಞೆಯಾಗಿ ಮೂಡಿಬಂದಿತು. ನವೋದಯ ಮಾರ್ಗದೊಂದಿಗೆ ಇವರಿಗೆ ಮೂಲಭೂತವಾಗಿ ಜಗಳ ಇರಲಿಲ್ಲ. ಸಂಪ್ರದಾಯದ ಪರವಾಗಿರುವ ಗೋಕಾಕರಿಗೆ ಜನಪರವಾದ ಕಾವ್ಯ ಬರೆಯಲಾಗಲೇ ಇಲ್ಲ. ಕನಿಷ್ಟ ಅವರು ಆಧುನಿಕರೇ ಆಗಲಿಲ್ಲ ಎಂಬಲ್ಲಿ ಬಂದು ನಿಂತರು. ಇನ್ನು ಅವರ ಸಾಹಿತ್ಯದಿಂದ ಆಧುನಿಕ ಮನುಷ್ಯನನ್ನು ಹುಡುಕುವುದು ದೂರವೇ ಉಳಿಯಿತು.

ಹೀಗೆ ಗೋಪಾಲಕೃಷ್ಣ ಅಡಿಗರು ನವೋದಯ ಕಾವ್ಯ ಮಾರ್ಗವನ್ನು ಬಿಟ್ಟು ನವ್ಯ ಕಾವ್ಯ ಮಾರ್ಗವನ್ನು ಹಿಡಿಯಲು ತಮ್ಮನ್ನು ಸಿದ್ಧಗೊಳಿಸಿಕೊಂಡರು. ಹೀಗೆ ಗೋಕಾಕರು ಮತ್ತು ಅಡಿಗರು ನವ್ಯತೆಯನ್ನು ಎತ್ತಿಹಿಡಿದು ಅದರ ಅವಶ್ಯಕತೆಯನ್ನು ಬಯಸಿದರು. ಆದರೆ ಭಿನ್ನ ಭಿನ್ನ ನೆಲೆಯಲ್ಲಿ ಕಂಡುಕೊಳ್ಳತೊಡಗಿದರು. ಇದರಿಂದ ಗೋಕಾಕರ ಕಾವ್ಯ ಬಹಳ ಟೀಕೆಗೆ ಗುರಿಯಾಯಿತು ಅಡಿಗರ ಕಾವ್ಯ ಒಂದು ಪರಂಪರೆಯನ್ನೇ ಸೃಷ್ಟಿಸಿತು. ಆದರೂ ಗೋಕಾಕರು ಮತ್ತು ಅಡಿಗರು ಹೇಗೆ ಭಿನ್ನ, ಹೇಗೆ ಸಮಾನರು ಎಂಬ ಬಗ್ಗೆ ಎಚ್.ಎಂ. ಚೆನ್ನಯ್ಯನವರು ಹೀಗೆ ಹೇಳುತ್ತಾರೆ.

ಇಬ್ಬರೂ, ಮಾನವನನ್ನು ಎಲ್ಲಾದರ ಕೇಂದ್ರವೆಂದು ನೋಡುವ ದೃಷ್ಟಿಯವರೆ. ಅದರಲ್ಲಿ ಪ್ರಗತಿಪರ ಧೋರಣೆಯೂ ಸೇರಿಕೊಂಡಿದೆ. ಇದು ನವೋದಯದ ಧೋರಣೆಗಳಿಗೆ ಸಮಾನವಾದುದು.

ಗೋಕಾಕರು ಮತ್ತು ಅಡಿಗರು ಇಬ್ಬರೂ ನವೋದಯ ಪ್ರಗತಿಶೀಲದ ಮೂಲಕವೇ ಹಾದು ಬಂದವರು. ಜೀವನದ ಗುರಿಯ ವಿಚಾರದಲ್ಲಿ ಇಬ್ಬರಿಗೂ ಸಮಾನ ಅಂಶಗಳಿವೆ. ಅವು ನವೋದಯದೊಂದಿಗೆ ಸಮಾನ ಅಂಶಗಳನ್ನು ಹಂಚಿಕೊಳ್ಳುತ್ತಾ ಇಬ್ಬರ ಕಾವ್ಯ ಪ್ರಣಾಳಿಕೆಗಳೂ ಮಾನವನ ಕೇಂದ್ರವುಳ್ಳವನ್ನೇ ಎತ್ತಿಹಿಡಿಯುವಂತಹವು. ಆದರೆ ಅಡಿಗರು ಒಳ್ಳೆಯ ಕಾವ್ಯ ಬರೆದರು, ಗೋಕಾಕರು ಅಪ್ಪಟ ಒಳ್ಳೆಯ ಕಾವ್ಯ ಬರೆಯಲಿಲ್ಲ ನವೋದಯದಿಂದ ಭಿನ್ನವಾದ ಕಾವ್ಯ ರಚಿಸಿದರು. "ಒಳ್ಳೆಯ ಕಾವ್ಯ" ರಚಿಸಿದರು ಅಡಿಗರು ಎನ್ನುವುದು ನಿಜ. ಆದರೆ ನವೋದಯ ಯಾವ ಸಂಸ್ಕೃತಿಯನ್ನು ಒಪ್ಪಿ ಗುಣಗಾನಮಾಡಿತೋ ಕೀರ್ತನೆ ಮಾಡಿತೋ, ಅದೇ ಸಂಸ್ಕೃತಿಯನ್ನು ಅಡಿಗರು ಕೂಡ ಒಪ್ಪಿಕೊಂಡವರೇ. ಅದರ ಮೌಲ್ಯಗಳ ವಿಚಾರದಲ್ಲಿ ಅಡಿಗರಿಗೂ ಗೌರವವಿದೆ. ಅಡಿಗರು ಹಾದಿ ನಡೆದದ್ದನ್ನು ತೋರಿಸಿ, ಗುರಿ ಮುಟ್ಟಿದ್ದನ್ನು ತೋರಿಸಿದರು. ಒಂದಕ್ಕೆ ವಿರುದ್ಧವಾದ ಇನ್ನೊಂದನ್ನು ತಮ್ಮ ಕಾವ್ಯ ಸೃಷ್ಟಿಯ ಪ್ರಕ್ರಿಯೆಯಲ್ಲಿ ಮುಖಾಮುಖಿ ಮಾಡಿದರೂ, ಅವರು ತಲುಪವ ಗುರಿ ಒಂದೇ. ಅದು ಸಂಸ್ಕೃತಿ ಆಗಲೇ ಒಪ್ಪಿಕೊಂಡದ್ದು, ಅಂದರೆ ಅಡಿಗರು ಮತ್ತು ಗೋಕಾಕರು ಇಬ್ಬರು ಒಂದೇ ಸಂಸ್ಕೃತಿಯ ಒಳಗಿನವರು. ಈ ಅರ್ಥದಲ್ಲಿ ಗೋಕಾಕರಿಗೆ ಹೇಗೆ ನವೋದಯದ ಜೊತೆ ಮೂಲಭೂತ ಜಗಳವಿರಲಿಲ್ಲವೋ ಹಾಗೆಯೇ ಅಡಿಗರಿಗೂ ಇರಲಿಲ್ಲ. ಆದರೂ ಅಡಿಗರು ನೆಲೆಯೂರಿ ನಿಂತರು ಅಡಿಗ ಯುಗವಾಯಿತು. ಒಂಟಿತನ, ಹತಾಶೆ, ನೋವು, ನಲಿವು, ವಿರಹ, ಅಸ್ತಿತ್ವದ ಹುಡುಕಾಟ, ವೈಯಕ್ತಿಕ ಸಮಸ್ಯೆಗಳು, ಭ್ರಮನಿರಸನ, ಪ್ರತಿಭಟನೆ, ಬಂಡಾಯದ ಧ್ವನಿ ಈ ಮುಂತಾದ ಅಂಶಗಳನ್ನು ಇಟ್ಟುಕೊಂಡು ನವ್ಯ ಸಾಹಿತ್ಯವನ್ನು ರಚಿಸಿದರು. ಯಾವುದಾದರೂ ಒಂದು ಕುಟುಂಬಕ್ಕೆ ಅಥವಾ ಒಬ್ಬ ಮನುಷ್ಯನಿಗೆ ಏನಾದರೂ ಸಂಕಷ್ಟ ನೋವುಗಳು ಎದುರಾದಾಗ ಅವು ಇಡೀ ಸಮಾಜದ ಭಾಗವೆಂದೇ ಪರಿಗಣಿಸದೆ ಅದು ಕೇವಲ ವ್ಯಕ್ತಿಗೆ ಮಾತ್ರ ಸೀಮಿತ ಎಂದು ಸಮಾಜ ಸುಮ್ಮನೇ ಇದ್ದು ಬಿಡುತ್ತಿತ್ತು. ಆದುದರಿಂದಲೇ ನವ್ಯಸಾಹಿತ್ಯವು ಸಮಾಜ ಕೇಂದ್ರಿತವಾಗಿರದೇ ವ್ಯಕ್ತಿ ಪ್ರಜ್ಞೆ ಕೇಂದ್ರಿತ ಹಿನ್ನಲೆಯಲ್ಲಿ ಈ ಸಾಹಿತ್ಯವನ್ನು ರಚಿಸಿದರು. ಇಂತಹ ಪಾಶ್ಚಾತ್ಯ ಸಾಹಿತ್ಯದ ಅಂಶಗಳು ಕೂಡಾ ನವ್ಯ ಸಾಹಿತ್ಯ ರಚಿಸಲು ಕಾರಣವಾಯಿತು.

ಈ ಎಲ್ಲಾ ಅಂಶಗಳನ್ನು ಯಶವಂತಚಿತ್ತಾಲ, ಶಾಂತಿನಾಥ ದೇಸಾಯಿ, ತೇಜಸ್ವಿ, ಅನಂತಮೂರ್ತಿ, ರಾಮಚಂದ್ರಶರ್ಮ, ಪಿ.ಲಂಕೇಶ್ ಮುಂತಾದವರು ಕತೆ, ಕಾವ್ಯ, ಕಾದಂಬರಿ, ಕವನ ಮುಂತಾದ ಸಾಹಿತ್ಯ ಪ್ರಕಾರಗಳನ್ನು ಬರೆದು ನವ್ಯ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು. ಅದರಲ್ಲಿ ರಾಜಶೇಖರ ನೀರಮಾನ್ವಿಯವರು ಒಬ್ಬ ದೊಡ್ಡ ಕತೆಗಾರರಾಗಿದ್ದು, ತನ್ನದೇ ಆದ ಬರವಣಿಗೆ, ವಸ್ತು, ಶೈಲಿ, ತಂತ್ರಗಳಿಂದ ನವ್ಯ ಕತೆಗಾರರ ಮಟ್ಟಕ್ಕೆ ನಿಲ್ಲುವಂತಹ ಕತೆಗಳನ್ನು ಬರೆದು ಕಥಾಸಾಹಿತ್ಯಕ್ಕೆ ತನ್ನದೇ ಆದಂತಹ ಕೊಡುಗೆಯನ್ನು ನೀಡಿ ಸದಾಕಾಲ ನೆನೆಪಿನಲ್ಲಿ ಉಳಿಯುವಂತಹ ಕತೆಗಾರರಾಗಿದ್ದಾರೆ. ಇವರ "ಹಂಗಿನರಮನೆಯ ಹೊರಗೆ", "ಕರ್ಪೂರದಕಾಯದಲ್ಲಿ" ಈ ಎರಡು ಕಥಾ ಸಂಕಲನಗಳಲ್ಲಿ ನವ್ಯ

[illegible]

ಕಥಾ ಸಾಹಿತ್ಯದ ಹಲವಾರು ಅಂಶಗಳನ್ನು ತಮ್ಮ ಕಥಾ ಸಾಹಿತ್ಯದಲ್ಲಿ ವಿಸ್ತರಿಸಿದ್ದಾರೆ. ಒಂಟಿತನ, ಹತಾಶೆ, ಅಸ್ತಿತ್ವವಾದ ವ್ಯಕ್ತಿ ಪ್ರಜ್ಞೆ ಕೇಂದ್ರಿತ ಹಿನ್ನಲೆಯಲ್ಲಿ ರಚನೆಯಾಗಿವೆ. ಲೋಹಿಯಾವಾದ, ಸಮಾಜವಾದ ಮತ್ತು ಮಾನವೀಯತೆಯ ಪ್ರಭಾವ ಇವರ ಕತೆಗಳಲ್ಲಿ ಕಂಡುಬರುತ್ತದೆ.

"ಯಶವಂತ ಚಿತ್ತಾಲರು ತಮ್ಮ ಮೊದಲ ಕಥಾ ಸಂಕಲನಗಳಾದ ಸಂದರ್ಶನ ಮತ್ತು ಅಬೋಲೀನ ಎಂಬ ಪ್ರಾರಂಭದ ಸಂಕಲನಗಳಲ್ಲಿರುವ ಬಹುಪಾಲು ಕತೆಗಳ ಹಿನ್ನಲೆ ಉತ್ತರ ಕನ್ನಡ ಜಿಲ್ಲೆಯ ಬಂಕಿಕೊಡ್ಲ, ಹನೇಹಳ್ಳಿ ಮತ್ತು ಸುತ್ತಮುತ್ತಲಿನ ಪರಿಸರಗಳು, ಹನೇಹಳ್ಳಿ ಚಿತ್ತಾಲರು ಹುಟ್ಟಿ ಬೆಳೆದಂತಹ ಹಳ್ಳಿಯಾಗಿದೆ. ಇಲ್ಲಿಯ ಬಾಲ್ಯದ ಅವರ ಅನುಭವಗಳು ಅವರ ಕತೆಗಳ ಭಾವಕೋಶಗಳಾಗಿವೆ. ಆಟ ಕತೆಯಾದಳು ಹುಡುಗಿ ಈ ಎರಡು ಕತೆಗಳು ಪ್ರಾರಂಭವಾಗುವುದು ಸಹ ಸಾವಿನಿಂದಲೇ, ಆಟ ಕತೆಯಲ್ಲಿ ಬುಡಣಸಾಹೇಬರ ಪಾತ್ರ ಚಿತ್ರಣ ತುಂಬಾ ಸೊಗಸಾಗಿ ಮೂಡಿಬಂದಿದೆ. ಇಡೀ ಕತೆಯೇ ಒಂದು ರೂಪಕವಾಗಿ ಅರಳುತ್ತದೆ. ಬುಡಣ ಸಾಬರ ಪಾತ್ರ ಚಿತ್ರಣಕ್ಕೆ ಚಿತ್ತಾಲರು ಅತೀ ಪ್ರಾಧಾನ್ಯತೆಯನ್ನು ಕೊಟ್ಟಿದ್ದಾರೆ. ಬುಡಣ ಸಾಬರು ಕಾಲದ ಪ್ರತೀಕವಿದ್ದಂತೆ ಮಾಗಿದ ಜೀವನಾನುಭವವನ್ನು ಸಂಕೇತಿಸುತ್ತಾರೆ."[25] ಚಿತ್ತಾಲರು ತಮ್ಮ ಶಿಕಾರಿ ಕಾದಂಬರಿಯಲ್ಲಿ ನಾಯಕನಿಗೆ ಸಮಸ್ಯೆಗಳು ಎದುರಾದಾಗ ಆ ಸಮಸ್ಯೆಗಳಿಗೆ ಮೂಲ ಕಾರಣ ಪರಿಹಾರವನ್ನು ಕಂಡು ಹಿಡಿಯಲು ಪ್ರಯತ್ನಿಸದೆ, ಆ ಸಮಸ್ಯೆಯ ಸುತ್ತಲೂ ಸುತ್ತುತ್ತಾ ಸಾಗುವುದು ಈ ಕಾದಂಬರಿಯ ವಸ್ತುವಾಗಿದೆ. ರಾಜಶೇಖರ ನೀರಮಾನ್ವಿಯವರು ಕತೆಯಾದಳು ಹುಡುಗಿ, ಆಟ, ಶಿಕಾರಿ ಈ ಎಲ್ಲಾ ಕತೆಗಳ ವಸ್ತು, ತಂತ್ರ, ಶೈಲಿಯ ಹಿನ್ನಲೆಯಲ್ಲಿ ತಮ್ಮ ವೃತ್ತ ಕತೆಯನ್ನು ನಿರೂಪಿಸಿದ್ದಾರೆ. ವೃತ್ತ ಕತೆಯು ಸಹ ಪ್ರಾರಂಭವಾಗುವುದು ನಾಯಿಯ ಸಾವಿನಿಂದಲೇ, ಇಡೀ ಕತೆಯು ಶಂಕರಪ್ಪಗೌಡನ ಪ್ರಜ್ಞೆಯಲ್ಲಿ ಬಿಚ್ಚಿಕೊಳ್ಳುತ್ತಾ ಸಾಗುತ್ತದೆ. ಇಲ್ಲಿ ಶಂಕರಪ್ಪಗೌಡ ಪಾತ್ರ ಚಿತ್ರಣಕ್ಕೆ, ನೀರ ಮಾನ್ವಿಯವರು ಅತೀ ಪ್ರಾಧಾನ್ಯತೆಯನ್ನು ಕೊಟ್ಟಿದ್ದಾರೆ. ಗೌಡರು ಸಾವಿಗೀಡಾಗುವ ಮುನ್ನ ತನ್ನ ಬದುಕನ್ನು ತಾನು ಅವಲೋಕಿಸಿಕೊಳ್ಳತೊಡಗುತ್ತಾರೆ. ಅಲ್ಲದೇ ತನ್ನ ಹೆಂಡತಿಯನ್ನು ನೆನೆದು ಹೊಲಕ್ಕೆ ಮನೆಗೆ ಚಲಿಸುತ್ತಲೇ ಹೆಮ್ಮೆ ಪಡುತ್ತಾರೆ. ಹೀಗೆ ಭೂತಕಾಲದ ನೆನಪುಗಳು, ಸಮಾಜಘಾತುಕ ಚಟುವಟಿಕೆಗಳು, ನಾಯಿಯ ಸಾವು ಈ ಕತೆಯಲ್ಲಿ ಹೂ ಅರಳಿದಂತೆ ಬಿಚ್ಚಿಕೊಳ್ಳುತ್ತದೆ. ಇದು ಕೂಡಾ ವ್ಯಕ್ತಿಪ್ರಜ್ಞೆ ಕೇಂದ್ರಿತ ಹಿನ್ನಲೆಯಲ್ಲಿ ರಚನೆಯಾಗಿದೆ. ಶಂಕರಪ್ಪಗೌಡನಿಗೆ ಸಮಸ್ಯೆಗಳು ಎದುರಾದಾಗ, ಆ ಸಮಸ್ಯೆಗಳ ಮೂಲ ಕಾರಣಕ್ಕೆ ಪರಿಹಾರವನ್ನು ಕಂಡುಹಿಡಿಯಲು ಪ್ರಯತ್ನಿಸದೇ ಆ ಸಮಸ್ಯೆಯ ಸುತ್ತಲೂ ಸುತ್ತುತ್ತಾ ಕೊನೆಗೆ ತಾನು ಸಾಯುವುದು ಈ ಕತೆಯಲ್ಲಿ ಕಾಣಬಹುದು. ನೀರಮಾನ್ವಿಯವರು ತಮ್ಮ ವೃತ್ತ ಕತೆಯಲ್ಲಿ ತಾವು ಹುಟ್ಟಿ ಬೆಳೆದಂತಹ ರಾಯಚೂರಿನ ಸುತ್ತಮುತ್ತಲಿನ ಪರಿಸರದ ಚಿತ್ರಣ ಕತೆಯಲ್ಲಿ ಪ್ರಮುಖವಾಗಿ ಕಂಡು ಬರುತ್ತದೆ. ಇಲ್ಲಿಯ ಬಾಲ್ಯದ ಅನುಭವಗಳು ಅವರ ಕತೆಗಳ ಭಾವಕೋಶಗಳಾಗಿವೆ. ಹೀಗೆ ಈ ಕತೆಯು ನವ್ಯ ಸಾಹಿತ್ಯದ ಪರಿಧಿಯಲ್ಲಿಯೇ ರಚನೆಯಾಗಿದೆ.

"ಯು.ಆರ್.ಅನಂತಮೂರ್ತಿಯವರ "ಕ್ಲಿಪ್‌ಜಾಯಿಂಟ್" ಶಕ್ತಿಶಾಲಿ ಕತೆಯಾಗಿದೆ. ಈ ಕತೆಯ ನಾಯಕ "ಕೇಶವ" ತನ್ನ ಭೂತದಲ್ಲಿ ಜಿಗುಪ್ಸೆ ಹೊಂದಿ, ಅದರಿಂದ ಪಾರಾಗುವ ದಾರಿ ಕಾಣದೆ ಹೊಸ ಬಾಳನ್ನು ಆರಿಸಿಕೊಂಡು ಭಾರತದಿಂದ ಇಂಗ್ಲೇಂಡಿಗೆ ತೆರಳುತ್ತಾನೆ. ಆತ ಬುದ್ಧಿವಂತ ಬಾಳಿನ ಸಾಧ್ಯತೆಗಳನ್ನು ಅರಿತವ, ಆತ್ಮ ವಿಮರ್ಶೆ ಮಾಡಿಕೊಳ್ಳುವ ವ್ಯಕ್ತಿ, ಹೊಸ ಅನುಭವದ ಅನ್ವೇಷಣೆಗೆ ಹೊರಟು ಕಡೆಗೆ ಶೂನ್ಯದ ಅನುಭವದಲ್ಲಿ ನಿಲ್ಲುತ್ತಾನೆ. ಇದು ಈ ಕತೆಯ ವಸ್ತುವಾಗಿದೆ. ಅನಂತಮೂರ್ತಿಯವರ ವೈಚಾರಿಕತೆ ಇಂತಹ ಕತೆಗಳಲ್ಲಿ ಕಣ್ಣಿಗೆ ಕಟ್ಟುವಂತೆ ಕಾಣಿಸುತ್ತದೆ."[2] ನೀರಮಾನ್ವಿಯವರು ಈ ಕತೆಯ ಹಿನ್ನಲೆಯಲ್ಲಿ ಅಥವಾ ಇದರ ಪ್ರಭಾವಕ್ಕೆ ಒಳಗಾಗಿ ತಮ್ಮ ಭೂತ ಕತೆಯನ್ನು ನಿರೂಪಿಸಿದ್ದಾರೆ. ಕುಟುಂಬ ಸಮಾಜ ಮತ್ತು ವ್ಯಕ್ತಿಯ ನಡುವಿನ ಅಂತರ ಸಂಬಂಧದ ತೀವ್ರ ಶೋಧ ಈ ಕತೆಯಲ್ಲಿಯೂ ಮುಂದುವರಿಯುತ್ತದೆ. ಭೂತ ವರ್ತಮಾನಗಳ ನಡುವೆ, ಕತೆಯು ಸಾಗಿ ರಮೇಶನ ವ್ಯಕ್ತಿ ಪ್ರಜ್ಞೆಯಲ್ಲಿ ಬಿಚ್ಚಿಕೊಳ್ಳುತ್ತಾ ಸಾಗುತ್ತದೆ. ರಮೇಶ ವಿದ್ಯಾವಂತ, ಬುದ್ಧಿವಂತ ಬಾಳಿನ ಅರ್ಥಸಾಧ್ಯತೆಗಳನ್ನು ಅರಿತವ, ಆತ್ಮವಿಮರ್ಶೆ ಮಾಡಿಕೊಳ್ಳುವ ವ್ಯಕ್ತಿ. ತನಗೆ ಬಂದಂತಹ ಸಮಸ್ಯೆಗಳನ್ನು ಪರಿಹಾರ ಮಾಡಿಕೊಳ್ಳಲು ಪ್ರಯತ್ನಿಸದೇ ಆ ಸಮಸ್ಯೆಯ ಸುತ್ತಾ ಸುತ್ತುತ್ತಾ ಪಲಾಯನವಾದಿಯಾಗುತ್ತಾನೆ. ಮತ್ತು ಆ ಸಮಸ್ಯೆಯನ್ನು ಪರೀಕ್ಷಿಸುವ ತಾಳ್ಮೆಯನ್ನು ಕಳೆದುಕೊಂಡು ವಿಕ್ಷಿಪ್ತ ವ್ಯಕ್ತಿತ್ವದವನಾಗುತ್ತಾನೆ. ಇಲ್ಲಿಯೂ ಕೂಡಾ ನವ್ಯ ಕಥಾ ಸಾಹಿತ್ಯದ ಒಂಟಿತನ, ಹತಾಶೆ, ನೋವು ಮುಂತಾದ ಅಂಶಗಳಿಂದಲೂ ಈ ಕತೆಯು ಹೊರತಾಗಿಲ್ಲ.

ಶಾಂತಿನಾಥ ದೇಸಾಯಿಯವರ "ಮುಕ್ತಿ" ಕಾದಂಬರಿಯ ಗೌರೀಶ ತನ್ನ ಅಸ್ತಿತ್ವವನ್ನು ಅಲ್ಲಾಡಿಸುವ ನೆಲೆಗಳನ್ನು ದ್ವೇಷಿಸುತ್ತಾ ವೈಯಕ್ತಿಕ ಹಿತಾಸಕ್ತಿಗನುಗುಣವಾಗಿ ತನ್ನ ಬದುಕನ್ನು ಭದ್ರಗೊಳಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಈ ಹಿನ್ನಲೆಯಲ್ಲಿ ಹಂಗಿನರಮನೆಯ ಹೊರಗೆ ಕತೆಯನ್ನು ಗ್ರಹಿಸಬಹುದು. ಇವರ ಹಂಗಿನರಮನೆಯ ಹೊರಗೆ ಕಥಾ ಸಂಕಲನದಲ್ಲಿ ಈ ಕತೆಯ ಕೇಂದ್ರ ಕ್ರಿಯೆ ರೋಗಿ. ಈ ಪಾತ್ರದ ಮೂಲಕ ಎಲ್ಲಾ ಪಾತ್ರಗಳು ಮುಖಾಮುಖಿಯಾಗುತ್ತವೆ. ನಾಯಕ ವ್ಯಕ್ತಿಯಾಗಿ ಕುಟುಂಬದಲ್ಲಿ ತನ್ನ ಅಸ್ತಿತ್ವವನ್ನು ಕಳೆದುಕೊಂಡಿರುತ್ತಾನೆ. ತಾನು ಬದುಕಿದಂತಹ ಸಮಾಜವನ್ನು ಕ್ಷಣಕ್ಷಣಕ್ಕೂ ದ್ವೇಷಿಸುತ್ತಾ, ಇಂತಹ ಬೆಲೆಯಿರದ ಸಮಾಜದಲ್ಲಿ ಬದುಕುವುದಕ್ಕಿಂತ ಸಾಯುವುದೇ ಲೇಸು ಎಂಬಂತಹ ನಿರ್ಣಯಕ್ಕೆ ಬಂದ ವ್ಯಕ್ತಿಯ ಸ್ವಭಾವವನ್ನು ವೈಯಕ್ತಿಕ ಸ್ತರದಿಂದ ಶೋಧಿಸುವ ಕಳಕಳಿ ತೋರಿದ್ದಾರೆ. ರೋಗಿಯು ತನ್ನ ಅಸ್ತಿತ್ವವನ್ನು ಅಲ್ಲಾಡಿಸುವ ನೆಲೆಗಳನ್ನು ದ್ವೇಷಿಸುತ್ತಾ ವೈಯಕ್ತಿಕ ಹಿತಾಸಕ್ತಿಗನುಗುಣವಾಗಿ ತನ್ನ ಬದುಕನ್ನು ಭದ್ರಗೊಳಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಹೀಗೆ ಈ ಕತೆಯು ವ್ಯಕ್ತಿ ಪ್ರಜ್ಞೆ ಕೇಂದ್ರಿತ ಹಿನ್ನಲೆಯಲ್ಲಿ ರಚನೆಯಾಗಿ, ನವ್ಯ ಸಾಹಿತ್ಯ ಸಂದರ್ಭದಲ್ಲಿ ಈ ಕತೆಗೆ ವಿಶೇಷ ಮನ್ನಣೆ ಸಿಕ್ಕಿದೆ.

"ಯಶವಂತ ಚಿತ್ತಾಲರ ಮೊದಲ ಕತೆ 'ಬೊಮ್ಮಿಯ ಹುಲ್ಲು ಹೊರೆ' ಅವರೇ ಹೇಳಿಕೊಂಡಂತೆ ಇದು ಒಂದು ಶೋಷಣೆಯ ಕತೆಯಾಗಿದೆ. ಮನುಷ್ಯ ಮನುಷ್ಯನನ್ನು ದುಡಿಸಿಕೊಳ್ಳುವಾಗ ಇರಬೇಕಾದ ಮಾನವೀಯತೆಯನ್ನು ಮರೆತರೆ ಆಗುವ ವ್ಯಕ್ತಿತ್ವದ ಛಿದ್ರೀಕರಣಕ್ಕೆ ಇದೊಂದು ನಿದರ್ಶನ. ಪಾರ್ವತಮ್ಮ ಅಕ್ಕಿಗೆ ಯಜಮಾನಿ, ಬೊಮ್ಮಿಯು ಶ್ರಮಕ್ಕೆ ಯಜಮಾನಿ. ಇಲ್ಲಿ ಅಕ್ಕಿಯ ಯಜಮಾನಿ ಶೋಷಿಸಬಹುದು, ಶ್ರಮದ ಯಜಮಾನಿ ಅದರ ಅರಿವಿಲ್ಲದೆಯೇ ದುಡಿಯಬಹುದು. ಪಾರ್ವತಮ್ಮ ತನಗೆ ಮೋಸ ಮಾಡುತ್ತಿರಬಹುದು ಎಂಬ ಪ್ರಜ್ಞೆಯಿಲ್ಲದೆ ಬೊಮ್ಮಿ, ತನ್ನ ಕಾಯಕ ನಿಷ್ಠೆಯಲ್ಲಿ ಬದುಕಿನಲ್ಲಿ ಅಸ್ತಿತ್ವವನ್ನು ಹುಡುಕಲು ಪ್ರಯತ್ನಿಸುತ್ತಾಳೆ."[5] ಇಂತಹ ವಸ್ತುವನ್ನು ಒಳಗೊಂಡು ರಾಜಶೇಖರ ನೀರಮಾನ್ವಿಯವರು ದುರಸ್ತಿ ಕತೆಯನ್ನು ನಿರ್ಮಿಸಿದ್ದಾರೆ. ದುರಸ್ತಿಕತೆಯು ನಗರ ಜೀವನಕ್ಕೆ ಸಂಬಂಧಿಸಿದಂತಹ ಕತೆಯಾಗಿದೆ ಈ ಕತೆಯ ನಾಯಕ ತಿಮ್ಮ ನಗರದಲ್ಲಿ ಸೈಕಲ್ ರಿಕ್ಷಾ ತುಳಿಯುವ ದುಡಿಮೆಗಾರ ದುಡಿಮೆಯಲ್ಲಿ ಯಾವುದೇ ವ್ಯತ್ಯಾಸವನ್ನು ಕಾಣದವನು. ಅನೈತಿಕ ಸಂಬಂಧದಲ್ಲಿ ಬದುಕುವ ಗಂಗಿಯನ್ನು ಮತ್ತು ತನ್ನ ತಂಗಿ ನಾಗಮ್ಮಳ ಜೀವನವನ್ನು ಮೇಲಕ್ಕೆತ್ತುವ ಪ್ರಯತ್ನದಲ್ಲಿ ತನ್ನ ಕೈ ತಾನೇ ಸುಟ್ಟುಕೊಂಡು ಕತೆಯ ಉದ್ದಕ್ಕೂ ಒಂದಲ್ಲ ಒಂದು ರೀತಿಯಲ್ಲಿ ಶೋಷಣೆಯ ಪಾತ್ರವಾಗಿ ಚಿತ್ರಿತವಾಗಿದ್ದಾನೆ. ಕೊನೆಗೆ ತನ್ನ ಅಸ್ತಿತ್ವವನ್ನು ಹುಡುಕಲು ಒಂಟಿಯಾಗಿ ಪ್ರಯತ್ನಿಸುತ್ತಾನೆ. ಇದರಿಂದ ಆತನಿಗೆ ಸಿಕ್ಕಿದ್ದು ನೋವು, ಹತಾಶೆ, ಅಗಲಿಕೆ. ಹೀಗೆ ಈ ಕತೆಯು ಕೂಡಾ ನವ್ಯಕಥಾ ಸಾಹಿತ್ಯದ ವಸ್ತು, ತಂತ್ರ, ಶೈಲಿಗಳಿಂದ ರಚನೆಯಾಗಿ ತನ್ನದೇ ಅದಂತಹ ಸ್ಥಾನವನ್ನು ಪಡೆದುಕೊಂಡಿದೆ.

ರಾಜಶೇಖರ ನೀರಮಾನ್ವಿಯವರ ಎರಡನೆಯ ಕಥಾ ಸಂಕಲನ 'ಕರ್ಪೂರದ ಕಾಯದಲ್ಲಿ' ಹೆಚ್ಚು ಸಮಾಜಮುಖಿಯಾಗಿದೆ. ನೀರಮಾನ್ವಿಯವರು ಗ್ರಾಮೀಣ ಬದುಕಿನ ನೆಲೆಗಳನ್ನು ಶೋಧಿಸುವಂತೆಯೇ, ಆಧುನಿಕ ಬದುಕಿನ ನೆಲೆಗಳನ್ನು ಶೋಧಿಸುತ್ತಾರೆ. ಎರಡನೆಯ ಸಂಕಲನದಲ್ಲಿ ಅನುಭವಗಳ ಸಾಂದ್ರತೆ, ವಾಸ್ತವಿಕ ಘಟನೆಗಳೂ ಇನ್ನೂ ಹೆಚ್ಚುತ್ತವೆ. ಸಾಮಾನ್ಯವಾಗಿ ಸರ್ವಸಾಕ್ಷಿ ನಿರೂಪಣೆಯಲ್ಲಿ ಕತೆಗಳಿವೆ. ಇಲ್ಲಿಯೂ ವ್ಯಕ್ತಿಯ ಪ್ರಜ್ಞೆಯ ಮೂಲಕ ನಿರೂಪಣಾಕೋನವಿದ್ದರೂ ಸಾಮಾಜಿಕ ಆಶಯಗಳು, ತುಡಿತಗಳು ಮಹತ್ವದ್ದಾಗುತ್ತವೆ.

"ಶಾಂತಿನಾಥ ದೇಸಾಯಿಯವರ "ದಂಡೆ" ಕತೆಯು ಕೌಟುಂಬಿಕ ಹಿನ್ನಲೆಯಲ್ಲಿ ರಚನೆಯಾದಂತಹ ಕತೆಯಾಗಿದೆ. ಇಲ್ಲಿ ಗಂಡು ಹೆಣ್ಣನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಂಡು ಬಾಳುವ ಸ್ಥಿತಿ ಒಂದುಕಡೆ, ಹೆಣ್ಣನ್ನು ಸುಲಿಗೆಯ ಸಾಧನವಾಗಿಸಿಕೊಂಡು ಗಂಡು ಅನ್ನ ಸಂಪಾದಿಸಬೇಕೆಂಬ ಸಾಧ್ಯತೆ ಇನ್ನೊಂದು ಕಡೆ, ಇಂತಹ ಸಾಮಾಜಿಕ ಅಂಶಗಳನ್ನು ಈ ಕತೆಯು ಒಳಗೊಂಡಿದೆ. ಅದೇ ರೀತಿಯಗಿ ರಾಕ್ಷಸ ಸಂಕಲನದ ಬಹುಪಾಲು ಕತೆಗಳಲ್ಲಿ ಸಹ ದೇಸಾಯಿ ಅವರ ಪ್ರಧಾನ ಥೀಮ್‌ಗಳಾದ ಗಂಡು ಹೆಣ್ಣಿನ ನಡುವಿನ ಕಾಮ, ಪ್ರೇಮಗಳ ಸಂಬಂಧದ ಶೋಧನೆಯೇ ಕಾಣಿಸಿಕೊಂಡಿಸಿದೆ. ಸ್ವಲ್ಪ ವಯಸ್ಸಾದ ಹೆಂಗಸೊಬ್ಬಳು ಯುವಕನೊಂದಿಗೆ ಸಂಬಂಧವನ್ನು ಸ್ಥಾಪಿಸುವುದು. ಅವಳನ್ನು ಕೆರಳಿಸುವ ಕಾಮ

ರಾಕ್ಷಸನನ್ನು ಸಂಕೇತಿಸುತ್ತದೆ. ಆ ಹೆಣ್ಣಿನ ಮಾನಸಿಕ ಹಿಂಸೆ ಸ್ಥಿತಿಯನ್ನು ಕತೆಗಾರರು ವಿಶಿಷ್ಟ ಅನುಭವವಾಗಿ ಚಿತ್ರಿಸಿದ್ದಾರೆ. ಹೆಣ್ಣು ಇಲ್ಲಿಯ ಕೇಂದ್ರ ವಸ್ತು. ಇಂತಹ ವಸ್ತುವನ್ನು ಇಟ್ಟುಕೊಂಡು ಈ ಕತೆ ರಚನೆಯಾಗಿದೆ.''[೧೯] ವ್ಯಕ್ತಿ ಕೇಂದ್ರ ಪ್ರಜ್ಞೆಯಿಂದಾಗಿ ದೇಸಾಯಿ ಅವರ ಕತೆಗಳು ಕನ್ನಡ ನವ್ಯ ಕಥಾ ಸಾಹಿತ್ಯದಲ್ಲಿ ತಮ್ಮದೇ ಆದ ವಿಶಿಷ್ಟ ಛಾಪನ್ನು ಪಡೆದಿವೆ. ನವ್ಯ ಕಥಾ ಸಾಹಿತ್ಯಕ್ಕೆ ಹೊಸ ಗಾಳಿಯನ್ನು ಆಕಾರವನ್ನು, ಹೊಸ ಶೈಲಿಯನ್ನು ತಂದು ಕೊಟ್ಟ ಅಪರೂಪದ ಕತೆಗಾರರಾಗಿದ್ದಾರೆ. ರಾಜಶೇಖರ ನೀರಮಾನ್ವಿಯವರ ನೆಲೆ ಕತೆಯ ವಸ್ತು ಕೂಡಾ ಹೆಣ್ಣು ಇಂತಹ ವಸ್ತುವನ್ನಿಟ್ಟುಕೊಂಡು ಈ ಕತೆ ರಚನೆಯಾಗಿದೆ ಈ ಕತೆಯು ಕೂಡಾ ವ್ಯಕ್ತಿ ಕೇಂದ್ರ ಪ್ರಜ್ಞೆಯಲ್ಲಿಯೇ ಸಾಗುತ್ತದೆ. ಸಾಂಪ್ರದಾಯಿಕ ಸಮಾಜದಲ್ಲಿ ಪುರುಷ ಕೇಂದ್ರಿತ ನೆಲೆಯಲ್ಲಿ ಹೆಣ್ಣು ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳಲು ಹೇಗೆ ಹೋರಾಟ ಮಾಡುತ್ತಾಳೆ ಎಂಬುದನ್ನು "ರಂಗಮ್ಮನ" ಪಾತ್ರದ ಮೂಲಕ ವ್ಯಕ್ತಿತ್ವದ ಪರಿಚಯವನ್ನು ಮಾಡಿಕೊಡಲಾಗಿದೆ. ನಮ್ಮ ಸಮಾಜ ಹೆಣ್ಣನ್ನು ಅರಿತಿರುವ ಸ್ಥಿತಿಗೂ ಗಂಡು ಅದನ್ನು ದುರುಪಯೋಗ ಪಡಿಸಿಕೊಳ್ಳುವ ರೀತಿಗೂ ಯಾವ ರೀತಿ ಸಂಬಂಧವಿದೆ ಎಂಬುದನ್ನು ಆ ಹೆಣ್ಣಿನ ಮಾನಸಿಕ ಹಿಂಸೆ, ಸ್ಥಿತಿಯನ್ನು ಕತೆಗಾರರು ಇಲ್ಲಿ ಧ್ವನಿಪೂರ್ಣವಾಗಿ ಚಿತ್ರಿಸಿದ್ದಾರೆ. ಹೀಗೆ ಈ ಕತೆಯಲ್ಲಿ ತನ್ನತನವನ್ನು ಉಳಿಸಿಕೊಳ್ಳಲು, ಸ್ವಾತಂತ್ರ್ಯ ಮತ್ತು ಆಯ್ಕೆಯ ಹಕ್ಕನ್ನು ಪಡೆಯಲು ಹೋರಾಟ ನಡೆಸುತ್ತಾಳೆ. ಈ ಕತೆಗೆ ನವ್ಯ ಸಾಹಿತ್ಯ ಸಂದರ್ಭದಲ್ಲಿ ವಿಶೇಷ ಮನ್ನಣೆ ಸಿಕ್ಕಿದೆ.

"ಶಾಂತಿನಾಥ ದೇಸಾಯಿಯವರ "ಪರಿವರ್ತನೆ" ಕತೆಯ ವಸ್ತು ಮೇಲ್ಜಾತಿಯ ಹುಡುಗಿಯೊಬ್ಬಳು ಕೆಳಜಾತಿಯ ಹುಡುಗನ ಜೊತೆ ಓಡಿ ಹೋಗುವ ಆಶಯವುಳ್ಳ ಕತೆಯಾಗಿದೆ. ಈ ಸಂಕಲನದಲ್ಲಿನ ಬಹುಪಾಲು ಕತೆಗಳ ಪ್ರಧಾನ ಆಶಯವೆಂದರೆ ಹಳೆಯ ಸಂಪ್ರದಾಯಗಳನ್ನು ನಿರಾಕರಿಸುವ, ಹೊಸ ಸಂಪ್ರದಾಯಗಳನ್ನು ಅನುಸರಿಸುವ ಅಂಶಗಳಿಗೆ ಹೆಚ್ಚು ಒತ್ತುಕೊಟ್ಟಿದ್ದಾರೆ. ಕ್ಷಿಪ್ರಗತಿಯಲ್ಲಿ ದಾಳಿ ಮಾಡುತ್ತಿರುವ ಆಧುನಿಕತೆ, ಮೌಲ್ಯ ಪರಿವರ್ತನೆ, ಹಳೆಯದನ್ನು ಕಳಚಿಕೊಂಡು ಹೊಸದನ್ನು ಪಡೆಯುವ ಹಂಬಲ, ಮಾನವ ಸಂಬಂಧವನ್ನು ಸ್ಥಾಪಿಸುವುದು ಅವರ ಕತೆಗಳ ಉದ್ದಕ್ಕೂ ಕಂಡುಬರುತ್ತವೆ. ದೇಸಾಯಿಯವರ ಮನೋಧರ್ಮ ಮೂಲತಃ ಸುಧಾರಣೆ ಅಲ್ಲ ಸಮಾಜದ ಪರಿವರ್ತನೆ ಬದಲಾದ ಆಧುನಿಕ ಸಮಾಜದಲ್ಲಿ ಜಾತಿ ಪದ್ಧತಿ, ಮದುವೆ ಮುಂತಾದ ಸಮಸ್ಯೆಗಳಿಗೆ ಮಹತ್ವ ಕೊಡಬಾರದು ಎಂಬುದು ಇವರ ಕತೆಗಳಿಂದ ಮೂಡಿ ಬರುವ ತಿಳುವಳಿಕೆಯಾಗಿದೆ.''[೨೦] ಇಂತಹ ವಸ್ತುವನ್ನಿಟ್ಟುಕೊಂಡು ರಾಜಶೇಖರ ನೀರಮಾನ್ವಿಯವರು "ಗುಡಿಯ ನೋಡಿರಣ್ಣಾ" ಕತೆಯನ್ನು ನಿರೂಪಿಸಿದ್ದಾರೆ. ಈ ಕತೆಯಲ್ಲಿ ರವಿ ಎಂಬ ಪಾತ್ರದ ಮೂಲಕ ಅಂತರ್ಜಾತೀಯ ವಿವಾಹಕ್ಕೆ ನಾಂದಿ ಹಾಡಿ, ಹಳೆಯ ಸಂಪ್ರದಾಯಗಳನ್ನು ನಿರಾಕರಿಸಿ, ಹೊಸ ಸಂಪ್ರದಾಯಗಳನ್ನು ಅನುಸರಿಸುವಂತೆ ಈ ಕತೆಯನ್ನು ನಿರ್ಮಿಸಿದ್ದಾರೆ. ಬದಲಾದ ಆಧುನಿಕ ಸಮಾಜದಲ್ಲಿ ಜಾತಿಪದ್ಧತಿ, ಮದುವೆ ಮುಂತಾದ ಸಮಸ್ಯೆಗಳಿಗೆ ಮಹತ್ವವನ್ನು ಕೊಡದೇ ಮಾನವೀಯ ಮೌಲ್ಯವನ್ನು ಮೆರೆಯುವ ಕತೆಯಾಗಿ ಚಿತ್ರಿಸಿದ್ದಾರೆ. ಹೀಗೆ ಈ ಕತೆಯು ಕೂಡಾ ನವ್ಯ ಸಾಹಿತ್ಯದ ಪರಿಧಿಯಲ್ಲಿಯೇ ರಚನೆಯಾಗಿರುವುದನ್ನು ಗುರುತಿಸಬಹುದು ಅಥವಾ ಕಾಣಬಹುದು.

"ಶಾಂತಿನಾಥದೇಸಾಯಿಯವರ "ಮಂಜುಗಡ್ಡೆ" ಮೊದಲ ಕಥಾಸಂಕಲನ ಇಲ್ಲಿಯ ಕತೆಗಳೆಲ್ಲವು ಮನುಷ್ಯನ ಮನಸ್ಸಿನ ತುಡಿತಗಳನ್ನು ಚಿತ್ರಿಸುತ್ತವೆ. ಮಾನವನ ಒಳಮನಸ್ಸಿನ ಲೈಂಗಿಕ ಪದರಗಳನ್ನು ಸೂಕ್ಷ್ಮವಾಗಿ ಶೋಧಿಸುತ್ತವೆ. ಮನುಷ್ಯನ ಜಡ ಸಂವೇದನೆಗಳನ್ನು ಪುನರ್ ವಿಮರ್ಶಿಸುವ ಪ್ರಯೋಗದಲ್ಲಿ ಹೊಸ ಅವಿಷ್ಕಾರ ಪಡೆಯುತ್ತವೆ. "ಚಂದು" ಕತೆ ವಸ್ತುವಿನ ದೃಷ್ಟಿಯಿಂದ ಗಮನಾರ್ಹವಾದ ಕತೆ. ಲೈಂಗಿಕ ಸನ್ನಿವೇಶವೊಂದರಲ್ಲಿ ಸಿಕ್ಕಿಕೊಂಡ ಚಂದೂ ಎಂಬ ಅಪ್ರಬುದ್ಧ ಹುಡುಗನ ಮಾನಸಿಕಗೊಂದಲವನ್ನು ಅವನ ಯಾತನೆಯನ್ನು ವಿವಾಹ ಪೂರ್ವದ, ವಿವಾಹದ ನಂತರದ ಲೈಂಗಿಕ ಸಂಬಂಧಗಳನ್ನು ಅತೃಪ್ತ ಹೆಣ್ಣಿನ ಲೈಂಗಿಕ ಬಯಕೆಗಳನ್ನು ಈ ಕತೆಯಲ್ಲಿ ಕಾಣಬಹುದು.'"[೫೫] ರಾಜಶೇಖರ ನೀರಮಾನ್ವಿಯವರ "ಎಂಥಾ ಮೋಜಿನ ಕುದುರೆ ಕತೆಯ" ಕಥಾಸಂವಿಧಾನ, ವಸ್ತುವಿಶೇಷ ಕಲೆಗಾರಿಕೆಯ ಶಕ್ತಿ ಈ ಎಲ್ಲಾ ಅಂಶಗಳಿಂದ ಚಂದೂ ಹಾಗೂ ಮಂಜುಗಡ್ಡೆ ಕತೆಗಳ ಹಿನ್ನಲೆಯಲ್ಲಿ ರಚನೆಯಾಗಿದೆ. ಈ ಕತೆಯನಾಯಕ ವಿಜಯ ಉತ್ಸಾಹಿ ತರುಣ ತಾರುಣ್ಯದ ಅಮಲಿನಲ್ಲಿ ಹಲವು ಹೆಣ್ಣುಗಳೊಂದಿಗೆ ಚಕ್ಕಂದವಾಡಿ ಲೈಂಗಿಕ ರೋಗಕ್ಕೆ ತುತ್ತಾಗಿ ಸಾಯುವುದು ವಿವಾಹಪೂರ್ವಸಂಬಂಧ, ಹಾಗೂ ಲೈಂಗಿಕ ಬಯಕೆಗಳನ್ನು ಇಟ್ಟುಕೊಂಡು ಈ ಕತೆಯು ರಚನೆಯಾಗಿದೆ. ಹೀಗೆ ನವ್ಯ ಕಥಾಸಾಹಿತ್ಯದ ಅಂಶಗಳಿಂದ ಹೊರತಾಗಿ ರಚನೆಯಾಗಿಲ್ಲ.

"ಬಿ.ಸಿ.ರಾಮಚಂದ್ರಶರ್ಮರ 'ಕೊಡತಿಹುಳ' ಮನುಷ್ಯನ ಮೂಲಭೂತ ಸಮಸ್ಯೆ ಹಾಗೂ ಸಮಾಜದ ನಡುವಿನ ಸಂಬಂಧದ ಎಳೆಗಳನ್ನು ಅದರ ಒಳಸತ್ವಗಳನ್ನು ಕೊಡತಿಹುಳ ಕತೆಯಲ್ಲಿ ಶರ್ಮರು ಸೂಕ್ಷ್ಮವಾಗಿ ಶೋಧಿಸಿದ್ದಾರೆ. ಕೊಡತಿಹುಳ ಕತೆಯ ನಾಯಕ, 'ಜಾನಿ' ಒಬ್ಬ ವಿಚಾರವಂತ ಹುಡುಗ. ಕ್ರಿಸ್ತನ ಜನ್ಮದ ಕತೆಯ ಬಗ್ಗೆ ದೇವರ ಹಾಗೂ ಚರ್ಚಿನ ಅಸ್ತಿತ್ವದ ಬಗ್ಗೆ ತನ್ನ ತಾಯಿಯ ಹತ್ತಿರ ಪ್ರಶ್ನೆ ಮಾಡುತ್ತಾನೆ. ಕ್ರಿಸ್ತನ ಹುಟ್ಟು ವೈಜ್ಞಾನಿಕವಾಗಿ ಸಾಧ್ಯವಿಲ್ಲ ಆದ್ದರಿಂದ ಸಂಪ್ರದಾಯಗಳಲ್ಲಿ ಸ್ವಲ್ಪವೂ ಅರ್ಥವಿಲ್ಲ ಎಂಬುದೇ ಆತನ ಪ್ರತಿಪಾದನೆ. ಒಟ್ಟಿನಲ್ಲಿ ಸುತ್ತಲೂ ಪರಿಸರದ ನಂಬಿಕೆ ಕ್ಷುದ್ರತೆಯನ್ನು ಬೇಡವಾದ ದೇವರನ್ನು, ಬೇಕಾದ ಮಾನವೀಯ ಮೌಲ್ಯಗಳನ್ನು ಸ್ಥಾಪಿಸುವತ್ತ, ಶೋಧಿಸುವತ್ತ ಇವರ ಕತೆಯು ಸಾಗಿದೆ."[೫೧] ಇದೇ ರೀತಿಯ ವಸ್ತುವನ್ನಿಟ್ಟುಕೊಂಡು ರಾಜಶೇಖರ ನೀರಮಾನ್ವಿಯವರ ಬೆತ್ತಲೆಸ್ವಾಮಿ ಕತೆಯು ರಚನೆಯಾಗಿದೆ. ಬೆತ್ತಲೆಸ್ವಾಮಿ ಎಂಬ ಕತೆಯಲ್ಲಿ ಪವಾಡ ಪುರುಷನೆಂದು ಕರೆಸಿಕೊಂಡವನ ನೈಜ ಚಿತ್ರಣವಿದೆ. ಬೆತ್ತಲೆಸ್ವಾಮಿಯನ್ನು ಪೂಜಿಸಿದವರಿಗೆ ಹಲವಾರು ಪ್ರಯೋಜನಗಳು ಲಭ್ಯವಾಗುತ್ತವೆ ಎಂಬಂತಹ ಸಂಪ್ರದಾಯಗಳಲ್ಲಿ ಸ್ವಲ್ಪವೂ ಅರ್ಥವಿಲ್ಲ ಎಂಬುದು ಈ ಕತೆಯ ಪ್ರತಿಪಾದನೆ ಈ ಕತೆಯು ಕೂಡಾ ಸುತ್ತಲೂ ಪರಿಸರದ ನಂಬಿಕೆಗಳನ್ನು, ಬೇಡವಾದ ದೇವರನ್ನು ಮಾನವೀಯ ಮೌಲ್ಯಗಳನ್ನು ಶೋಧಿಸುವಲ್ಲಿ ಯಶಸ್ವಿಯಾಗಿದೆ. ಈ ಕತೆಯು ಕೂಡಾ ನವ್ಯ ಸಾಹಿತ್ಯದ ಹಿನ್ನಲೆಯಲ್ಲಿಯೇ ರಚನೆಯಾಗಿರುವುದನ್ನು ಕಾಣಬಹುದು.

[illegible]

ಯಶವಂತಚಿತ್ತಾಲರು, "ಪುರುಷೋತ್ತಮ"ದಲ್ಲಿ ಮನುಷ್ಯನ ಬದುಕು ಪರವಾದ ಸೃಜನಶೀಲತೆಯನ್ನು ಅರಿಯಲು ಬಹಳ ವಿಸ್ತೃತವಾದ ಲೋಕವೊಂದಕ್ಕೆ ಪಯಣಿಸಿದ್ದಾರೆ. ವ್ಯಕ್ತಿಯ ಪರಿಸರದ ಸುತ್ತಮುತ್ತ ಮಾನವೀಯತೆಯನ್ನು ಮೆರೆಯುವಂತೆ, ಮನುಷ್ಯನ ಬದುಕನ್ನು ಮಾನವೀಯಗೊಳಿಸಲಿಕ್ಕಾಗಿ ತಮ್ಮ ಪುರುಷೋತ್ತಮ ಕಾದಂಬರಿಯನ್ನು ರಚಿಸಿದ್ದಾರೆ. ಒಟ್ಟಿನಲ್ಲಿ ಮನುಷ್ಯನೇ ಮನುಷ್ಯನ ಬದುಕನ್ನು ಅರಿಯಬೇಕಾದ ಮೂಲಭೂತ ಆಶಯಕ್ಕೆ ತಮ್ಮನ್ನು ತಾವು ಅರ್ಪಿಸಿಕೊಂಡಿದ್ದಾರೆ. ಇದೇ ವಸ್ತುವನ್ನು ಇಟ್ಟುಕೊಂಡು ರಾಜಶೇಖರ ನೀರಮಾನ್ವಿಯವರು ಪ್ರಜಾಪ್ರಭುತ್ವದಲ್ಲಿ ಸಾವು ಎಂಬ ಕತೆಯನ್ನು ನಿರೂಪಿಸಿದ್ದಾರೆ. ಕತೆಯ ಆರಂಭದಲ್ಲಿ ಒಬ್ಬ ವಿಷ ತೆಗೆದುಕೊಂಡು ರಸ್ತೆಯಲ್ಲಿ ಉರುಳಾಡುತ್ತಿರುತ್ತಾನೆ. ಅದನ್ನು ಗುಂಪುಗಟ್ಟಿ ಜನರು ನೋಡುತ್ತಿರುತ್ತಾರೆ. ಅದರಲ್ಲಿ ಒಬ್ಬ ಅಧ್ಯಾಪಕನಾದ "ಪ್ರಕಾಶ" ಆತನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಸೇರಿಸುವುದು. ಇಲ್ಲಿ ಗಮನಿಸುವ ಪ್ರಮುಖ ಅಂಶವೆಂದರೆ ಮಾನವೀಯತೆಯನ್ನು ಮರೆಯುವುದು ಈ ಕತೆಯ ವಸ್ತುವಾಗಿದೆ.

ಕನ್ನಡ ಕಥಾ ಸಾಹಿತ್ಯ ಸಂದರ್ಭದಲ್ಲಿ ನೀರಮಾನ್ವಿಯವರ ಕಥನ ತಂತ್ರ ವಿಶೇಷವಾದುದು. ಬರವಣಿಗೆಯನ್ನು ಕೇವಲ ಎರಡು ಕಥಾಸಂಕಲನಗಳಿಗೆ ಮಾತ್ರ ಸೀಮಿತವಾಗಿರಿಸಿದ್ದರೂ ನವ್ಯದ ಅಂಶಗಳು ಇವರ ಕತೆಯ ಮೇಲೆ ಪ್ರಭಾವ ಬೀರಿವೆ. ನವ್ಯದ ಅಂತಿಮ ಹಾಗೂ ದಲಿತ ಬಂಡಾಯದ ಆರಂಭದಲ್ಲಿ ಬರುವಂತಹ ನೀರಮಾನ್ವಿಯವರು, ಕನ್ನಡದ ನವ್ಯ ಕತೆಗಾರರ ಸ್ಥಾನದಲ್ಲಿ ನಿಲ್ಲುವಂತಹ ಅಪರೂಪದ ಕತೆಗಾರರಾಗಿ ಹೊರ ಹೊಮ್ಮಿದ್ದಾರೆ. ಲಂಕೇಶ್, ತೇಜಸ್ವಿ, ಚಿತ್ತಾಲ ನವ್ಯದ ಜಾಡಿನಿಂದ ಹೊರ ಬಂದು ಲೋಹಿಯಾ, ಅಂಬೇಡ್ಕರ್, ಗಾಂಧಿ, ವಿಚಾರಗಳ ಪ್ರಭಾವದಿಂದ ಕತೆಗಳನ್ನು ಬರೆದರು. ಈ ಪಲ್ಲಟವನ್ನು ನೀರಮಾನ್ವಿ ಅವರ ಕತೆಗಳಲ್ಲಿಯೂ ಸಹ ಕಾಣಬಹುದು.

ಅಡಿಟಿಪ್ಪಣಿ

೦೧. ಎಲ್.ಎಸ್.ಶೇಷಗಿರಿರಾವ್, ಹೊಸಗನ್ನಡ ಸಾಹಿತ್ಯ ಚರಿತ್ರೆ, ೨೦೦೮, ಪುಟ-೭

೦೨. ಅದೇ, ಪುಟ-೭,೮

೦೩. ಸಿ.ಎನ್.ರಾಮಚಂದ್ರನ್, ನವ್ಯ ಸಾಹಿತ್ಯದ ಬಹುಮುಖೀ ಶೋಧ, ಪ್ರಜಾವಾಣಿ ೧೧ನೇ ಫೆಬ್ರವರಿ, ೨೦೦೭, ಪುಟ-೭

೦೪. ನರಹಳ್ಳಿ ಬಾಲಸುಬ್ರಹ್ಮಣ್ಯಂ, ನವ್ಯತೆ, ೧೯೯೯, ಪುಟ-೩

೦೫. ಎಚ್.ಎಂ.ಚೆನ್ನಯ್ಯ, ಕನ್ನಡ ನವ್ಯ ಚಳುವಳಿ, ೧೯೯೦, ಪುಟ-೬೨

೦೬. ಕರೀಗೌಡ ಬೀಚನಹಳ್ಳಿ, ವ್ಯಷ್ಟಿ ಮತ್ತು ಸಮಷ್ಟಿ, ೧೯೯೧, ಪುಟ-೧೧೭, ೧೧೮, ೧೨೬

೦೭. ಅದೇ, ಪುಟ-೧೪೨, ೧೫೩

೦೮. ಡಾ.ಎಸ್.ಕೋದಂಡರಾಮ, ಕನ್ನಡ ಕಥಾಸಾಹಿತ್ಯ ಲೋಕದಲ್ಲಿ ಸಾಂಸ್ಕೃತಿಕ ಸಂಘರ್ಷ, ೧೯೯೬, ಪುಟ-೧೭೮

೦೯. ಕರೀಗೌಡ ಬೀಚನಹಳ್ಳಿ, ವ್ಯಷ್ಟಿ ಮತ್ತು ಸಮಷ್ಟಿ, ೧೯೯೧, ಪುಟ-೧೩೯

೧೦. ಅದೇ, ಪುಟ-೧೪೦

೧೧. ಅದೇ, ಪುಟ-೧೩೪

೧೨. ಅದೇ, ಪುಟ-೧೧೩, ೧೧೬

ಅಧ್ಯಾಯ - ನಾಲ್ಕು

ನೀರಮಾನ್ವಿಯವರ ಕಥನ : ಪ್ರಾದೇಶಿಕತೆಯ ನಿರ್ವಚನ

೪.೧. ವ್ಯಕ್ತಿವಿಶಿಷ್ಟತೆ ಮತ್ತು ಸಮಷ್ಟಿ ವಿಶಿಷ್ಟತೆ

೪.೨. ಹಳ್ಳಿ ಮತ್ತು ನಗರಗಳ ಸ್ವರೂಪ

೪.೩. ಅಸ್ತಿತ್ವವಾದ

೪.೪. ಮಹಿಳಾ ಲೋಕ

೪.೫. ನಂಬಿಕೆಗಳು, ಸಂಪ್ರದಾಯಗಳು, ಆಚರಣೆಗಳು

೪.೬. ದಲಿತ ಲೋಕ

ಅಧ್ಯಾಯ - ನಾಲ್ಕು

ನೀರಮಾನ್ವಿಯವರ ಕಥನ : ಪ್ರಾದೇಶಿಕತೆಯ ನಿರ್ವಚನ

೪.೧. ವ್ಯಕ್ತಿ ವಿಶಿಷ್ಟತೆ, ಮತ್ತು ಸಮಷ್ಠಿ ವಿಶಿಷ್ಟತೆ

ರಾಜಶೇಖರ ನೀರಮಾನ್ವಿಯವರು ಕನ್ನಡದ ಕತೆಗಾರರದಲ್ಲಿ ಒಬ್ಬರಾಗಿದ್ದು, ಕನ್ನಡ ಕಥಾ ಸಾಹಿತ್ಯ ಲೋಕಕ್ಕೆ ಎರಡು ಕಥಾ ಸಂಕಲನಗಳನ್ನು ಕೊಡುಗೆಯಾಗಿ ನೀಡಿದ್ದಾರೆ. ಇವರು ನವ್ಯದ ಕತೆಗಾರರ ಜಾಡಿನಲ್ಲಿಯೇ ತಮ್ಮ ಕತೆಗಳನ್ನು ಬರೆದಿದ್ದಾರೆ. ನವ್ಯದ ಕತೆಗಾರರು ಸಮಾಜ ಕೇಂದ್ರಿತ ಕತೆಗಳ ರಚನೆಗೆ ಹೆಚ್ಚಿನ ಒತ್ತನ್ನು ಕೊಡದೇ, ವ್ಯಕ್ತಿ ಕೇಂದ್ರಿತ ಕತೆಗಳ ರಚನೆಗೆ ಹೆಚ್ಚಿನ ಒತ್ತನ್ನು ನೀಡಿದ್ದಾರೆ. ರಾಜಶೇಖರ ನೀರಮಾನ್ವಿಯವರು ಕೂಡಾ ಇದೇ ಹಾದಿಯಲ್ಲಿ ಕತೆಗಳನ್ನು ರಚಿಸಿರುವುದನ್ನು ಕಾಣಬಹುದು. ಇದರಲ್ಲಿ ಹಂಗಿನರಮನೆಯಹೊರಗೆ ಈ ಕಥಾಸಂಕಲನದಲ್ಲಿ ಬರುವ ಬಹುಪಾಲು ಕತೆಗಳು ವ್ಯಕ್ತಿಕೇಂದ್ರಿತ ಹಿನ್ನಲೆಯಲ್ಲಿ ರಚನೆಯಾಗಿರುವುದನ್ನು ಕಾಣಬಹುದು. ಇವರ ಮತ್ತೊಂದು ಕಥಾಸಂಕನ ಕರ್ಪೂರದ ಕಾಯದಲ್ಲಿ ಸಮಾಜ ಕೇಂದ್ರಿತ ಹಿನ್ನಲೆಯಲ್ಲಿ ರಚನೆಯಾಗಿರುವದನ್ನು ಗುರುತಿಸಬಹುದು. "ವ್ಯಕ್ತಿಪ್ರಜ್ಞೆ ಕೇಂದ್ರಿತ ಕತೆಗಳನ್ನು ಕಲಾತ್ಮಕವಾಗಿ ಕಟ್ಟುವಂತೆ, ಸಮಾಜ ಕೇಂದ್ರಿತ ಪ್ರಜ್ಞೆಯ ಮೂಲಕ ಕತೆಗಳನ್ನು ಕಟ್ಟುವದು ಇವರ ಮತ್ತೊಂದು ಆಯಾಮ ನೀರಮಾನ್ವಿಯವರ ಕತೆಗಳಲ್ಲಿದೆ. ವೃತ್ತ, ಭೂತ, ಹಂಗಿನರಮನೆಯಹೊರಗೆ ದುರಸ್ತಿ, ನೆಲೆ ಇವು ವ್ಯಕ್ತಿ ಪ್ರಜ್ಞೆ ಕೇಂದ್ರಿತ ನೆಲೆಯಲ್ಲಿ ಸಾಗಿದರೆ, ಬೆತ್ತಲೆಸ್ವಾಮಿ, ಪ್ರಜಾಪ್ರಭುತ್ವದಲ್ಲಿ ಸಾವು, ಗುಡಿಯ ನೋಡಿರಣ್ಣಾ, ಕರ್ಪೂರದ ಕಾಯದಲ್ಲಿ ಈ ಕತೆಗಳಲ್ಲಿ ವ್ಯಕ್ತಿ ಪ್ರಜ್ಞೆಗಿಂತ ಸಮೂಹ ಪ್ರಜ್ಞೆ ಹೆಚ್ಚಾಗಿರುವುದನ್ನು ಕಾಣಬಹುದು. ವ್ಯಕ್ತಿ ಪ್ರಜ್ಞೆಯ ಮೂಲಕ ಲೋಕವನ್ನು ಗ್ರಹಿಸುವ ವಿಧಾನದ ಕತೆಗಳನ್ನು ನಿರ್ಮಿಸುವಲ್ಲಿ ತಮ್ಮದೇ ಆದ ಪ್ರಾವೀಣ್ಯತೆಯನ್ನು ಸಾಧಿಸಿದಂತೆ ಸಮೂಹ ಪ್ರಜ್ಞೆಯ ಮೂಲಕ ಲೋಕವನ್ನು ಗ್ರಹಿಸುವ ಕತೆಗಳ ನಿರೂಪಣೆಯಲ್ಲಿ ಸೊರಗಿದಂತೆ ಕಾಣುತ್ತವೆ. ಹಾಗೆ ನೋಡಿದರೆ ವ್ಯಕ್ತಿ ಪ್ರಜ್ಞೆಯ ಕತೆಗಳು ಬೆಳೆಯುತ್ತವೆ. ಆದರೆ ಸಮಾಜ

[illegible]

[illegible]

[illegible]

[illegible]

[illegible]

ಪ್ರಜ್ಞೆಯ ಕತೆಗಳು ಬೆಳೆಯುವುದಿಲ್ಲ."[20] ಆದರೂ ಈ ಎರಡೂ ನೆಲೆಯಲ್ಲಿ ಕತೆಗಳನ್ನು ರಚಿಸಿರುವುದು ಇವರ ಪ್ರತಿಭೆಗೆ ಹಿಡಿದ ಕೈಗನ್ನಡಿಯಾಗಿದೆ.

ವೃತ್ತ ಕತೆಯು ಶಂಕರಪ್ಪಗೌಡನ ವ್ಯಕ್ತಿತ್ವವನ್ನು ಕೇಂದ್ರವಾಗಿಟ್ಟುಕೊಂಡು ಅವನ ಪ್ರಜ್ಞೆಯ ಮೂಲಕ ಲೇಖಕ ವೃತ್ತ ಕತೆಯನ್ನು ನಿರೂಪಿಸುತ್ತಾನೆ. ಗೌಡರು ಅನಿರೀಕ್ಷಿತವಾಗಿ ಸಾವಿಗೀಡಾಗುವ ಮುನ್ನ ಎರಡು ದಿನಗಳ ಕಾಲಾವಧಿಯಲ್ಲಿ ತಮ್ಮ ಬದುಕನ್ನು ಅವಲೋಕಿಸಿಕೊಳ್ಳತೊಡಗುವುದು. ಗೌಡರ ಬಲಿಷ್ಟ ನಂಬುಗಸ್ಥ ನಾಯಿ ಬೇರೆ ನಾಯಿಗಳ ದಾಳಿಗೆ ಸಿಕ್ಕು ಹತನಾಗುವುದು, ಅದನ್ನು ಮಣ್ಣು ಮಾಡಿಸುವುದು. ಬದುಕಿನ ಅರ್ಥವನ್ನು ಅಲ್ಲಿಂದ ಶೋಧಿಸಲು ಪ್ರಯತ್ನಿಸುವುದು, ತನ್ನ ಹೆಂಡತಿಯು ಸತ್ತಿದ್ದರೂ ತನ್ನ ಬದುಕಿನ ಭಾಗವಾಗಿದ್ದ ಹೆಂಡತಿಯನ್ನು ನೆನೆಯುತ್ತಾ ಹೊಲಕ್ಕೆ ಮನಗೆ ಚಲಿಸುವುದು, ಗ್ರಾಮೀಣ ಪರಿಸರ, ರಜಾಕಾರರ ಹಾವಳಿ, ಮಗನ ಸಮಾಜ ಘಾತುಕ ಚಟುವಟಿಕೆಗಳು, ಹೆಂಡತಿಯ ಸಾವು, ನಾಯಿಯ ಸಾಹಸ ಈ ಎಲ್ಲಾ ಘಟನೆಗಳು ಗೌಡರ ಕಣ್ಣು ಮುಂದೆಯೇ ನಡೆದು ಹೂ ಅರಳಿದಂತೆ ಬಿಚ್ಚಿಕೊಳ್ಳುತ್ತದೆ. ಹೀಗೆ ಈ ಕತೆಯು ಶಂಕರಪ್ಪಗೌಡನ ವ್ಯಕ್ತಿ ಪ್ರಜ್ಞೆಯಲ್ಲಿಯೇ ಸಾಗುವುದನ್ನು ಕಾಣಬಹುದು.

ಭೂತ ಕತೆಯು ಕೂಡಾ ರಮೇಶನ ವ್ಯಕ್ತಿಪ್ರಜ್ಞೆಯಲ್ಲಿಯೇ ಸಾಗುತ್ತದೆ. ಈ ಕತೆಯ ನಾಯಕ ರಮೇಶ ಎಂ.ಎಸ್ಸಿ ಪದವೀಧರ. ಈತ ತನ್ನ ಊರಿಗೆ ಬಂದ ಮೇಲೆ ಹಲವಾರು ಸುಧಾರಣೆಗಳನ್ನು ಮಾಡಬೇಕೆಂದು ಕನಸುಗಳನ್ನು ಇಟ್ಟುಕೊಂಡು ಅಧಿಕಾರದ ಧಣಿಯಾಗದೆ ತನ್ನ ಮನಸ್ಸಿನ ಧಣಿಯಾಗಬೇಕೆಂದು ಬಯಸುತ್ತಿದ್ದ. ಆದರೆ ತನ್ನ ವಂಶಜರ ಇತಿಹಾಸವನ್ನು ತಿಳಿಯಲು ಹೋಗಿ ರಮೇಶ ಹಲವಾರು ಸಂಕಷ್ಟಗಳ ಸುಳಿಯಲ್ಲಿ ಸಿಕ್ಕು ಹಾಕಿಕೊಳ್ಳುವುದು ಕತೆಯಲ್ಲಿ ಕಂಡುಬರುತ್ತದೆ. ಹೀಗೆ ಕತೆಯು ಕುಟುಂಬ, ಸಮಾಜ, ವ್ಯಕ್ತಿಯ ನಡುವಿನ ಅಂತರ್ ಸಂಬಂಧದ ತೀವ್ರ ಶೋಧ ಕತೆಯಲ್ಲಿ ಮುಂದುವರೆಯುತ್ತದೆ.

ರಹಸ್ಯಮಯ ಬಾಗಿಲು ತೆಗೆಸುವುದು. ರಮೇಶನಿಗೆ ಭೂತ ಹಿಡಿದಿದೆ ಶಾಂತಿ ಮಾಡಿಸಬೇಕೆಂದು ಅಯ್ಯನೋರನ್ನು ಕರೆಸುವುದು. ಕೊನೆಗೆ ತನಗೆ ಹಿಡಿದ ಭೂತವನ್ನು ಬಿಡಿಸಲು ಇವನಿಗೆ ಮನಸ್ಸಿಲ್ಲದಿದ್ದರೂ, ಸಿದ್ಧಪ್ಪನ ಒತ್ತಾಯಕ್ಕೆ ಮಣಿದು ಆಯನೂರಿನ ಪೀರಲ ಹಬ್ಬಕ್ಕೆ ಬರುವುದು. ಅಲ್ಲಿ ಭೂತವನ್ನು ಬಿಡಿಸುವ ಪ್ರಸಂಗಗಳು ಒಂದು ಹೆಣ್ಣನ್ನು ಭೂತ ಬಿಡಿಸಲು ಬಾರುಕೋಲಿನಿಂದ ಹೊಡೆಯುವುದು. ರಮೇಶನನ್ನು ಕಂಡ ನಂತರ ಬಾಡಖಾವ್ ನಮ್ಮಮ್ಮನ್ನ ಎಲ್ಲಿಟ್ಟಿದ್ದಾನೋ ನಿಮ್ಮಪ್ಪ ಎಂದು ಚೀರಾಡುವುದು. ಜನರು ವೃತ್ತಾಕಾರವಾಗಿ ಹಲಾಯಿಕುಣಿ ಸುತ್ತಾ ಕುಣಿಯುವುದು. ಇವೆಲ್ಲವೂ ರಮೇಶನ ಕಣ್ಣ ಮುಂದೆ ನಡೆದು ವ್ಯಕ್ತಿ ಕೇಂದ್ರ ಪ್ರಜ್ಞೆಯಲ್ಲಿಯೇ ರಮೇಶನ ಸುತ್ತಲೂ ಸುತ್ತುತ್ತಾ ಸಾಗುವುದನ್ನು ನಾವು ಕಾಣುತ್ತೇವೆ.

ದುರಸ್ತಿಕತೆಯು ಕೂಡಾ ತಿಮ್ಮನ ವ್ಯಕ್ತಿ ಕೇಂದ್ರ ಪ್ರಜ್ಞೆಯಲ್ಲಿಯೇ ಸಾಗುತ್ತದೆ. ತಿಮ್ಮ ನಗರದಲ್ಲಿ ಸೈಕಲ್ ರಿಕ್ಷಾ ತುಳಿಯುವ ದುಡಿಮೆಗಾರ. ದುಡಿಮೆ, ಜಾತಿಯಲ್ಲಿ ಯಾವುದೇ ವ್ಯತ್ಯಾಸವನ್ನು ಕಾಣದವನು. ಇವನಮ್ಮನ್ನಾಡ ಪ್ರಿಪೀಲ್ ಎಂದು ಆರಂಭವಾಗುವ ಕತೆಯು ತಿಮ್ಮನ ಆತ್ಮನಿರೂಪಣೆ ಸರ್ವಸಾಕ್ಷಿ ಪ್ರಜ್ಞೆಯಲ್ಲಿ ಸಾಗುತ್ತದೆ. ಗೌಡನ ಆಳಿನ ಸಂಬಂಧದಿಂದ ಹುಟ್ಟಿದ ತಿಮ್ಮ ಅನೈತಿಕ ಸಂಬಂಧದಲ್ಲಿ ಬದುಕುವ ಗಂಗಿಯನ್ನು ಮದುವೆಯಾಗಬೇಕು ಅವಳಿಗೆ ಬಾಳನ್ನು ನೀಡಬೇಕು ಎಂದು ಕನಸು ಕಾಣುತ್ತಿದ್ದ. ಈತನ ಕನಸಿಗೆ ಗಂಗಿ ಕೈಕೊಡುವುದು, ಬೇರೆಯವನ ಜೊತೆ ಓಡಿ ಹೋಗುವುದು, ಅದೇ ರೀತಿಯದಾಗಿ ತನ್ನ ತಂಗಿ ನಾಗಮ್ಮಳನ್ನು ಕೂಡಾ ಒಳ್ಳೆಯ ಹುಡುಗನಿಗೆ ಮದುವೆಯನ್ನು ಮಾಡಿಕೊಡಬೇಕೆಂದು ಹಂಬಲ ಇಟ್ಟುಕೊಂಡಿದ್ದ. ಆದರೆ ತನ್ನ ಅಣ್ಣ ತಿಮ್ಮನಗೌಡನ ಜೊತೆಯಲ್ಲಿ ಸಂಬಂಧವಿಟ್ಟುಕೊಂಡಿರುವುದು ತಿಳಿದು ಬರುತ್ತದೆ. ಅದೇ ರೀತಿಯದಾಗಿ ಸಮಾಜದಲ್ಲೂ ಅದನ್ನೇ ಎದುರುಗೊಳ್ಳುತ್ತಾನೆ. ಹೆಣ್ಣುಗಳನ್ನು ಸಾಗಿಸುವ ದಲ್ಲಾಳಿ, ಸಿಮೆಂಟ್ ಸಾಗಾಣಿಕೆ ಹೀಗೆ ಕುಟುಂಬದಲ್ಲಿ ಹಾಗೂ ಸಮಾಜದಲ್ಲಿ ಅನ್ಯಾಯಕ್ಕೆ ಒಳಗಾಗುವುದು ಇದೆಲ್ಲ ತಿಮ್ಮನ ಕಣ್ಣು ಮುಂದೆ ನಡೆದು ಈತನ ವ್ಯಕ್ತಿ ಪ್ರಜ್ಞೆಯಲ್ಲಿಯೇ ಕತೆ ಸಾಗಿರುವುದನ್ನು ಕಾಣಬಹುದು.

ಹಂಗಿನರಮನೆಯಹೊರಗೆ ಕತೆಯು ಕೂಡಾ ಕಥಾ ನಾಯಕನ ವ್ಯಕ್ತಿ ಪ್ರಜ್ಞೆಯಲ್ಲಿಯೇ ಅವನ ಅಪ್ಪ, ಅವ್ವ, ಹೆಂಡತಿ ಇವರ ಸಂಬಂಧದ ವಿಶ್ಲೇಷಣೆ ನಡೆಯುತ್ತದೆ. ಈ ಕತೆಯಲ್ಲಿ ನಾಯಕ ಕರಳುಬೇನೆಯಿಂದ ಆಸ್ಪತ್ರೆಗೆ ಸೇರಿರುತ್ತಾನೆ. ಈತನು ಕುಟುಂಬದಲ್ಲಿ ಹಾಗೂ ಸಮಾಜದಲ್ಲಿ ತನ್ನತನವನ್ನು ಕಳೆದುಕೊಂಡು ಇಂತಹ ಸಮಾಜದಲ್ಲಿ ಬದುಕುವುದಕ್ಕಿಂತ ಸಾಯುವುದೇ ಲೇಸು ಎಂಬಂತಹ ನಿರ್ಧಾರಕ್ಕೆ ಬಂದಿರುತ್ತಾನೆ. ಇವನನ್ನು ನೋಡಲು ಅಪ್ಪ, ಅಮ್ಮ, ತಮ್ಮ ಎಲ್ಲಾರು ಆಸ್ಪತ್ರೆಗೆ ಬಂದಿರುತ್ತಾರೆ. ನಂತರ ಈತನ ಹೆಂಡತಿ ಹಾಗೂ ಪ್ರೇಮಿ ಕಿರಣಳೂ ಕೂಡಾ ಆಗಮಿಸುವುದು ಹೀಗೆ ರೋಗಿಯ ಸುತ್ತ ಉಳಿದೆಲ್ಲ ಪಾತ್ರಗಳು ಸುತ್ತುತ್ತಾ ತನ್ನ ವ್ಯಕ್ತಿ ಪ್ರಜ್ಞೆಯಲ್ಲಿಯೇ ಕಥಾಹಂದರ ಬಿಚ್ಚಿಕೊಳ್ಳುವುದು. ಈ ಕತೆಯ ಆಂತರ್ಯದಲ್ಲಿ ಕಂಡುಬರುವಂತಹ ವಿಶೇಷತೆಯಾಗಿದೆ. ಇದು ರಾಜಶೇಖರ ನೀರಮಾನ್ವಿಯವರ ಕಥಾ ರಚನೆಯ ಶಕ್ತಿಯೂ ಆಗಿದೆ.

ನೆಲೆ ಕತೆಯು ಕೂಡ ವ್ಯಕ್ತಿ ಪ್ರಜ್ಞೆಯಲ್ಲಿಯೇ ಸಾಗುವಂತಹ ಕತೆಯಾಗಿದೆ. ಈ ಕತೆಯ ನಾಯಕಿ ರಂಗಮ್ಮ ಎಲೆ ಮಾರಿ ಜೀವನವನ್ನು ಸಾಗಿಸುತ್ತಿರುತ್ತಾಳೆ. ರಂಗಮ್ಮ ಹುಟ್ಟಿದ ಬೆನ್ನಲ್ಲೇ ತನ್ನ ತಾಯಿಯನ್ನು ಕಳೆದುಕೊಂಡು ಮಾಬವ್ವನ ಆಶ್ರಯದಲ್ಲಿ ಬೆಳೆಯುತ್ತಿರುತ್ತಾಳೆ. ರಂಗಮ್ಮ ಇಂತಹ ಪರಿಸರದಲ್ಲಿ ಬೆಳೆಯುತ್ತಾ ಹೋಗುವಾಗ ರಂಗಮ್ಮನ ತಂದೆ ಹಾಗೂ ಗಂಡ ಇಬ್ಬರೂ ಇವಳನ್ನು ಮಾರಲು ಸಂಚು ನಡೆಸುತ್ತಿದ್ದಾಗ ತನ್ನತನವನ್ನು ಕಂಡುಕೊಳ್ಳಲು ಇಡೀ ಸಮಾಜದ ವಿರುದ್ಧವೇ ಪ್ರತಿಭಟನೆಯ ಮನೋಭಾವನೆಯನ್ನು ತಾಳುತ್ತಾಳೆ. ಕೊನೆಗೆ ತಾನು ಯಂಕವ್ವನ ಸೂಳೆಯಿಂದು

[illegible]

ಘೋಷಿಸುತ್ತಾಳೆ. ಈ ಎಲ್ಲಾ ಘಟನೆಗಳು ರಂಗಮ್ಮನ ವ್ಯಕ್ತಿ ಪ್ರಜ್ಞೆಯಲ್ಲಿಯೇ ಮುನ್ನಡೆಯುತ್ತಾ ರಂಗಮ್ಮನ ವ್ಯಕ್ತಿತ್ವವನ್ನು ಕತೆ ಸಮರ್ಥವಾಗಿ ಕಟ್ಟಿಕೊಡುತ್ತದೆ. ಇಲ್ಲಿಯವರೆಗೆ ವ್ಯಕ್ತಿಪ್ರಜ್ಞೆ ಕೇಂದ್ರಿತ ಹಿನ್ನಲೆಯಲ್ಲಿ ರಚನೆಯಾದಂತಹ ಕತೆಗಳ ವಿಶ್ಲೇಷಣೆಯನ್ನು ತಿಳಿಸಿದೆ. ಇವರ ಕರ್ಪೂರದ ಕಾಯದಲ್ಲಿ ಕಥಾಸಂಕಲನ ಸಮಾಜಕೇಂದ್ರಿತ ನೆಲೆಯಲ್ಲಿ ರಚನೆಯಾಗಿರುವುದನ್ನು ಗುರುತಿಸಬಹುದು. ಸಮಾಜದಲ್ಲಿ ಕಂದಾಚಾರಗಳು ಮೂಢನಂಬಿಕೆಗಳು, ಮೌಢ್ಯತೆ, ದೇವರು, ಅಂಧಶ್ರದ್ಧೆ, ಭ್ರಷ್ಟವ್ಯಕ್ತಿಗಳ ಚಿತ್ರಣ, ಅನ್ಯಾಯ, ಅಕ್ರಮ, ತಾರತಮ್ಯ, ದೌರ್ಜನ್ಯ, ಕೌಟುಂಬಿಕ ಸಂಬಂಧಗಳು, ಮಾನವೀಯ ಮೌಲ್ಯಗಳು ಸಮಾಜದಲ್ಲಿ ಯಾವ ರೀತಿಯದಾಗಿ ಕಂಡುಬರುತ್ತವೆ ಎಂಬುದನ್ನು ತಮ್ಮ ಕತೆಗಳಲ್ಲಿ ಜೀವಂತ ಸಮಾಜದ ಚಿತ್ರಣವನ್ನು, ಅಲ್ಲಿ ನಡೆಯುವಂತಹ ಚಟುವಟಿಕೆಗಳು, ವ್ಯವಹಾರಗಳನ್ನು ಸೂಕ್ಷ್ಮವಾಗಿ ಗಮನಿಸಿ ತಮ್ಮ ಕತೆಗಳಲ್ಲಿ ತಂದು ಸಮಾಜವನ್ನು ಕಟ್ಟಿಕೊಡಲು ಪ್ರಯತ್ನಿಸಿದ್ದಾರೆ.

ಬೆತ್ತಲೆಸ್ವಾಮಿ ಕತೆಯು ಸಮಾಜ ಪ್ರಜ್ಞೆ ಕೇಂದ್ರಿತ ಹಿನ್ನಲೆಯಲ್ಲಿ ರಚನೆಯಾಗಿರುವುದನ್ನು ಗುರುತಿಸಬಹುದು. ಬೆತ್ತಲೆಸ್ವಾಮಿ ಕತೆಯಲ್ಲಿ ಪವಾಡ ಪುರುಷನೆಂದು ಕರೆಸಿಕೊಂಡವನ ನೈಜ ಚಿತ್ರಣ ಇರುವುದನ್ನು ಕಾಣಬಹುದು. ಬೆತ್ತಲೆಯಾಗಿ ಊರಿನ ಬೀದಿ ಬೀದಿಗಳಲ್ಲಿ ತಿರುಗುವಂತಹ ವ್ಯಕ್ತಿ ಬೆತ್ತಲೆ ಸ್ವಾಮಿಯಾದ ಬಗೆಯನ್ನು ತಿಳಿಯಬಹುದು. ಬರಗಾಲದಲ್ಲಿ ಮಳೆ ತರಿಸುವುದು, ಮಕ್ಕಳಾಗದವರಿಗೆ ಮಕ್ಕಳನ್ನು ಕೊಡುವುದು, ಒಡೆದ ಸಂಸಾರವನ್ನು ಒಂದುಗೂಡಿಸುವ ಹಾಗೂ ಚುನಾವಣೆಯಲ್ಲಿ ಗೆಲ್ಲಿಸುವಂತಹ ಪಾತ್ರವಾಗಿ ಚಿತ್ರಿತವಾಗಿದ್ದಾನೆ.

ಒಂದು ವರ್ಷ ಬರಗಾಲ ಬಂದಾಗ ಊರಿನ ಜನರೆಲ್ಲಾರು ಸೇರಿ ಮಳೆ ಮಲ್ಲೇಶಪ್ಪನ ಗುಡಿಯಲ್ಲಿ ಮಳೆಗಾಗಿ ಸಪ್ತಭಜನೆ ಮಾಡುವುದು, ದೇವರ ಹೆಸರಿನಲ್ಲಿ ಸಮಾಜದ ಹೆಸರಿನಲ್ಲಿ ನಡೆಯುವಂತಹ ದಾಂದಲೆಗಳು, ಬಡವರಿಗೆ ದೇವರ ಹೆಸರಿನಲ್ಲಿ ಅನ್ನ ಸಂತರ್ಪಣೆಯ ಕಾರ್ಯಕ್ರಮ ಬೆತ್ತಲೆಸ್ವಾಮಿಯಿಂದ ಆದಂತಹ ಬದಲಾವಣೆಗಳು, ಖಾನಾವಳಿ ಯಮುನಕ್ಕ ಚುನಾವಣೆಯಲ್ಲಿ ಗೆಲ್ಲುವುದು, ಈ ಕತೆಯಲ್ಲಿ ಗ್ರಾಮೀಣ ಜನ ಜೀವನದ ಅಥವಾ ಸಮಾಜದ ಮೌಢ್ಯತೆ, ದೇವರು, ಧರ್ಮ, ಅಂಧಶ್ರದ್ಧೆ, ಭ್ರಷ್ಟವ್ಯಕ್ತಿಗಳ ಚಿತ್ರಣ ಸಮಾಜದಲ್ಲಿ ಯಾವ ರೀತಿ ಕಂಡುಬರುತ್ತದೆ ಎಂಬುದನ್ನು ಈ ಕತೆಯಲ್ಲಿ ಕಾಣಬಹುದು.

ಪ್ರಜಾಪ್ರಭುತ್ವದಲ್ಲಿ ಸಾವು ಈ ಕತೆಯು ಕೂಡ ಸಮಾಜ ಕೇಂದ್ರಿತ ನೆಲೆಯಲ್ಲಿ ರಚನೆಯಾಗಿರುವುದನ್ನು ಕಾಣಬಹುದು. ಕತೆಯ ಆರಂಭದಲ್ಲಿ ಒಬ್ಬ ವ್ಯಕ್ತಿ ವಿಷ ಪ್ರಾಸನ ಮಾಡಿ ಒದ್ದಾಡುವುದು ಅದನ್ನು ಜನರೆಲ್ಲಾರು ನಿಂತು ನೋಡುತ್ತಾರೆ. ಅದರಲ್ಲಿ ಯಾರಿಗೂ ರಕ್ಷಿಸಬೇಕೆಂಬ ಕರುಣೆ ಬರುವುದಿಲ್ಲ. ಪ್ರಕಾಶ ಆ ವ್ಯಕ್ತಿಯನ್ನು ಕರೆದುಕೊಂಡು ಆಸ್ಪತ್ರೆಗೆ ಸೇರಿಸುವುದು, ಅಲ್ಲಿನ ವೈದ್ಯರ ನಿರ್ಲಕ್ಷ್ಯತೆ, ಅಲ್ಲದೇ ತನ್ನ ಗಂಡ ಸಾವು ಬದುಕಿನ ಮಧ್ಯ ಹೋರಾಡುವಾಗ ಆತನನ್ನು ಉಳಿಸಿಕೊಳ್ಳಬೇಕೆಂಬ

ಮಾನವೀಯತೆಯನ್ನು ಮರೆತ ಹೆಂಡತಿ, ಕೊನೆಗೆ ಆತ ಬದುಕಲಾರದೇ ಸಾಯುವುದು, ನಗರದ ಅಧ್ಯಕ್ಷನ ಮಗ ಸತ್ತಿದ್ದಾನೆ ಎಂದು ಕಾಲೇಜುಗಳನ್ನು ರಜೆ ಮಾಡಿಸುವುದು, ಬಂದ್‌ಗಳನ್ನು ಮಾಡಿಸುವುದು, ಮೆರವಣಿಗೆಯನ್ನು ಮಾಡುವುದು ಇಂತಹ ಸಾಮಾಜಿಕ ಅಂಶಗಳನ್ನು ಕಾಣುತ್ತೇವೆ.

ಪ್ರಜಾಪ್ರಭುತ್ವದಲ್ಲಿ ವ್ಯಕ್ತಿಯ ಸ್ವಾತಂತ್ರ್ಯಕ್ಕೆ ಮಾನವೀಯ ಮೌಲ್ಯಗಳಿಗೆ ಬೆಲೆಯಿಲ್ಲ. ಅನ್ಯಾಯಗಳು ಅಧರ್ಮ, ಅಕ್ರಮ, ಅನೀತಿಗಳು ತುಂಬಿದ ಸಮಾಜವನ್ನು ಈ ಕತೆಯಲ್ಲಿ ಪರಿಚಯ ಮಾಡಿಕೊಡಲಾಗಿದೆ. ನಮ್ಮದು ಪ್ರಜಾ ಪ್ರಭುತ್ವ ದೇಶ ಇಲ್ಲಿ ಎಲ್ಲಾರಿಗೂ ರಕ್ಷಣೆ ಇದೆ ಎಂದು ಹೇಳಿ. ಪ್ರಜಾಪ್ರಭುತ್ವದ ಹೆಸರಿನಲ್ಲಿ ಸಮಾಜದಲ್ಲಿ ಯಾವ ರೀತಿಯದಾಗಿ ದುರುಪಯೋಗಗಳು ನಡೆಯುತ್ತವೆ. ಮಾನವೀಯ ಮೌಲ್ಯಗಳು ಯಾವ ರೀತಿ ನಶಿಸುತ್ತವೆ ಎಂಬುದನ್ನು ಬಂಡಾಯದ ನೆಲೆಯಲ್ಲಿ ನೀರಮಾನ್ವಿಯವರು ಸಮಾಜದ ಚಿತ್ರಣವನ್ನು ಕಟ್ಟಿಕೊಟ್ಟಿದ್ದಾರೆ.

ಗುಡಿಯನೋಡಿರಣ್ಣಾ ಗುಣಾತ್ಮಕ ಮೌಲ್ಯಗಳನ್ನು ಒಳಗೊಂಡಿರುವ ಕತೆಯಾಗಿದೆ. ಈ ಕತೆಯು ಅಂತರ್‌ಜಾತೀಯ ವಿವಾಹವನ್ನು ಕುರಿತಂತೆ ಚರ್ಚಿಸುತ್ತದೆ. ಸಮಾಜದಲ್ಲಿ ಮನುಷ್ಯ ಸಂಬಂಧಗಳು ಜಾತಿ ಮತಗಳಿಗಿಂತ ಮುಖ್ಯ ಎಂಬುದನ್ನು ಕತೆಯು ವ್ಯಕ್ತಪಡಿಸುತ್ತದೆ. ಈ ಕತೆಯ ನಾಯಕ ರವಿ ಅನ್ಯ ಜಾತಿಯವಳಾದ ಸುಧಾಳನ್ನು ಮದುವೆಯಾಗುವುದು, ತನ್ನ ಮನೆಯವರು ಅವರನ್ನು ಹೊರಗಡೆ ಹಾಕುವುದು, ತನ್ನ ತಂದೆ ಆಸ್ಪತ್ರೆಸೇರಿದಾಗ ಆತನನ್ನು ನೋಡಲು ಬಂದಾಗ ತನ್ನ ಅತ್ತೆ ಮೂದಲಿಸುವುದು, ನಂತರ ಸುಧಾಳು ತನ್ನ ಮಾವನ ಸೇವೆಯನ್ನು ಮಾಡಿ ಮನಸ್ಸನ್ನು ಗೆಲ್ಲುವದು, ಆಗ ಮನ ಪರಿವರ್ತನೆಯಾಗಿ ಒಂದಾಗಿ ಸುಖದಿಂದ ಬಾಳುವುದು. ಇಂತಹ ಸಮಾಜದ ಚಿತ್ರಣವನ್ನು ಈ ಕತೆಯಲ್ಲಿ ಕಾಣಬಹುದು. ಇದರಿಂದ ತಿಳಿಯುವುದೇನೆಂದರೆ ಸಮಾಜವು ಜಾತೀಯತೆಯಿಂದ, ಧಾರ್ಮಿಕತೆಯಿಂದ ತುಂಬಿತುಳುಕಾಡುತ್ತಿದೆ. ಅಂತಹ ಜಾತೀಯತೆಯ ವಿಷವೃಕ್ಷವನ್ನು ಬುಡ ಸಮೇತ ಕಿತ್ತು ಹಾಕಿ ಜಾತಿರಹಿತ ಸಮಾಜವನ್ನು ನಿರ್ಮಿಸಬೇಕು. ಆಗ ಮಾತ್ರ ಸುಖ, ಶಾಂತಿ, ನೆಮ್ಮದಿಯ ಸಮಾಜವನ್ನು ಕಾಣಬಹುದು ಎಂಬಂತಹ ಸಂದೇಶವನ್ನು ಈ ಕತೆ ಸಾರುತ್ತದೆ.

ಎಂಥಾಮೋಜಿನಕುದುರೆ ಸಮಾಜದಲ್ಲಿ ಆಧುನಿಕ ದಾಂಪತ್ಯದ ಸಮಸ್ಯೆಗಳನ್ನು ಕುರಿತು ಚರ್ಚಿಸುತ್ತದೆ. ವಿಜಯ ಎಂಬ ಪಾತ್ರವು ತರುಣ ವಯಸ್ಸಿನಲ್ಲಿ ಹಲವು ಹೆಣ್ಣುಗಳೊಂದಿಗೆ ಚೆಕ್ಕಂದವಾಡಿದ. ತಂದೆ ತಾಯಿಗಳ ಬಲವಂತದಿಂದಾಗಿ ಮದುವೆಯಾಗುವುದಕ್ಕೆ ಒಪ್ಪಿಕೊಳ್ಳುವುದು. ವಿವಾಹವಾಗಿ ಮೂರುವರ್ಷಗಳಾದರೂ ಮಕ್ಕಳಾಗಲಿಲ್ಲ ಇದನ್ನು ವೈದ್ಯರ ಹತ್ತಿರ ತೋರಿಸಿದಾಗ ಲೈಂಗಿಕ ರೋಗವಿದೆಯೆಂದು ಹೇಳುವುದು ಈತನ ಹೆಂಡತಿಯು ಬೇರೆಯವನೊಂದಿಗೆ ಕೂಡಿಕೊಂಡು ಮಕ್ಕಳನ್ನು ಪಡೆಯುವುದು, ಕೊನೆಗೆ ರೋಗದಿಂದ ಸಾಯುವುದು ಕತೆಗಾರ ನೀರಮಾನ್ವಿಯವರು ಅನೈತಿಕ ಸಂಬಂಧದಿಂದ ಬದುಕುವಂತಹ ವ್ಯಕ್ತಿಗಳ ಜೀವನ ಯಾವರೀತಿಯದಾಗಿ ನಾಶವಾಗುತ್ತಿದೆ ಎಂಬಂತಹ ಸಮಾಜದ ಚಿತ್ರಣವನ್ನು ಈ ಕತೆ ಕಟ್ಟಿಕೊಡುತ್ತದೆ.

"ಕರ್ಪೂರದ ಕಾಯದಲ್ಲಿ ಬೆಂಕಿಯುಸಿರಾಟ" ಈ ಕತೆಯು ಸಂಪೂರ್ಣವಾಗಿ ಸಮಾಜ ಕೇಂದ್ರಿತ ಹಿನ್ನಲೆಯಲ್ಲಿ ರಚನೆಯಾಗಿರುವುದನ್ನು ಗುರುತಿಸಬಹುದು. ಸಮಾಜದಲ್ಲಿ ರೈತ ಚಳುವಳಿ, ಭಾಷಾ ಚಳುವಳಿ ಹೀಗೆ ಕಂಡುಬರುತ್ತದೆ ಎಂಬುದನ್ನು ಈ ಕತೆಯು ಚಿತ್ರಿಸಿಕೊಡುತ್ತದೆ. ರೈತರ ಮೇಲೆ ಸರ್ಕಾರದ ದೌರ್ಜನ್ಯ ಮತ್ತೊಂದು ಹೊಸ ಸರ್ಕಾರವನ್ನು ಆರಿಸಿ ತರುವುದು, ಭಯೋತ್ಪಾದನಾ ಚಟುವಟಿಕೆಗಳು ಸಮಾಜದಲ್ಲಿ ಯಾವ ರೀತಿ ಕಂಡುಬರುತ್ತವೆ ಎಂಬುದನ್ನು ಈ ಕತೆಯು ಚಿತ್ರಿಸಿಕೊಡುತ್ತದೆ.

ಈ ರೀತಿಯದಾಗಿ ನೀರಮಾನ್ವಿಯವರ ಕತೆಗಳಲ್ಲಿ ಸಮಾಜ ಕೇಂದ್ರಿತ, ವ್ಯಕ್ತಿಕೇಂದ್ರಿತ ಕತೆಗಳೆಂದು ಗುರುತಿಸಬಹುದು. ತಮ್ಮ ಕಾವ್ಯಮಯ ಶೈಲಿಯಿಂದ ರಾಯಚೂರಿನ ಗ್ರಾಮೀಣ ಭಾಷೆಯ ಸೊಗಡಿನಿಂದ ಆಳವಾದ ಚಿಂತನೆಯಿಂದ ನಿರೂಪಣೆಯ ಸೊಗಸಿನಿಂದ ಇವರ ಕತೆಗಳು ಸತ್ವಯುತವಾಗಿವೆ.

೪.೨. ಹಳ್ಳಿ ಮತ್ತು ನಗರಗಳ ಸ್ವರೂಪ

ರಾಜಶೇಖರ ನೀರಮಾನ್ವಿಯವರು ಕನ್ನಡದ ಅತ್ಯುತ್ತಮ ಕತೆಗಾರರಲ್ಲಿ ಒಬ್ಬರಾಗಿದ್ದಾರೆ, ತಮ್ಮ ಕತೆಗಳನ್ನು ಬರೆಯುವಾಗ ವಸ್ತುವಿನ ಆಯ್ಕೆಯಲ್ಲಿ ತಮ್ಮದೇ ಆದ ಪ್ರತಿಭೆಯಿಂದ ಮೆರೆದಿದ್ದಾರೆ. ಇವರು ಕೂಡಾ ನವ್ಯದ ಕತೆಗಾರರಂತೆ ನಗರ ಜೀವನ ಮತ್ತು ಹಳ್ಳಿಯ ಜೀವನವನ್ನು ತಮ್ಮ ಕತೆಗಳಲ್ಲಿ ಹಿಡಿದಿಡುವ ಪ್ರಯತ್ನ ಮಾಡಿದ್ದಾರೆ. ನಗರದ ಲೇಖಕ ಹಳ್ಳಿಯ ಜೀವನವನ್ನು ಚಿತ್ರಿಸುವುದಕ್ಕೂ, ಹಳ್ಳಿಯ ಲೇಖಕ ನಗರದ ಜೀವನವನ್ನು ಚಿತ್ರಿಸುವುದಕ್ಕೂ ತಮ್ಮದೇ ಆದ ಪ್ರತಿಭೆ ಹಾಗೂ ಅನುಭವ ಮುಖ್ಯವಾಗುತ್ತದೆ. ಆದರೆ ರಾಜಶೇಖರ ನೀರಮಾನ್ವಿಯವರು ಹಳ್ಳಿಯ ಕತೆಗಾರರಾಗಿದ್ದು ತಮ್ಮ ಕತೆಗಳಲ್ಲಿ ನಗರ ಮತ್ತು ಹಳ್ಳಿಯ ಜೀವನ ವಿಧಾನ, ಮಾನವೀಯ ಮೌಲ್ಯಗಳು, ಕೌಟುಂಬಿಕ ಸಂಬಂಧಗಳು, ಪರಸ್ಪರ ಸಹಕಾರ, ಸಹಾಯ, ಮನಸ್ಥಿತಿಗಳು ಯಾವ ರೀತಿಯದಾಗಿ ಮೇಳೈಸಿಕೊಂಡಿರುತ್ತವೆ ಎಂಬುದನ್ನು ತಮ್ಮಕತೆಗಳಲ್ಲಿ ಹಿಡಿದಿಟ್ಟು ಅದರ ಸೂಕ್ಷ್ಮ ಪರಿಚಯವನ್ನು ಮಾಡಿರುವುದು ನಮಗೆ ಕಂಡುಬರುತ್ತದೆ.

ವೃತ್ತ ಕತೆಯು ಸಂಪೂರ್ಣವಾಗಿ ಹಳ್ಳಿಯ ಜೀವನಕ್ಕೆ ಸಂಬಂಧಿಸಿದಂತಹ ಕತೆಯಾಗಿದೆ. ಶಂಕರಪ್ಪಗೌಡನ ಪ್ರಜ್ಞೆಯಲ್ಲಿ ಬಿಚ್ಚಿಕೊಳ್ಳುತ್ತಾ ಹಳ್ಳಿಯ ಜೀವನದ ಸ್ವರೂಪ ಯಾವ ರೀತಿ ಇರುತ್ತದೆ ಎಂಬುದನ್ನು ಕಣ್ಣಿಗೆ ಕಟ್ಟುವಂತೆ ಕತೆಯು ಚಿತ್ರಿಸುತ್ತದೆ. ಕತೆಯ ಆರಂಭದಲ್ಲಿ ನಾಯಿ ಸಾವಿಗೀಡಾಗುತ್ತದೆ. ಆ ನಾಯಿಯನ್ನು ಮನುಷ್ಯರು ಸತ್ತಾಗ ಯಾವ ರೀತಿ ಅಂತ್ಯ ಸಂಸ್ಕಾರ ಮಾಡುವರೋ ಅದೇ ತೆರನಾದ ಅಂತ್ಯ ಸಂಸ್ಕಾರವು ನಾಯಿಗೆ ದೊರೆಯುತ್ತದೆ. ಇದು ಹಳ್ಳಿಯ ಜನರ ಮಾನವೀಯತೆಯನ್ನು ಅನುಕಂಪವನ್ನು ಎತ್ತಿಹಿಡಿಯುತ್ತದೆ. ಗ್ರಾಮೀಣ ಭಾಗದ ಜನರ ಜೀವನದ ಕಸುಬಾದ ಒಕ್ಕಲುತನದ ಚಟುವಟಿಕೆಗಳು, ಹೊಲಗಳಿಗೆ ಎತ್ತುಗಳನ್ನು ಹೊಡೆದುಕೊಂಡು ಹೋಗುವುದು, ಹಂತಿಕಟ್ಟುವುದು, ಬೀಸೋಕಲ್ಲು ಪ್ರಾರಂಭವಾಗುವುದು, ಕೋಳಿಕೂಗುವುದು, ಗ್ರಾಮೀಣ ಭಾಗದಲ್ಲಿ ಇಂದಿಗೂ ಜೀವಂತವಾಗಿರುವಂತಹ ಇಂತಹ ಅಂಶಗಳನ್ನು ತಮ್ಮಕತೆಗಳಲ್ಲಿ ತಂದು ಗ್ರಾಮೀಣ ಭಾಗದ ಜನರ

ಜೀವನದ ದರ್ಶನ ಮಾಡಿಸಿರುವುದನ್ನು ಕಾಣಬಹುದು. "ಅಷ್ಟು ಅರೆವೊತ್ತಲೆ ಕಳಿಸಿದ್ರು ಇನ್ನು ಬರೇ ಮೂರು ಮುಂಬು ಆಗ್ಯಾವಲ್ಲ, ಏನಿಲ್ಲ ತಾತ ಹುಲ್ಲು ಬಾಳ ಬಿದ್ವೈತಿ ಅದಕ ಹೊಲ ಸಾಗುವಲ್ಲದು."[9] ಇಲೆಲ್ಲಾ ಗ್ರಾಮೀಣ ಭಾಗದಲ್ಲಿ ಜನರಾಡುವಂತಹ ಭಾಷೆಯಯನ್ನು ಸೂಕ್ಷ್ಮವಾಗಿ ಪರಿಚಯ ಮಾಡಿಕೊಡುತ್ತಾರೆ.

ಈ ಕತೆಯಲ್ಲಿ ರಜಾಕಾರರ ಗುಂಪಿಗೆ ನಾಯಕನಾಗಿದ್ದಂತಹ ಹುಸೇನಿಯು, ಗೌಡರು ಜೈಲಿಗೆ ಸೇರುವುದಕ್ಕೆ ಕಾರಣನಾದವನು. ಗೌಡರ ಮನೆಯಲ್ಲಿನ ಸಂಪತ್ತನ್ನು ಲೂಟಿ ಮಾಡಲು ಪ್ರಯತ್ನಿಸಿದವನು. ಇಂದು ತನ್ನನ್ನು ರಕ್ಷಿಸಬೇಕೆಂದು ಕಾಲಿಗೆ ಬಿದ್ದು ಬೇಡಿಕೊಳ್ಳುವಾಗ ಹಿಂದಿನದನ್ನೆಲ್ಲಾ ಮರೆತು, ಆತನನ್ನು ರಕ್ಷಿಸುವಂತಹ ಮನೋಭಾವ ತಾಳುವುದು, ಇಲ್ಲೆಲ್ಲಾ ಗ್ರಾಮೀಣ ಭಾಗದ ಜನರ ಮಾನವೀಯ ಮೌಲ್ಯವನ್ನು ಹಿಡಿದಿಡುವಂತಹ ಅಂಶಗಳಾಗಿ ಕಂಡುಬರುತ್ತವೆ. ಈ ಕತೆಯಲ್ಲಿ ನೀರಮಾನ್ವಿ ಎಂಬ ಹಳ್ಳಿಯ ಪರಿಸರದ ಸುತ್ತಮುತ್ತಲಿನ ಚಿತ್ರಣ, ಕೃಷಿಚಟುವಟಿಕೆಗಳು, ಅಲ್ಲಿಯ ಜನರ ಜೀವನ ಮುಂತಾದ ಅಂಶಗಳನ್ನು ಈ ಕತೆಯಲ್ಲಿ ಕಾಣಬಹುದು.

ಭೂತ ಕತೆಯು ಆರಂಭದಲ್ಲಿ ಗ್ರಾಮೀಣ ಭಾಗದ ಜನರ ಉಪ ಕುಲಕಸುಬಾದ ಬೇಟೆಯಾಡುವ ದೃಶ್ಯದಿಂದ ಪ್ರಾರಂಭವಾಗುತ್ತದೆ. ಹಳ್ಳಿಗಳಲ್ಲಿ ಜನರು ಬಿಡುವಿನ ವೇಳೆಯಲ್ಲಿ ಕಾಡು ಪ್ರಾಣಿಗಳನ್ನು ಬೇಟೆಯಾಡುವುದು ಸಾಮಾನ್ಯ ವಿಷಯವಾಗಿದೆ. ಬೇಟೆಯಾಡಿ ತಂದಂತಹ ಮಾಂಸವನ್ನು ಹಂಚಿಕೊಳ್ಳುವುದಕ್ಕಾಗಿ ಜಗಳವಾಡುವುದು ಇಲ್ಲೆಲ್ಲಾ ಗ್ರಾಮೀಣ ಭಾಗದ ಜನರ ಮುಗ್ಧತೆಯನ್ನು, ಅಜ್ಞಾನವನ್ನು ತಿಳಿಸುತ್ತದೆ. ರಮೇಶ ತನ್ನ ಪೂರ್ವಜರ ಇತಿಹಾಸವನ್ನು ತಿಳಿಯಲು ಹೋಗಿ ಮಾನಸಿಕವಾಗಿ ಅಸ್ವಸ್ಥನಾಗುವುದು ಭೂತಹಿಡಿದವನಂತೆ ವರ್ತಿಸುವುದು, ಅವನನ್ನು ಶಾಂತಿ ಮಾಡಿಸಲು ಅಯ್ಯನೋರನ್ನು ಪೂಜೆಗೆ ಆಹ್ವಾನಿಸುವುದು, ಕೊನೆಗೆ ಅವರು ಹೆದರಿ ಊರು ಬಿಟ್ಟು ಹೋಗುವುದು, ರಮೇಶನಿಗೆ ಎರಗಿದಂತಹ ದೆವ್ವವನ್ನು ಹೇಗಾದರು ಮಾಡಿ ಬಿಡಿಸಬೇಕೆಂದು ಆಯನೂರಿನ ಪೀರಲ ಹಬ್ಬಕ್ಕೆ ಕರೆದುಕೊಂಡು ಹೋಗುವುದು, ಎಲ್ಲೆಲ್ಲೂ ಕುಡಿದು ತೂರಾಡುತ್ತಿರುವ ಜನಸಮೂಹ, ವಿಶಾಲವಾದ ಹಲಾಯಿಕುಣಿ, ಎಲ್ಲಾರು ಅದರ ಸುತ್ತ ವೃತ್ತಾಕಾರವಾಗಿ ಕುಣಿಯುವಂತಹ ದೃಶ್ಯ, ಈ ಕತೆಯಲ್ಲಿ ಕಾಣಬಹುದು. ಇಲ್ಲಿ ಗಮನಿಸುವ ಪ್ರಮುಖ ಅಂಶವೆಂದರೆ ಗ್ರಾಮೀಣ ಭಾಗದ ಜನರಲ್ಲಿ ದೆವ್ವ, ಭೂತ, ಪಿಶಾಚಿ, ನಂಬಿಕೆಗಳು, ಆಚರಣೆಗಳು ಇಂದಿಗೂ ಜೀವಂತವಾಗಿವೆ. ಜನರು ಅಜ್ಞಾನ, ಅಂಧಕಾರ, ಮೌಢ್ಯತೆಯಲ್ಲಿ ತುಂಬಿತುಳುಕುತ್ತಿದ್ದಾರೆ ಎಂಬಂತಹ ಗ್ರಾಮೀಣ ಜನರ ಜೀವನದ ಸೂಕ್ಷ್ಮ ಚಿತ್ರಣವನ್ನು ಈ ಕತೆಯಲ್ಲಿ ರಾಜಶೇಖರ ನೀರಮಾನ್ವಿಯವರು ಕಟ್ಟಿಕೊಟ್ಟಿದ್ದಾರೆ.

"ಬೆತ್ತಲೆಸ್ವಾಮಿ" ಕತೆಯು ಕೂಡಾ ಗ್ರಾಮೀಣ ಭಾಗದ ಜನರ ಜೀವನ ಚಿತ್ರಣವನ್ನು ಚಿತ್ರಿಸುವಲ್ಲಿ ಯಶಸ್ವಿಯಾಗಿದೆ.

"ಇದು ಖರೇವೇನಕೆ ಸಾಂತಮ್ಮ, ಬತ್ಲೇಸ್ವಾಮಿ ಮಕ್ಕಿಲ್ಲೋರಿಗೆ ಮಕ್ಕಳ ಕೊಡತಾನಂತ ಇದರಾಗ ಅನುಮಾನ ಏನು ಬಂತು, ಹೊಸೂರು ಯಲ್ಲಮ್ಮಾಗ ಏಳೆಂಟು ವರ್ಸಾದ್ರು ಮಕ್ಕಳಾಗಿದ್ದಿಲ್ಲ. ಸ್ವಾಮಿಗೆ

ನಡೆದುಕೊಂಡಾಗ್ಲಿಂದ ಎಲ್ಲು ಮಕ್ಕಳ್ನ ಹಡದ್ನು ಒಂದ್ಸರ್ತಿ ನೀನು ಹೋಗಿ ಬಾ ಶಿವಮ್ಮ"[3] ಎಂದು ಗ್ರಾಮೀಣ ಭಾಗದ ಮಹಿಳೆಯರು ಪರಸ್ಪರ ಯಾವ ರೀತಿ ಸಂಭಾಷಣೆ ನಡೆಸುತ್ತಿದ್ದರು ಎಂಬುದನ್ನು ಈ ಕತೆಯ ಆರಂಭದಲ್ಲಿ ನೀರಮಾನ್ವಿಯವರು ಚಿತ್ರಿಸಿದ್ದಾರೆ. ಈ ಕತೆಯಲ್ಲಿಯು ಗ್ರಾಮೀಣ ಜನರ ಅಜ್ಞಾನ, ಮೌಢ್ಯತೆ, ಕಂದಾಚಾರ, ಮೂಢನಂಬಿಕೆಗಳು, ಪವಾಡಗಳು ಬೆತ್ತಲೆ ಸ್ವಾಮಿಯೊಂದಿಗೆ ಯಾವ ರೀತಿ ಸಂಬಂಧವಿತ್ತು ಎಂಬುದನ್ನು ತಿಳಿಸುತ್ತವೆ. ಪ್ರತಿಯೊಂದು ಹಳ್ಳಿಯೂ ಇಂತಹ ಪ್ರಸಂಗಗಳಿಂದ ಹೊರತಾಗಿಲ್ಲ ಮಳೆಬಾರದಿದ್ದರೆ ಭಜನೆ, ಪೂಜೆ, ಪುನಸ್ಕಾರ ಮಾಡುವುದು, ಮಕ್ಕಳಾಗದಿದ್ದರೆ ಹರಕೆ ಹೊರುವುದು, ಕಾಯಿಲೆಗಳು ಎದುರಾದಾಗ ತಾಯತ ಹಾಗೂ ಭಂಡಾರವನ್ನು ಹಚ್ಚಿಕೊಳ್ಳುವುದು ಮುಂತಾದವುಗಳು ಹಳ್ಳಿಯ ವಾತಾವರಣದಲ್ಲಿ ಸಹಜವಾಗಿ ಕಂಡುಬರುತ್ತವೆ ಎಂಬುದನ್ನು ಕತೆಯ ಮೂಲಕ ತಿಳಿಸಿಕೊಡುತ್ತಾರೆ. ಇಂತಹ ಆಚರಣೆ, ಸಂಪ್ರದಾಯಗಳು ಇಂದಿಗೂ ಹಳ್ಳಿಗಳಲ್ಲಿ ಜೀವಂತವಾಗಿವೆ ಎಂದು ಹಳ್ಳಿಯ ಚಿತ್ರಣವನ್ನು ಕಟ್ಟಿಕೊಡುವುದು ನೀರಮಾನ್ವಿಯವರ ವಿಶೇಷತೆಯಾಗಿದೆ.

"ನಲೆ"ಕತೆಯು ಗ್ರಾಮೀಣ ಜನರ ಜೀವನದ ಚಿತ್ರಣವನ್ನು ಬಿಂಬಿಸುವಂತಹ ಒಂದು ಉತ್ತಮ ಕತೆಯಾಗಿದೆ. ಗ್ರಾಮೀಣ ಜನತೆಯು ತಮ್ಮ ಉಪಜೀವನವನ್ನು ಸಾಗಿಸುವುದಕ್ಕಾಗಿ ಯಾವುದಾದರೊಂದು ಸಣ್ಣ ವ್ಯಾಪಾರವನ್ನು ಮಾಡುವುದು ಹಳ್ಳಿಗಳಲ್ಲಿ ಕಂಡುಬರುವಂತಹ ಸಾಮಾನ್ಯ ಚಿತ್ರಣವಾಗಿದೆ. ಈ ಕತೆಯ ನಾಯಕಿ ರಂಗಮ್ಮ ಹಳ್ಳಿಯಲ್ಲಿ ಎಲೆಮಾರುವ ಪಾತ್ರವಾಗಿ ಚಿತ್ರಿತಳಾಗಿದ್ದಾಳೆ. ಗ್ರಾಮೀಣ ಭಾಗದ ಜನರು ಅನಕ್ಷರಸ್ಥರು, ಮೌಢ್ಯತೆಯನ್ನುಳ್ಳವರು ಎಂಬುದಕ್ಕೆ ನೆಲೆ ಕತೆಯು ಅತ್ಯುತ್ತಮ ಸಾಕ್ಷಿಯಾಗಿದೆ. ಹಳ್ಳಿಗಳಲ್ಲಿ ಬಸವಿ ಬಿಡುವುದು, ಸೂಳೆ ಪದ್ಧತಿ, ಅನೈತಿಕ ಸಂಬಂಧಗಳು ಇಂದಿಗೂ ಜೀವಂತವಾಗಿವೆ ಎಂಬುದನ್ನು ಬಂಡಾಯದ ಕತೆಗಾರರಾಗಿರುವ ರಾಜಶೇಖರ ನೀರಮಾನ್ವಿಯವರು ಈ ಕತೆಯಲ್ಲಿ ಗ್ರಾಮೀಣ ಪರಿಸದಲ್ಲಿ ನಡೆಯುವ ವ್ಯವಹಾರಗಳ ಚಿತ್ರಣ ನೀಡಿ ಅಸಹಾಯಕ ಹೆಣ್ಣು ಸಮಾಜದಲ್ಲಿ ಹೇಗೆ ಶೋಷಣೆಗೆ ಒಳಗಾಗುತ್ತಾಳೆ ಎಂಬುದನ್ನು ಕತೆಗಾರರು ಸಮರ್ಥವಾಗಿ ಕಟ್ಟಿಕೊಟ್ಟು, ಗ್ರಾಮೀಣ ಜನರ ಜೀವನ, ಬದುಕು ಹೇಗಿರುತ್ತದೆ ಎಂಬುದನ್ನು ಈ ಕತೆಯಲ್ಲಿ ಚಿತ್ರಿಸಿದ್ದಾರೆ.

ರಾಜಶೇಖರ ನೀರಮಾನ್ವಿಯವರು ತಮ್ಮ ಕತೆಗಳಲ್ಲಿ ಗ್ರಾಮೀಣ ಪರಿಸರವನ್ನು ಚಿತ್ರಿಸುವುದರಲ್ಲಿ ಯಶಸ್ವಿಯಾದಂತೆ, ನಗರ ಜೀವನದ ಚಿತ್ರಣವನ್ನು ಚಿತ್ರಿಸುವುದರಲ್ಲಿ ತಮ್ಮದೇ ಆದ ಪಾರಮ್ಯದಿಂದ ಮೆರೆದಿದ್ದಾರೆ. ನಗರದ ಜೀವನ ಮಾನವೀಯ ಮೌಲ್ಯಗಳು, ಕೌಟುಂಬಿಕ ಸಂಬಂಧಗಳು, ಯಾವ ರೀತಿ ಇರುತ್ತವೆ ಎಂಬುದನ್ನು ನವ್ಯದ ಕತೆಗಾರರು ಚಿತ್ರಿಸಿದಂತೆ ತಮ್ಮ ಕತೆಗಳಲ್ಲಿ ಚಿತ್ರಿಸಿರುವುದನ್ನು ಕಾಣಬಹುದು. ಪ್ರಜಾಪ್ರಭುತ್ವದಲ್ಲಿ ಸಾವು, ಗುಡಿಯ ನೋಡಿರಣ್ಣಾ, ಹಂಗಿನರಮನೆಯ ಹೊರಗೆ ಮುಂತಾದ ಕತೆಗಳಲ್ಲಿ ನಗರ ಜೀವನದ ಸೂಕ್ಷ್ಮ ಪರಿಚಯವನ್ನು ಮಾಡಿಕೊಟ್ಟಿರುವುದನ್ನು ಕಾಣಬಹುದು.

ಪ್ರಜಾಪ್ರಭುತ್ವದಲ್ಲಿ ಸಾವು ಕತೆಯಲ್ಲಿ ಒಬ್ಬ ವ್ಯಕ್ತಿ ವಿಷವನ್ನು ಕುಡಿದು ದಾರಿಯಲ್ಲಿ ಹೊರಳಾಡುತ್ತಿರುತ್ತಾನೆ. ಅವನನ್ನು ನೋಡಲು ಸಾವಿರಾರು ಜನರು ಸೇರುತ್ತಾರೆ. ಅದರಲ್ಲಿ ಒಬ್ಬರಿಗಾದರೂ

ಆ ವ್ಯಕ್ತಿಯು ಸಾವು ಬದುಕಿನ ಮಧ್ಯ ಹೋರಾಡುವಾಗ ಅವನನ್ನು ರಕ್ಷಿಸಬೇಕೆಂಬ ಕರುಣೆ, ಮನಸ್ಥಿತಿ, ನಗರದ ಜನರಲ್ಲಿ ಬಾರದೇ ಅವನ ತಮಾಷೆಯನ್ನು ನೋಡುತ್ತಾ ನಿಂತಿರುತ್ತಾರೆ. ಆದರೆ ಈ ಕತೆಯ ನಾಯಕ ಅವನನ್ನು ಆಸ್ಪತ್ರೆಗೆ ಸೇರಿಸಿ ಮಾನವೀಯ ಮೌಲ್ಯದಿಂದ ಮೆರೆಯುತ್ತಾನೆ. ಆದರೆ ಆಸ್ಪತ್ರೆಯಲ್ಲಿ ವೈದ್ಯರು ಆತನ ಜೀವವನ್ನು ಉಳಿಸುವಂತಹ ಪ್ರಯತ್ನ ಮಾಡದೇ ಇವನು ಸತ್ತರೆ ದೇಶಕ್ಕೆ ಯಾವುದೇ ನಷ್ಟವಿಲ್ಲವೆಂದು, ಮನುಷ್ಯತ್ವದ ಬೆಲೆಯನ್ನು ಮರೆತು ಮಾತನಾಡುತ್ತಾರೆ. ಅಷ್ಟೇ ಅಲ್ಲದೇ ಆ ಸಾಯುವಂತಹ ವ್ಯಕ್ತಿಯ ಹೆಂಡತಿ ಕೂಡಾ ತನ್ನ ಗಂಡನನ್ನು ಉಳಿಸಿಕೊಳ್ಳುವಂತಹ ಪ್ರಯತ್ನ ಮಾಡದೇ ಅವರ ಸಾವು ನನ್ನನ್ನೇ ನರಕದಿಂದ ಪಾರು ಮಾಡೋ ದಾರಿ ದೀಪ ಎಂದು ಹೇಳುವುದು. ಇದರಿಂದ ತಿಳಿದು ಬರುವಂತಹ ಅಂಶವೆಂದರೆ ಗಂಡ ಹೆಂಡತಿಯ ಸಂಬಂಧಗಳು ನಗರದಲ್ಲಿ ಯಾವ ರೀತಿ ಅಧೋಗತಿಗೆ ಇಳಿದಿವೆ ಎಂಬುದನ್ನು ತಿಳಿಯಬಹುದು. ನಗರದ ಅಧ್ಯಕ್ಷನ ಮಗ ಸತ್ತರೆ ಕಾಲೇಜು ರಜೆ ಮಾಡಿಸುವುದು ಮೆರವಣಿಗೆ ಮಾಡುವುದು, ಬಂದ್‌ಗಳನ್ನು ಮಾಡಿಸುವುದು, ಕಂಡುಬರುತ್ತದೆ. ಒಬ್ಬ ಸಾಮಾನ್ಯ ವ್ಯಕ್ತಿಗೂ ರಾಜಕೀಯದ ಪ್ರಭಾವವಿರುವ ವ್ಯಕ್ತಿಗೂ ನಗರದಲ್ಲಿ ಯಾವ ರೀತಿ ಭಿನ್ನತೆ ಇದೆ ಎಂಬುದನ್ನು ನೀರಮಾನ್ವಿಯವರು ಹಳ್ಳಿಯ ಜೀವನದ ಜೊತೆಗೆ ನಗರ ಜೀವನದ ಚಿತ್ರಣವನ್ನು ಈ ಕತೆಯಲ್ಲಿ ಸಮರ್ಥವಾಗಿ ಕಟ್ಟಿಕೊಟ್ಟಿದ್ದಾರೆ.

"ಹಂಗಿನರಮನೆಯ ಹೊರಗೆ" ಕತೆಯು ಕೂಡಾ ಮಾನವೀಯ ಮೌಲ್ಯಗಳ ಹಿನ್ನಲೆಯಲ್ಲಿ ನೋಡಿದಾಗ ಇದು ಕೂಡಾ ನಗರ ಜೀವನಕ್ಕೆ ಸಂಬಂಧಿಸಿದಂತಹ ಕತೆಯೆಂದು ನಿರ್ಧರಿಸಬಹುದು. ಈ ಕತೆಯ ನಾಯಕ ವಿಕ್ಷಿಪ್ತ ವ್ಯಕ್ತಿತ್ವದವನು. ಕುಟುಂಬದಲ್ಲಿ ಗೌರವ ಮರ್ಯಾದೆಗಳನ್ನು ಕಳೆದುಕೊಂಡು, ಚಿಂತಾಕ್ರಾಂತನಾಗಿ, ರೋಗಿಯಾಗಿ ಆಸ್ಪತ್ರೆಗೆ ಸೇರಿರುತ್ತಾನೆ. ಆತನ ಬಗ್ಗೆ ತನ್ನ ತಂದೆ, ತಾಯಿ, ಬಂಧು, ಬಳಗ, ಹೆಂಡತಿ ಎಲ್ಲಾರು ಆತನನ್ನು ನಿರ್ಲಕ್ಷ್ಯ ಮನೋಭಾವದಿಂದ ಕಾಣುತ್ತಾರೆ. ಅಪ್ಪ, ಅಮ್ಮ ಬಂದು ಅವನನ್ನು ನೋಡಿ ಬಕೀಟು ಕಣ್ಣೀರು ಸುರಿಸುವುದು, ಮುನಿಸಿಕೊಂಡು ಹೋಗಿದ್ದ ಹೆಂಡತಿಯು ಗಂಡ ಅಸ್ವಸ್ಥನಾಗಿ ಆಸ್ಪತ್ರೆಗೆ ಸೇರಿದ್ದಾನೆಂದು ತಿಳಿದು ಕಣ್ಣೀರು ಸುರಿಸುವುದು, ಇಂತಹ ನಾಟಕೀಯ ಸನ್ನಿವೇಶಗಳು, ಮಾನವೀಯ ಮೌಲ್ಯಗಳು, ಕೌಟುಂಬಿಕ ಸಂಬಂಧಗಳು, ಗಂಡ ಹೆಂಡತಿ ಸಂಬಂಧಗಳು ನಗರ ಜೀವನದಲ್ಲಿ ಯಾವ ರೀತಿಯದಾಗಿ ನಾಶವಾಗುತ್ತಿವೆ ಎಂಬುದನ್ನು ರಾಜಶೇಖರ ನೀರಮಾನ್ವಿಯವರು ಅತ್ಯುತ್ತಮವಾಗಿ ಚಿತ್ರಿಸಿದ್ದಾರೆ. ಇದಕ್ಕೆ ವಿರುದ್ಧವಾಗಿ ನಗರದಲ್ಲಿಯು ಕೂಡಾ ಮಾನವೀಯ ಮೌಲ್ಯವನ್ನು ಒಳಗೊಂಡಿರುವಂತಹ ವ್ಯಕ್ತಿಗಳು ಕೆಲವರಾದರು ಇರುತ್ತಾರೆ ಎಂಬುದನ್ನು ಕಿರಣ ಪಾತ್ರದ ಮೂಲಕ ಚಿತ್ರಿಸಿ ಮಾನವೀಯ ಮೌಲ್ಯವನ್ನು ಎತ್ತಿ ಹಿಡಿದಿದ್ದಾರೆ.

"ಗುಡಿಯ ನೋಡಿರಣ್ಣಾ" ಕತೆಯು ಕೂಡಾ ಸೂಕ್ಷ್ಮವಾಗಿ ಅವಲೋಕಿಸಿದಾಗ, ನಗರ ಜೀವನಕ್ಕೆ ಸಂಬಂಧಿಸಿದಂತಹ ಕತೆಯೆಂದು ಗುರುತಿಸಬಹುದು. ಕೈಗಾರಿಕೀಕರಣದಿಂದಾಗಿ ಹಳ್ಳಿಯ ಜನರು ನಗರಗಳಿಗೆ ವಲಸೆ ಬಂದು ಜೀವನ ಮಾಡಲು ಪ್ರಾರಂಭಿಸಿದರು. ಇದರಿಂದಾಗಿ ಹಳೆಯ ಸಂಪ್ರದಾಯಗಳು,

ಮೌಲ್ಯಗಳು, ನಮ್ಮಿಂದ ಮರೆಯಾಗತೊಡಗಿದವು. ಮನಷ್ಯನಲ್ಲಿ ಜಾತಿ, ಮತ, ಬೇಧವಿಲ್ಲದೇ ಅಂತರ್ ಜಾತೀಯ ವಿವಾಹಗಳು ನಡೆಯಲು ಪ್ರಾರಂಭವಾದವು. ಇಂತಹ ನಗರ ಜೀವನದ ವಸ್ತುವನ್ನಿಟ್ಟುಕೊಂಡು ಕತೆಯು ನಿರ್ಮಾಣವಾಗಿದೆ. ನಗರದಲ್ಲಿ ಪ್ರೀತಿ, ಪ್ರೇಮ, ಮದುವೆ ಸಂಬಂಧಗಳು ಯಾವ ರೀತಿಯದಾಗಿ ನಡೆಯುತ್ತವೆ ಎಂಬುದನ್ನು ರವಿಯ ಪಾತ್ರದ ಮೂಲಕ ಚಿತ್ರಿಸಿದ್ದಾರೆ. ಕಾಲೇಜಿನಲ್ಲಿ ಉಪನ್ಯಾಸಕಿಯಾಗಿದ್ದ ಜಾನಕಿ ಜುಬೇದಾ ಆಗಿ ಪರಿವರ್ತನೆ ಹೊಂದುವುದು, ಹಿಂದೂಧರ್ಮಕ್ಕೆ ಸೇರಿದ ಜಾನಕಿ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಹೊಂದುವದು, ಅಂತರ್ಜಾತೀಯ ವಿವಾಹಗಳು ನಗರದಲ್ಲಿ ಕಂಡುಬರುತ್ತವೆ. ಆದರೆ ಇಂತಹ ಅಂಶಗಳು ಹಳ್ಳಿಯ ಜೀವನದಲ್ಲಿ ಕಂಡುಬರುವುದಿಲ್ಲ.

ರಾಜಶೇಖರ ನೀರಮಾನ್ವಿಯವರು ತಮ್ಮ ಕತೆಗಳಲ್ಲಿ ವಸ್ತುವನ್ನು ಆಯ್ಕೆ ಮಾಡುವಾಗ ಹಳ್ಳಿ ಮತ್ತು ನಗರ ಜೀವನಕ್ಕೆ ಸಂಬಂಧಿಸಿದಂತಹ ವಸ್ತುವನ್ನು ಸಮವಾಗಿ ಆಯ್ದುಕೊಂಡು ತಮ್ಮದೇ ಆದ ತಂತ್ರ, ಶೈಲಿ ಭಾಷೆಯ ಮೂಲಕ ಅಮೋಘವಾಗಿ ಚಿತ್ರಿಸಿರುವುದನ್ನು ಕಾಣಬಹುದು.

೪.೩. ಅಸ್ತಿತ್ವವಾದ

"ಅಸ್ತಿತ್ವವಾದ ಇಪ್ಪತ್ತನೇ ಶತಮಾನದ ಪ್ರಮುಖ ತತ್ವಜ್ಞಾನ. ಇದು ಜರ್ಮನಿಯಲ್ಲಿ ಆರಂಭಗೊಂಡು ಫ್ರಾನ್ಸ್, ಇಟಲಿಗಳಿಗೆ ಹರಡುತ್ತಾ ನಂತರ ಸಾಹಿತ್ಯ ವಲಯಗಳಲ್ಲಿ ವ್ಯಾಪಕವಾಗಿ ಚರ್ಚಿಸಲ್ಪಟ್ಟ ತತ್ವಶಾಸ್ತ್ರದ ಒಂದು ಒಲವೇ ಅಸ್ತಿತ್ವವಾದ. 'ಸೂರೆನ್‌ಕರ್ಕ್‌ಗಾರ್ಡ್' ರವರು ಅಸ್ತಿತ್ವವಾದದ ಜನಕರಾಗಿದ್ದಾರೆ. ಇದು ಮಾನವನ ಸ್ವಾತಂತ್ರ್ಯವನ್ನು ಮತ್ತು ವ್ಯಕ್ತಿತ್ವದ ಮಹತ್ವವನ್ನು ತಿಳಿಸುತ್ತದೆ."[೪] "ಮೂಲತಃ ವ್ಯಕ್ತಿ ಸಮಾಜದ ಭಾಗವಾಗಿದ್ದರೂ ವ್ಯಕ್ತಿಕೇಂದ್ರಿತ ಚಿಂತನೆಗೆ ಮಹತ್ವ ನೀಡಲಾಯಿತು. ಅದಕ್ಕೆ ಕಾರಣವೂ ಇದೆ. ಸಮಾಜದಲ್ಲಿ ಮದುವೆ, ಕುಟುಂಬ, ಜಾತಿ, ಧರ್ಮ, ಸಂಘಸಂಸ್ಥೆಗಳು, ಸ್ಥಾಪಿತಮೌಲ್ಯಗಳನ್ನು ಘೋಷಿಸಿಕೊಂಡು ಬರುತ್ತಿವೆ. ವ್ಯಕ್ತಿಗೆ ಆಯ್ಕೆಯ ಸ್ವಾತಂತ್ರ್ಯವಿಲ್ಲ, ಯಾರೋ ರೂಪಿಸಿದ ಜೀವನ ವಿಧಾನದಲ್ಲಿ ವ್ಯಕ್ತಿ ಬದುಕಬೇಕಾಗಿದೆ. ಇದನ್ನು ಮೀರಿ ಬದುಕಲು, ಹೊಸ ಜೀವನ ವಿಧಾನವನ್ನು ರೂಪಿಸಿಕೊಳ್ಳಲು ವ್ಯಕ್ತಿಗೆ ಸಾಧ್ಯವಾಗುವುದಿಲ್ಲ ಸಾಧ್ಯಮಾಡಿಕೊಳ್ಳಬೇಕಾದರೆ ವ್ಯಕ್ತಿಗತ ನೆಲೆಯಲ್ಲಿ ಹೋರಾಟ ಮಾಡಬೇಕು. ಪ್ರತೀ ಹೆಜ್ಜೆಗೂ ಅಡ್ಡಿ ಆತಂಕಗಳು ಎದುರಾಗುತ್ತವೆ. ಹೊಸ ನೈತಿಕತೆಯನ್ನು ನೆಲೆಗೊಳಿಸಲು ವ್ಯಕ್ತಿಗೆ ಕಷ್ಟವಾಗುತ್ತದೆ. ಸ್ಥಾಪಿತ ಮೌಲ್ಯಗಳ ಪರಿಸರದಲ್ಲಿ ಹುಸಿ ನೈತಿಕತೆಯಲ್ಲಿ ವ್ಯಕ್ತಿ ಬದುಕುತ್ತಿದ್ದಾನೆಂಬ ಅರಿವು ಮೂಡಿದರೂ ಬದುಕುವುದು ಅನಿವಾರ್ಯವಾಗಿ ಅದನ್ನೇ ಸಮರ್ಥಿಸಿಕೊಳ್ಳುತ್ತಾ ನಿಜವಾದ ವ್ಯಕ್ತಿತ್ವವನ್ನು ಕಳೆದುಕೊಳ್ಳುತ್ತಾನೆ ಎಂಬುದು ಅಸ್ತಿತ್ವವಾದದ ತಿಳುವಳಿಕೆ. ವ್ಯಕ್ತಿ ಏನು ಆಗಿರುವುದಿಲ್ಲವೋ ಅದು ಆಗಬೇಕು. ಆಗಬೇಕಾದರೆ ಸ್ವತಂತ್ರ್ಯ ಆಯ್ಕೆ ಮತ್ತು ಅದನ್ನು ಸಮರ್ಥವಾಗಿ ನಿಭಾಯಿಸುವ ಛಲಬೇಕು. ಆಗ ನಿಜವಾದ ವ್ಯಕ್ತಿಯಾಗುತ್ತಾನೆ. ಇರುವಿಕೆ ಮುಖ್ಯವಲ್ಲ ಆಗುವಿಕೆ ಮುಖ್ಯ. ಆಗುವಿಕೆಗಾಗಿ ವ್ಯಕ್ತಿ ತನ್ನ ಕುಟುಂಬ, ಧರ್ಮ, ಬದುಕುವ ಪರಿಸರ,

ಸಂಘಸಂಸ್ಥೆ ಎಲ್ಲಾದರ ವಿರುದ್ಧ ಹೋರಾಡಬೇಕು. ಈ ದಾರಿ ಸರಳವಲ್ಲ ವ್ಯಕ್ತಿ ಏಕಾಂಗಿಯಾಗುತ್ತಾನೆ, ಹತಾಶನಾಗುತ್ತಾನೆ, ವಿಕ್ಷಿಪ್ತನಾಗುತ್ತಾನೆ, ಉಸಿರುಗಟ್ಟಿದ ವಾತಾವರಣದಿಂದ ಹೊರಬರಲು ಹೆಣಗುತ್ತಾನೆ. ನಿಜವಾದ ವ್ಯಕ್ತಿಯಾಗಲು ಪ್ರಾಮಾಣಿಕವಾಗಿ ಹೋರಾಟ ಮಾಡುತ್ತಾನೆ. ಸಾಧ್ಯವಾಗದಿದ್ದರೆ ಸಾವಿಗೂ ಶರಣಾಗಲು ಹಿಂಜರಿಯುವುದಿಲ್ಲ. ಇದು ಅಸ್ತಿತ್ವವಾದದ ತಿಳುವಳಿಕೆಯಾಗಿದೆ."[30]

ಹೀಗೆ ಆಯ್ಕೆಯ ಸ್ವಾತಂತ್ರ್ಯ, ವೈಯಕ್ತಿಕತೆ, ಅಸ್ತಿತ್ವ ಈ ಮೂರು ಅಂಶಗಳ ಆಧಾರದ ಮೇಲೆ ಅಸ್ತಿತ್ವವಾದವು ಅವಲಂಬಿಸಿದೆ. ಇಂತಹ "ಅಸ್ತಿತ್ವವಾದವು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ನವ್ಯಸಾಹಿತ್ಯವೆಂದರೆ ಅಸ್ತಿತ್ವವಾದ ಸಾಹಿತ್ಯ, ಅಸ್ತಿತ್ವವಾದವೆಂದರೆ ನವ್ಯ ಸಾಹಿತ್ಯವೆನ್ನುವಷ್ಟರ ಮಟ್ಟಿಗೆ ಅಸ್ತಿತ್ವವಾದದ ಪ್ರಭಾವ ಕನ್ನಡ ಸಾಹಿತ್ಯದ ಮೇಲೆ ಆಗಿದೆ. ಅಸ್ತಿತ್ವವಾದ ಕನ್ನಡದಲ್ಲಿ ಮೊದಲು ಕಾಣಿಸಿಕೊಂಡಿದ್ದು ಕಾವ್ಯದಲ್ಲಿ. ಅಡಿಗ, ಗಂಗಾಧರ ಚಿತ್ತಾಲ, ರಾಮಾನುಜನ್‌ರವರ ಕವನಗಳ ಮುಖಾಂತರ ಅಡಿಗರ ಭೂಮಿಗೀತ, ಗಂಗಾಧರ ಚಿತ್ತಾಲರ ದುಃಖಗೀತೆ, ರಮಾನುಜನ್‌ರವರ ಅಪ್ಪಮಗ, ಕವನಗಳು ಅಸ್ತಿತ್ವವಾದೀ ನೆಲೆಯಲ್ಲಿ ಅಸ್ತಿತ್ವ ಪಡೆದಿರುತ್ತವೆ, ಕ್ರಮೇಣವಾಗಿ ಅಸ್ತಿತ್ವವಾದವು ಪಾಶ್ಚಾತ್ಯ ಸಾಹಿತ್ಯದಂತೆ ಭಾರತೀಯ ಸಾಹಿತ್ಯದಲ್ಲಿಯೂ ಕತೆ, ಕಾದಂಬರಿ, ನಾಟಕಗಳಲ್ಲಿ ಗಟ್ಟಿಯಾಗಿ ನೆಲೆಯೂರಿರುವುದನ್ನು ಕಾಣಬಹುದು."[31]

ಯು.ಆರ್.ಅನಂತಮೂರ್ತಿ, ಶಾಂತಿನಾಥದೇಸಾಯಿ, ಯಶವಂತ ಚಿತ್ತಾಲ, ಪಿ.ಲಂಕೇಶ್ ಮುಂತಾದ ನವ್ಯ ಸಾಹಿತಿಗಳ ಮೇಲೆ ಸಾರ್ತ್ರ್, ಸೂರೆನ್ ಕರ್ಕ್‌ಗಾರ್ಡ್ ಮುಂತಾದ ಅಸ್ತಿತ್ವವಾದಿಗಳು ಪ್ರಭಾವ ಬೀರಿರುವುದರಿಂದ ಅಸ್ತಿತ್ವವಾದದ ಹಿನ್ನಲೆಯಲ್ಲಿ ಅವರು ಕತೆಗಳನ್ನು, ಕಾದಂಬರಿಗಳನ್ನು ರಚಿಸಿದ್ದಾರೆ. ಅದೇ ರೀತಿಯದಾಗಿ ನವ್ಯದ ಕೊನೆಯಲ್ಲಿ ದಲಿತ ಬಂಡಾಯದ ಆರಂಭದ ಘಟ್ಟದಲ್ಲಿ ಬರುವಂತಹ ರಾಜಶೇಖರ ನೀರಮಾನ್ವಿಯವರು ತಮ್ಮ ಕತೆಗಳನ್ನು ಅಸ್ತಿತ್ವವಾದದ ಹಿನ್ನಲೆಯಲ್ಲಿ ರಚಿಸಿರುವುದನ್ನು ಕಾಣಬಹುದು.

ವೃತ್ತ ಕತೆಯು ಶಂಕರಪ್ಪಗೌಡನ ಪ್ರಜ್ಞೆಯಲ್ಲಿ ಬಿಚ್ಚಿಕೊಳ್ಳುತ್ತಾ ಬೆಳೆಯುತ್ತದೆ. ಗೌಡರು ಅನಿರೀಕ್ಷಿತವಾಗಿ ಸಾವಿಗೀಡಾಗುವ ಮುನ್ನ ಎರಡು ದಿನಗಳ ಕಾಲಾವಧಿಯಲ್ಲಿ ತಮ್ಮ ಬದುಕನ್ನು ಅವಲೋಕಿಸಿಕೊಳ್ಳತೊಡಗುತ್ತಾರೆ. ಗೌಡರ ಜೊತೆಯಲ್ಲಿದ್ದ ಬಲಿಷ್ಟ ನಾಯಿ ಸಾವಿಗೀಡಾಗುವುದು ಕತೆಯ ಆರಂಭದಲ್ಲಿಯೇ ಕಂಡು ಬರುತ್ತದೆ. ಆ ಸತ್ತ ನಾಯಿಯನ್ನು ಗೌಡರು ಮಣ್ಣು ಮಾಡಿಸುವುದು, ಹೊಲಕ್ಕೆ ಮನೆಗೆ ಚಲಿಸುತ್ತಲೇ ಬದುಕನ್ನು, ಬದುಕಿನ ಭಾಗವಾಗಿದ್ದ ತನ್ನ ಹೆಂಡತಿ ಪಾರ್ವತಿಯನ್ನು ನೆನೆಯುತ್ತಾ ತನ್ನ ಜೀವನವನ್ನು ಸಾಗಿಸುತ್ತಾನೆ. ಸಮಾಜ ವಿರೋಧಿ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದ ಮಗ ಗೌಡರ ಗೌರವಕ್ಕೆ ಧಕ್ಕೆ ತಂದಿರುತ್ತಾನೆ. ಗೌಡರು ಸಾವಿಗೀಡಾಗುವುದಕ್ಕೆ ಮಗನೇ ಕಾರಣನಾಗಿರುತ್ತಾನೆ. ಗೌಡರು ಮನೆಯಿಂದ ಹೊಲಕ್ಕೆ ಚಲಿಸುತ್ತಲೇ ಬದುಕನ್ನು ತಮ್ಮ ಪ್ರಜ್ಞೆಯ ಮೂಲಕ ಭೂತ ಮತ್ತು

ವರ್ತಮಾನವನ್ನು ಅವಲೋಕಿಸಿಕೊಳ್ಳತೊಡಗುತ್ತಾರೆ. ನಾಯಿಗಳನ್ನು ಸಾಕುವುದರಲ್ಲಿ ಗೌಡರಮನೆತನ ತುಂಬಾ ಪ್ರಸಿದ್ಧಿಯನ್ನು ಪಡೆದಿತ್ತು. ಒಂದು ನಾಯಿ ಚಿರತೆಯ ದಾಳಿಗೆ ಸಿಕ್ಕು ಸತ್ತು ಹೋಯಿತು. ನಂತರ ಬೇರೊಂದು ನಾಯಿಯನ್ನು ಸಾಕುವಂತಹ ಯೋಜನೆಯಿದ್ದರು ಅದಕ್ಕೆ ಗೌಡರ ಮಗ ರಾಮಲಿಂಗ ವಿರೋಧವನ್ನು ಒಡ್ಡುತ್ತಾನೆ. ಇದು ಗೌಡರ ಸ್ವಾತಂತ್ರ್ಯಕ್ಕೆ, ಸ್ವಾಭಿಮಾನಕ್ಕೆ ತಂದಂತಹ ಕುತ್ತಾಗಿತ್ತು. ಇಂತಹ ಸಮಸ್ಯೆಗಳು ಬಂದರೂ ಕೂಡಾ ಅವುಗಳನ್ನು ಧೈರ್ಯವಾಗಿ ಎದುರಿಸುವುದು ಅಸ್ತಿತ್ವವಾದದ ಕಲ್ಪನೆಯಾಗಿದೆ. ಗೌಡರು ಸಕಲ ಮರ್ಯಾದೆಗಳೊಂದಿಗೆ, ತನ್ನ ಜೀವನವನ್ನು ಸಾಗಿಸುತ್ತಾ ಹೋಗುತ್ತಿರುವಾಗ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವಂತಹ ವ್ಯಕ್ತಿಗಳಿಗೆ ತನ್ನ ಮನೆಯಲ್ಲಿ ಸ್ಥಳ ಕೊಟ್ಟಿದ್ದಾನೆಂದು ಆಪಾದಿಸಿ ಜೈಲಿಗೆ ಹಿಡಿದುಕೊಂಡು ಹೋಗುವುದು ಇಂತಹ ಚಿತ್ರಣ ಕಂಡುಬರುತ್ತದೆ. ಹೀಗೆ ಸಮಾಜದಲ್ಲಿ ಗೌರವಯುತ ಸ್ಥಾನವನ್ನು ಹೊಂದಿ, ಮರ್ಯಾದೆಯಿಂದ ಬಾಳಬೇಕು ಎಂದುಕೊಂಡಿದ್ದ ಗೌಡರಿಗೆ ಸಮಾಜ ಸುಮ್ಮನೇ ಬಿಡದೇ ಇಂತಹ ಅಡ್ಡಿ ಆತಂಕಗಳನ್ನು ತಂದೊಡ್ಡುತ್ತದೆ. ಇದರಿಂದ ನಿಜವಾದ ವ್ಯಕ್ತಿತ್ವವನ್ನು ಕಳೆದುಕೊಳ್ಳುತ್ತಾನೆಂಬುದು ಅಸ್ತಿತ್ವವಾದದ ತಿಳುವಳಿಕೆಯಂತೆ, ಈ ಎಲ್ಲಾದರ ವಿರುದ್ಧ ಹೋರಾಡುತ್ತಾನೆ, ಏಕಾಂಗಿಯಾಗುತ್ತಾನೆ. ಅದೇ ರೀತಿಯದಾಗಿ ತನ್ನ ಮಗ ರಾಮಲಿಂಗನ ಸಮಾಜ ಘಾತುಕ ಚಟುವಟಿಕೆಗಳು, ಕೊಲೆ ಮಾಡಿಸುವುದು ಈ ಎಲ್ಲಾ ವಿಷಯಗಳನ್ನು ತಿಳಿದು ಗೌಡರು ತನ್ನ ಅಸ್ತಿತ್ವವನ್ನು ಕಳೆದುಕೊಂಡು ಏಕಾಂಗಿಯಾಗಿ, ವಿಕ್ಷಿಪ್ತ ವ್ಯಕ್ತಿತ್ವದವನಾಗಿ, ಒಬ್ಬ ವ್ಯಕ್ತಿಯಾಗಿ, ಕುಟುಂಬದ ಒಳಗೆ, ಸಮಾಜದ ನಡುವೆ ತನ್ನ ಸ್ಥಾನ ಏನೆಂದು ಶೋಧಿಸುತ್ತಾ ತನ್ನ ಅಸ್ತಿತ್ವವನ್ನು ಕಂಡುಕೊಳ್ಳಲು ಪ್ರಯತ್ನಿಸಿ ತಾನೇ ಸಾವಿಗೀಡಾಗುವದು ಕತೆಯಲ್ಲಿ ಕಂಡು ಬರುತ್ತದೆ.

ದುರಸ್ತಿ ಕತೆಯು ಕೂಡಾ ಅಸ್ತಿತ್ವವಾದದ ಹಿನ್ನಲೆಯಲ್ಲಿ ರಚನೆಯಾಗಿರುವುದನ್ನು ಕಾಣಬಹುದು. ಈ ಕತೆಯ ನಾಯಕ ತಿಮ್ಮ ನಗರದಲ್ಲಿ ಸೈಕಲ್ ರಿಕ್ಷಾ ತುಳಿಯುವ ದುಡಿಮೆಗಾರ. ಗಿರಾಕಿಗಳನ್ನು ಕೂರಿಸಿಕೊಂಡು ಹೋಗುವುದು, ಸೈಕಲ್ ರಿಕ್ಷಾ ತುಳಿಯುತ್ತಲೇ ತನ್ನ ಬದುಕನ್ನು ಶೋಧಿಸಿ ಕೊಳ್ಳತೊಡಗುತ್ತಾನೆ. ಅಯ್ಯ ಎಂಬ ಧಣಿಗೆ ಮಗನಾಗಿ ಹುಟ್ಟಿದ್ದರೂ ಜಾತಿ, ಬಡತನ, ದುಡಿಮೆಯಲ್ಲಿ ಯಾವುದೇ ವ್ಯತ್ಯಾಸವನ್ನು ಕಾಣದವನು. ತನ್ನ ಕುಟುಂಬದ ಒಳಗೆ ಕಳ್ಳುಬಳ್ಳಿಯ ಸಂಬಂಧಗಳು ಛಿದ್ರವಾಗಿದ್ದರೂ ಅದನ್ನು ಸಹಿಸುವ, ಸರಿದಾರಿಗೆ ತರುವ ಮಾನವೀಯ ನೆಲೆಯಲ್ಲಿ ಪ್ರಯತ್ನ ನಡೆಸುತ್ತಾನೆ. ತಿಮ್ಮ ಅನೈತಿಕ ಸಂಬಂಧದಲ್ಲಿಯೇ ಬದುಕುವಂತಹ ಗಂಗಿಯನ್ನು ಮದುವೆಯಾಗಿ ತನ್ನ ಅಸ್ತಿತ್ವವನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಾನೆ. ಆದರೆ ಈ ಪ್ರಯತ್ನಕ್ಕೆ ಗಂಗಿಯೇ ಕೈಕೊಡುತ್ತಾಳೆ. ಇದರಿಂದ ತನ್ನ ಕೈ ತಾನೇ ಸುಟ್ಟುಕೊಂಡು, ತನ್ನತನವನ್ನು ರಕ್ಷಿಸಿಕೊಳ್ಳಲು ತಾನೇ ಹುಡುಕುತ್ತಾನೆ.

ಹೀಗೆ ವ್ಯಕ್ತಿಯು ತಾನು ಹೇಗೆ ಬಾಳಬೇಕೆಂದು ಒಂದು ನಿರ್ದಿಷ್ಟ ಗುರಿಯನ್ನು ಹಾಕಿಕೊಂಡವನಿಗೆ ಸಮಾಜ, ಸಂಘ ಸಂಸ್ಥೆಗಳು, ವ್ಯಕ್ತಿಗಳು ಯಾವ ರೀತಿಯಾಗಿ ಅಡ್ಡಿ ಆತಂಕಕ್ಕೆ ಒಳಪಡಿಸುತ್ತಾರೆ

ಎಂಬುದನ್ನು ಈ ಪಾತ್ರದ ಮೂಲಕ ತಿಳಿಯಬಹುದು. ಇಲ್ಲಿ ಇರುವಿಕೆ ಮುಖ್ಯವಲ್ಲ ಆಗುವಿಕೆ ಮುಖ್ಯವಾದದ್ದು. ಅನೈತಿಕ ಸಂಬಂಧದಲ್ಲಿರುವ ಗಂಗಿಯನ್ನು ತಪ್ಪಿಸಿ ತಾನು ಜೀವನ ನಡೆಸಬೇಕು ಎಂದು ಆಗುವಿಕೆಗಾಗಿ ಇಡೀ ಸಮಾಜವನ್ನು ಎದುರು ಹಾಕಿಕೊಳ್ಳುತ್ತಾನೆ. ಆದರೆ ಕೊನೆಗೆ ತನ್ನ ಅಸ್ತಿತ್ವಕ್ಕೆ ತಾನೇ ಕುಂದು ತಂದುಕೊಳ್ಳುತ್ತಾನೆ. ಅದೇ ರೀತಿಯದಾಗಿ ತಂಗಿ ನಾಗಮ್ಮಳನ್ನು ಕೂಡಾ ಸಂಸಾರಸ್ಥಳನ್ನಾಗಿ ಮಾಡಲು ಪ್ರಯತ್ನಿಸಿ ಸೋಲುತ್ತಾನೆ. ಸೈಕಲ್ ರಿಕ್ಷಾದ ಫ್ರಿವೀಲ್‌ಕೆಟ್ಟು ಹೋಗಿದ್ದರೂ ಗಂಗಿ ಮತ್ತು ನಾಗಮ್ಮಳ ಜೀವನವನ್ನು ದುರಸ್ತಿ ಮಾಡಲು ಹೋಗಿ ತನ್ನ ಅಸ್ತಿತ್ವವನ್ನು ಹೇಗೆ ಕಳೆದುಕೊಳ್ಳುತ್ತಾನೆ ಎಂಬುದು ಇಲ್ಲಿನ ತಿಳುವಳಿಕೆಯಾಗಿದೆ. ಕುಟುಂಬದ ಒಳಗೆ ಅನೈತಿಕತೆಗೆ ಬೇಸತ್ತಂತೆ ತಿಮ್ಮ ಸಮಾಜದಲ್ಲೂ ಅದನ್ನೇ ಎದುರುಗೊಳ್ಳುತ್ತಾನೆ.

ಹೆಣ್ಣುಗಳನ್ನು ಸಾಗಿಸುವ ದಲ್ಲಾಳಿ, ಸರ್ಕಾರದ ದಾಸ್ತಾನವನ್ನು ಕೊಳ್ಳೆ ಹೊಡೆಯುವ ಉದ್ಯೋಗಿಗಳನ್ನು ತಿಮ್ಮ ಎದುರಿಸಬೇಕಾಗುತ್ತದೆ. ತಾನು ಬದುಕುವ ಕುಟುಂಬ ಮತ್ತು ಸಮಾಜದಲ್ಲಿ ನಡೆಯುವ ಅನೈತಿಕ ಸಂಬಂಧಗಳ ನಡುವೆ ವ್ಯಕ್ತಿಯಾಗಿ ತಿಮ್ಮ ತನ್ನನ್ನು, ತನ್ನತನವನ್ನು ರಕ್ಷಿಸಿಕೊಳ್ಳುವುದೇ ಸವಾಲಾಗುತ್ತದೆ. ಇನ್ನಮ್ಯಾಕ ಯಾರು ಸತ್ತರೇನು, ಯಾರು ಅತ್ತರೇನು, ನನ್ನ ಮನ್ಸಿಗೆ ಬಂದಂಗ ಇದ್ರಾಯ್ತು ಎಂಬ ನಿರ್ಧಾರವನ್ನು ತಾಳುತ್ತಾನೆ. ಹೀಗೆ ತಿಮ್ಮ ಕುಟುಂಬ ಸಮಾಜ ತಾನು ಬದುಕುವ ಪರಿಸರ, ಈ ಎಲ್ಲಾದರ ವಿರುದ್ಧ ಹೋರಾಡುವುದು ಅದು ಅಷ್ಟೊಂದು ಸುಲಭದ ಕೆಲಸವಲ್ಲ ಇದರಿಂದಾಗಿ ವ್ಯಕ್ತಿ ಏಕಾಂಗಿಯಾಗುತ್ತಾನೆ, ವಿಕ್ಷಿಪ್ತನಾಗುತ್ತಾನೆ, ಹತಾಶನಾಗುತ್ತಾನೆ, ಉಸಿರುಗಟ್ಟಿದ ವಾತವರಣದಿಂದ ಹೊರಬರಲು ಪ್ರಯತ್ನಿಸಿ ತನ್ನ ಅಸ್ತಿತ್ವವನ್ನು ತಾನೇ ಹುಡುಕಲು ಪ್ರಯತ್ನಿಸುತ್ತಾನೆ.

ಕುಟುಂಬ ಸಮಾಜ ಮತ್ತು ವ್ಯಕ್ತಿಯ ನಡುವಿನ ಅಂತರ್ ಸಂಬಂಧದ ತೀವ್ರ ಶೋಧ ಭೂತ ಕತೆಯಲ್ಲಿಯೂ ಮುಂದುವರೆಯುತ್ತದೆ. ಈ ಕತೆಯ ನಾಯಕ ರಮೇಶ ವಿದ್ಯಾವಂತ. ತನ್ನ ವಂಶಜರ ಇತಿಹಾಸವನ್ನು ತಿಳಿಯಲು ಹೋಗಿ ಹಲವಾರು ಸಂಕಷ್ಟಗಳ ಸುಳಿಯಲ್ಲಿ ಸಿಕ್ಕಿಹಾಕಿಕೊಳ್ಳುತ್ತಾನೆ. ರಾಜಸಂತಾನವಾದ ರಮೇಶ ಎಂ.ಎಸ್ಸಿ ಪದವೀಧರ, ಅಧಿಕಾರದ ಧಣಿ ಆಗದೇ ತನ್ನ ಮನಸ್ಸಿಗೆ ಧಣಿ ಆಗಬೇಕೆಂಬ ಹಂಬಲದವನು. ಆದರೆ ಇದಕ್ಕೆ ಸಮಾಜವು ಒಪ್ಪದೇ ತನ್ನ ವಂಶಜರ ದಾರಿಯಲ್ಲಿ ನಡೆಯಲು ಸಮಾಜವೇ ಒತ್ತಾಯಿಸುವಂತೆ ಕಾಣುತ್ತದೆ. ಆದುದರಿಂದ ನಿನಗೆ ನಿನ್ನ ವಂಶಜರ ಭೂತ ಹಿಡಿದಿದೆ. ಅದನ್ನು ಬಿಡಿಸಬೇಕು ಎಂದರೆ ಶಾಂತಿಯನ್ನು ಮಾಡಿಸಬೇಕು ಎಂದು ಹೇಳುವುದು, ಕೊನೆಗೆ ಆಯನೂರಿನ ಪೀರಲ ಹಬ್ಬಕ್ಕೆ ತನಗೆ ಮನಸ್ಸಿಲ್ಲದಿದ್ದರೂ ಸಮಾಜದ ಒತ್ತಾಯಕ್ಕೆ ಮಣಿದು ಅಲ್ಲಿಗೆ ಬರುವುದು, ಅಲ್ಲಿ ದೆವ್ವ ಬಡಿಸಿಕೊಂಡವರ ಆಟಗಳು, ಮೊಹರಂ ಕುಣಿತಗಳು, ಮುಂತಾದವುಗಳನ್ನು ಕಂಡು ತನ್ನ ಅಸ್ತಿತ್ವವನ್ನು ಹುಡುಕಾಡಲು ಹೆಣಗಾಡುತ್ತಾನೆ. ಇಲ್ಲಿ ವ್ಯಕ್ತಿಯು ಸಮಾಜದ ಒಂದು ಭಾಗವಾಗಿದ್ದರೂ ವ್ಯಕ್ತಿಕೇಂದ್ರಿತ ಚಿಂತನೆಗೆ ಮಹತ್ವ ನೀಡಲಾಗಿದೆ. ಸಮಾಜವು ತನ್ನದೇ ಆದ ಸ್ಥಾಪಿತ

[illegible]

[illegible]

[illegible]

[illegible]

ಮೌಲ್ಯಗಳನ್ನು ಘೋಷಿಸಿಕೊಂಡು ಬರುತ್ತಿದೆ. ಆ ವ್ಯಕ್ತಿಗೆ ಆಯ್ಕೆಯ ಸ್ವಾತಂತ್ರ್ಯವಿಲ್ಲ ಯಾರೋ ರೂಪಿಸಿದ ಜೀವನ ವಿಧಾನದಲ್ಲಿ ವ್ಯಕ್ತಿಬದುಕಬೇಕಾಗಿದೆ. ಇದನ್ನು ಮೀರಿ ಬದುಕಲು ವ್ಯಕ್ತಿಗೆ ಸಾಧ್ಯವಾಗುವುದಿಲ್ಲ. ಸಾಧ್ಯಮಾಡಿಕೊಳ್ಳಬೇಕಾದರೆ ಪ್ರತೀ ಹೆಜ್ಜೆಗೂ ಅಡ್ಡಿ ಆತಂಕಗಳು ಎದುರಾಗುತ್ತವೆ. ಆಗ ವ್ಯಕ್ತಿ ನಿಜವಾದ ವ್ಯಕ್ತಿತ್ವವನ್ನು ಕಳೆದುಕೊಳ್ಳುತ್ತಾನೆ ಎಂಬಂತಹ ಅಸ್ತಿತ್ವವಾದದ ಹಿನ್ನಲೆಯಲ್ಲಿ ಈ ಕತೆಯನ್ನು ಗ್ರಹಿಸಬಹುದಾಗಿದೆ.

ಹಂಗಿನರಮನೆಯ ಹೊರಗೆ ರಾಜಶೇಖರ ನೀರಮಾನ್ವಿಯವರ ಕನ್ನಡ ಸಣ್ಣಕತೆಗಳ ಅಂಥ್ಯಾಲಜಿಗಳಲ್ಲಿ ಕಾಣಿಸಿಕೊಂಡಿದೆ. ನವ್ಯ ಸಾಹಿತ್ಯ ಸಂದರ್ಭದಲ್ಲಿ ಈ ಕತೆಗೆ ವಿಶೇಷ ಮನ್ನಣೆಸಿಕ್ಕಿದೆ. ಈ ಕತೆಯಲ್ಲಿ ನಾಯಕ ಕರಳು ಬೇನೆಯಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಒಳಗಾಗಿ ಚಲನೆ ರಹಿತನಾಗಿ ಮಲಗಿರುತ್ತಾನೆ. ಈತನಿಗೆ ಹೆಸರು ಕೂಡಾ ಇರುವುದಿಲ್ಲ. ನಾಯಕ ವ್ಯಕ್ತಿಯಾಗಿ, ಕುಟುಂಬದಲ್ಲಿ, ಸಮಾಜದಲ್ಲಿ ತನ್ನ ಅಸ್ತಿತ್ವವನ್ನು ಕಳೆದುಕೊಂಡಿರುತ್ತಾನೆ. ಕೈಹಿಡಿದ ಹೆಂಡತಿಯು ಸಹ ಇವನನ್ನು ನಂಬಿರುವುದಿಲ್ಲ. ಪ್ರೀತಿಸಿದ ಕಿರಣಳೂ ಕೂಡಾ ನಡು ನೀರಿನಲ್ಲಿ ಕೈಬಿಟ್ಟಿರುತ್ತಾಳೆ. ಈ ಎಲ್ಲಾ ಬಗೆಯ ಸಂಬಂಧಗಳನ್ನು ಕಳೆದುಕೊಂಡಿರುತ್ತಾನೆ. ಈತ ವಿದ್ಯಾವಂತನಾಗಿದ್ದರೂ ತನ್ನ ಜೀವನವನ್ನು ಸಾಗಿಸಲಾರದಂತಹ ಅಸಹಾಯಕ ವ್ಯಕ್ತಿಯಾಗಿ, ತಾನು ಬಯಸಿದಂತೆ, ಹಂಬಲಿಸಿದಂತೆ, ಯಾವುದೂ ಆಗುತ್ತಿಲ್ಲ, ಒಂದು ಕಡೆ ಕುಟುಂಬ ಮತ್ತೊಂದು ಕಡೆ ಸಮಾಜ ನನ್ನನ್ನು ಬದುಕಲು ಬಿಡುತ್ತಿಲ್ಲ ಎಂಬುದು ಈತನ ತಕರಾರು, ಮನಸ್ಸಿನ ಹೃದಯದ ಅನಿಸಿಕೆಗಳಿಗೆ ಓಗೊಡದ ಯಾರದೋ ಬಂಧನ, ಯಾರದೋ ನಾಲಿಗೆ, ಯಾರದೋ ಕಣ್ಣು, ಮನುಷ್ಯ ತನ್ನತನವನ್ನು ಹಂಚಿಕೊಂಡು ಬಾಳುವವರ ಘಟಕವಾದ ಈ ಜಗತ್ತು, ಸಮಾಜ ನನ್ನ ಪಾಲಿಗಂತೂ ಎಂದೋ ಸತ್ತುಂತಾಗಿ ಬಿಟ್ಟಿದೆ. ಅದಕ್ಕೆ ಈ ಸತ್ತ ಜನಜಂಗುಳಿಯಲ್ಲಿ ಬದುಕುವುದಕ್ಕಿಂತ ಸಾಯುವುದೇ ಲೇಸು ಎಂದು ನಿರ್ಧರಿಸುತ್ತಾನೆ. ಕೊನೆಗೆ ತನ್ನ ಪ್ರೇಯಸಿ ಕಿರಣಳ ಆಗಮನದಿಂದಾಗಿ ನಾನು ಇನ್ನೂ ಸ್ವಲ್ಪ ದಿವಸ ಬದುಕಬೇಕಾಗಿತ್ತು ಎಂದು ತನ್ನ ಅಸ್ತಿತ್ವವನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಾನೆ.

ಕುಟುಂಬ, ಸಮಾಜ ಮತ್ತು ವ್ಯಕ್ತಿಯ ಅಂತರ್ ಸಂಬಂಧದಲ್ಲಿ ಕತೆಯು ಸಾಗುತ್ತದೆ. ಸಮಾಜವು ಮನುಷ್ಯತ್ವವನ್ನು ಕಳೆದುಕೊಂಡಾಗ ವ್ಯಕ್ತಿ ತನ್ನತನವನ್ನು ಅಥವಾ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೇಗೆ ಪ್ರಯತ್ನ ಪಡಬೇಕಾಗುತ್ತದೆ ಎಂಬುದನ್ನು ಕತೆಯು ಅಸ್ತಿತ್ವವಾದದ ಹಿನ್ನಲೆಯಲ್ಲಿ ಚಿತ್ರಿಸಿಕೊಡುತ್ತದೆ. ಈ ಕತೆಯ ನಾಯಕಿ ರಂಗಮ್ಮ ಎಲೆಮಾರಿ ಜೀವನವನ್ನು ಸಾಗಿಸುತ್ತಿರುತ್ತಾಳೆ. ರಂಗಮ್ಮ ಹುಟ್ಟುತ್ತಲೇ ತನ್ನ ತಾಯಿಯನ್ನು ಕಳೆದುಕೊಂಡು ಮಾಬವ್ವನಲ್ಲಿ ಬೆಳೆಯುತ್ತಾಳೆ. ಮಾಬವ್ವಳ ಗಂಡ ರಜಾಕಾರರ ಜೊತೆ ಸೇರಿ ಊರೂರು ಅಲೆದು ಕೊಳ್ಳೆ ಹೊಡೆದು ದುರ್ಮರಣಕ್ಕೀಡಾಗಿರುತ್ತಾನೆ. ರಂಗಮ್ಮ ಇಂತಹ ಪರಿಸರದಲ್ಲಿ ಬೆಳೆದವಳು. ಎಲ್ಲೋ ಇದ್ದ ತಂದೆ ಬಂಧು ರಂಗಮ್ಮನನ್ನು ಮಾರಲು ಪ್ರಯತ್ನಿಸುತ್ತಾನೆ.

ಅದಕ್ಕೆ ವಿರೋಧ ಮಾಡುತ್ತಾಳೆ. ಅಲ್ಲದೇ ರಂಗಮ್ಮಳ ಗಂಡ ಸಹ ಅವಳನ್ನು ಮಾರುವುದಕ್ಕೆ ಸಂಚು ನಡೆಸಿದಾಗ, ತನ್ನತನವನ್ನು ಉಳಿಸಿಕೊಳ್ಳಲು, ಸ್ವಾತಂತ್ರ್ಯ ಮತ್ತು ಆಯ್ಕೆಯ ಹಕ್ಕನ್ನು ಪಡೆಯಲು ಅದನ್ನು ಧಿಕ್ಕರಿಸಿ ಕಿರಾಣಿ ಅಂಗಡಿಯ ಯಂಕಯ್ಯನ ಸೂಳೆಯೆಂದು ಘೋಷಿಸುತ್ತಾಳೆ. ಜೊತೆಗೆ ಇವತ್ನಿಂದ ನನ್ನೋರು ಅಂಬೋರು ಯಾರೂ ಇಲ್ಲ ಎಂದು ಸಾರುತ್ತಾಳೆ. ಹೀಗೆ ಕತೆಯು ಅಸ್ತಿತ್ವವಾದದ ಹಿನ್ನಲೆಯಲ್ಲಿ ರಚನೆಯಾಗಿರುವುದನ್ನು ಗುರುತಿಸಬಹುದು.

ರಾಜಶೇಖರ ನೀರಮಾನ್ವಿಯವರು ನವ್ಯದ ಕತೆಗಾರರ ಪ್ರಭಾವ ಮತ್ತು ಪ್ರೇರಣೆಗಳಿಗೆ ಒಳಪಟ್ಟು, ತಮ್ಮ ಕತೆಗಳನ್ನು ನವ್ಯದ ಕತೆಗಾರರಂತೆ ಅಸ್ತಿತ್ವವಾದದ ಹಿನ್ನಲೆಯಲ್ಲಿ ರಚಿಸಿರುವುದನ್ನು ಗುರುತಿಸಬಹುದು.

೪.೪. ಮಹಿಳಾ ಲೋಕ

ರಾಜಶೇಖರ ನೀರಮಾನ್ವಿಯವರು ಸಶಕ್ತ ಕತೆಗಾರರಾಗಿದ್ದು, ತಮ್ಮ ಕತೆಗಳನ್ನು ಬರೆಯುವಾಗ ವಸ್ತುವಿನ ಆಯ್ಕೆಯಲ್ಲಿ ತಮ್ಮ ಪ್ರತಿಭೆಯನ್ನು ತೋರಿಸಿರುವಂತೆ ಪಾತ್ರಗಳನ್ನು ಸಮಯ, ಸಂದರ್ಭ, ಪ್ರಸಂಗಗಳಿಗೆ ಅನುಗುಣವಾಗಿ ಚಿತ್ರಿಸುವಲ್ಲಿ ತಮ್ಮದೇ ಆದ ಸೃಜನಶೀಲತೆಯಿಂದ ಮೆರೆದಿದ್ದಾರೆ. ಇವರ ಕತೆಗಳಲ್ಲಿ ಮಹಿಳಾ ಲೋಕ ಅದ್ಭುತವಾಗಿ ಚಿತ್ರಿಸಿರುವುದನ್ನು ಕಾಣಬಹುದು. ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯು ಯಾವ ರೀತಿಯದಾಗಿ ದಬ್ಬಾಳಿಕೆ, ದೌರ್ಜನ್ಯ, ಶೋಷಣೆಗೆ ಒಳಗಾಗಿ, ತನ್ನತನವನ್ನು ಆಯ್ಕೆಯ ಸ್ವಾತಂತ್ರ್ಯವನ್ನು ಮತ್ತು ತನ್ನ ಸ್ಥಾನಮಾನವನ್ನು ಹೇಗೆ ಕಳೆದುಕೊಂಡಿದ್ದಾಳೆ ಎಂಬುದನ್ನು ಚಿತ್ರಿಸುವುದರ ಮೂಲಕ, ಮಹಿಳೆಯರ ಸ್ವಭಾವ ಗುಣಗಳು, ಲಕ್ಷಣಗಳು, ಸ್ಥಾನಮಾನಗಳು, ಅವರ ಸಮಸ್ಯೆಗಳು, ವ್ಯಕ್ತಿತ್ವ ಮತ್ತು ಜೀವನ ಕ್ರಮಗಳು ಯಾವ ತೆರನಾಗಿ ಇರುತ್ತವೆ ಎಂಬುದನ್ನು ನೀರಮಾನ್ವಿಯವರು ತಮ್ಮ ಕತೆಗಳಲ್ಲಿ ಸಮರ್ಥವಾಗಿ ಕಟ್ಟಿಕೊಡಲು ಪ್ರಯತ್ನಿಸಿ ಯಶಸ್ವಿಯಾಗಿದ್ದಾರೆ. ಅಲ್ಲದೇ ನೀರಮಾನ್ವಿಯವರು ತಮ್ಮ ಪ್ರತಿಯೊಂದು ಕತೆಯಲ್ಲಿಯೂ ಮಹಿಳಾ ಲೋಕವನ್ನು ಸೃಷ್ಟಿಸಿ ಪ್ರೀತಿ, ತ್ಯಾಗ, ಅನುಕಂಪ, ಮಾನವೀಯ ಮೌಲ್ಯಗಳನ್ನು ಒಳಗೊಂಡಿರುವಂತಹ ಸ್ತ್ರೀಪಾತ್ರಗಳನ್ನು ಸೃಷ್ಟಿಸಿರುವಂತೆ, ದ್ವೇಷ, ಅಸೂಯೆ, ಗಯ್ಯಾಳಿಗಳು, ಸೂಳೆಯರು ಮುಂತಾದ ಪಾತ್ರಗಳನ್ನು ಸೃಷ್ಟಿಸುವಲ್ಲಿ ಸಮಾನತೆಯನ್ನು ಮೆರೆದಿದ್ದಾರೆ. ಒಟ್ಟಾರೆಯಾಗಿ ಮಹಿಳಾಲೋಕವನ್ನು ತಮ್ಮ ಕತೆಗಳಲ್ಲಿ ವಿಶೇಷವಾಗಿ ಚಿತ್ರಿಸಿದ ಕತೆಗಾರರಾಗಿದ್ದಾರೆ. ಇವರ ಕತೆಗಳಲ್ಲಿ ಮಹಿಳಾ ಲೋಕ ಹೇಗೆ ಮೂಡಿ ಬಂದಿದೆ ಎಂಬುದನ್ನು ಈ ಕೆಳಗಿನಂತೆ ತಿಳಿಯೋಣ.

ವೃತ್ತ ಕತೆಯಲ್ಲಿ ಬರುವ ಪಾರ್ವತಿ ಎಂಬ ಪಾತ್ರವು ಶಂಕರಪ್ಪಗೌಡನ ಹೆಂಡತಿಯಾಗಿದ್ದಳು, ಈ ಪಾತ್ರವು ಮಾನವೀಯ ಮೌಲ್ಯಗಳ ಸಂಕೇತವಾಗಿ ಉತ್ತಮ ಮಾತ್ರ ಹೃದಯ ಹೊಂದಿದ ಕರುಣಾ ಮೂರ್ತಿಯಂತೆ ಚಿತ್ರಿತಗೊಂಡಿದೆ. ಪ್ರತಿಯೊಬ್ಬ ವ್ಯಕ್ತಿಯ ಯಶಸ್ಸಿನ ಹಿಂದೆ ಒಂದು ಹೆಣ್ಣು ಮಹತ್ವದ ಪಾತ್ರವನ್ನು ವಹಿಸಿರುತ್ತಾಳೆ, ಎಂಬ ಮಾತಿಗೆ ಅಪವಾದವಾಗದಂತೆ ಗೌಡನ ಯಶಸ್ಸಿನ ಹಿಂದೆ ತನ್ನ

ಹೆಂಡತಿ ಪಾರ್ವತಿಯ ಪಾತ್ರ ತುಂಬಾ ಹಿರಿದಾಗಿರುವುದನ್ನು ಕಾಣಬಹುದು. ತನ್ನ ಗಂಡನಿಗೆ ಕೇಡು ಬಗೆದಿದ್ದ ಮನೆಯನ್ನು ಲೂಟಿ ಮಾಡಲು ಪ್ರಯತ್ನಿಸಿದ್ದ ರಜಾಕಾರ ಹುಸೇನಿ ಮಧ್ಯರಾತ್ರಿಯಲ್ಲಿ ಗೌಡನ ಹತ್ತಿರ ತನ್ನ ಪ್ರಾಣಭಿಕ್ಷೆ ಬೇಡಿದಾಗ ಅವನನ್ನು ಕ್ಷಮಿಸುವಂತೆ ಹೇಳಿ ಪ್ರಾಣದಾನವನ್ನು ನೀಡುತ್ತಾಳೆ. ಒಟ್ಟಾರೆಯಾಗಿ ಗೌಡತಿಯ ಪಾತ್ರವು ಶಾಂತಿ, ಸಹಕಾರ, ಅನೋನ್ಯತೆ, ಸಹಾಯಗುಣ, ಮಾನವೀಯ ಮೌಲ್ಯಗಳ ಸಾಕಾರ ಮೂರ್ತಿಯಾಗಿ ಮಹಿಳಾ ಲೋಕ ಚಿತ್ರಿತವಾಗಿರುವುದನ್ನು ಇವರ ಕತೆಯಲ್ಲಿ ಕಾಣಬಹುದು.

'ಭೂತ' ಕತೆಯಲ್ಲಿ ಮ್ಯಾಳೂರು ಗೌಡತಿಯ ಪಾತ್ರವನ್ನು ಚಿತ್ರಿಸಿದ್ದಾರೆ. ವೃತ್ತಕತೆಯ ಗೌಡತಿ ಪಾರ್ವತಿಯ ಪಾತ್ರ ಚಿತ್ರಕ್ಕೂ ಈ ಪಾತ್ರವನ್ನು ಚಿತ್ರಿಸುವುದಕ್ಕೂ ತುಂಬಾ ವಿಭಿನ್ನತೆಯಿಂದ ಚಿತ್ರಿಸಿದ್ದಾರೆ. ಹೆಣ್ಣು ಗಂಡಿಗಿಂತ ಯಾವ ವಿಷಯದಲ್ಲೂ ಕಡಿಮೆಯಿಲ್ಲವೆಂಬಂತೆ ಕಾಡು ಪ್ರಾಣಿಗಳನ್ನು ಬೇಟೆಯಾಡುವ ಸಾಹಸದ ಪಾತ್ರವಾಗಿ ಇಲ್ಲಿನ ಮಹಿಳಾ ಲೋಕದ ಸೂಕ್ಷ್ಮ ಪರಿಚಯವನ್ನು ಮಾಡಿಕೊಡಲಾಗಿದೆ.

"ಹಂಗಿನರಮನೆಯ ಹೊರಗೆ" ಕತೆಯಲ್ಲಿ ಮಹಿಳಾ ಲೋಕವು ಸಿನಿಕತನ, ನಾಟಕೀಯತೆಯ ಭಾಗವಾಗಿ ಚಿತ್ರಿತವಾಗಿದೆ. ಕಥಾನಾಯಕ ಆಸ್ಪತ್ರೆಯಲ್ಲಿ ಅನಾರೋಗ್ಯದಿಂದ ಬಳಲುತ್ತಿರುತ್ತಾನೆ. ತನ್ನ ತಾಯಿ ಒಂದು ಬಕೀಟು ಕಣ್ಣೀರು ಸುರಿಸುವುದು, ಡಾಕ್ಟರ್ ದಿನದ ಭೇಟ್ಟಿಗಾಗಿ ಒಳಗೆ ಬಂದಾಗ ನೀರು ಹಾಕಿದ ಕೂಡಲೇ ಕಡಿಮೆಯಾಗುವ ಹಾಲಿನ ಉಕ್ಕಿನಂತೆ ಅಮ್ಮನ ಅಳು ಕಡಿಮೆಯಾಗುವುದು ಇಲ್ಲೆಲ್ಲಾ ನಾಟಕೀಯದ ಭಾಗವಾಗಿ ತನ್ನ ತಾಯಿಯ ಪಾತ್ರವು ಚಿತ್ರಿತವಾಗಿದೆ.

ಅದೇ ರೀತಿಯದಾಗಿ ಹೆಂಡತಿಯ ಪಾತ್ರವು ಕೂಡಾ ಕಂಡು ಬರುತ್ತದೆ. ಹೆಂಡತಿಯು ಗಂಡನ ಪ್ರತಿಯೊಂದು ಕಷ್ಟಸುಖಗಳು, ನೋವು ನಲಿವುಗಳನ್ನು ಸಮನಾಗಿ ಹಂಚಿಕೊಂಡು ಜೀವನ ಸಾಗಿಸಬೇಕಾಗಿತ್ತು. ಆದರೆ ಇಲ್ಲಿಯ ಹೆಂಡತಿಯ ಪಾತ್ರವು ಇದಕ್ಕೆ ಅಪವಾದವೆಂಬಂತೆ ಕಂಡು ಬರುತ್ತದೆ. ಒಂದು ಹೆಣ್ಣಿಗೆ ತಾಳಿಯ ಸೌಭಾಗ್ಯವನ್ನು ಕೊಟ್ಟಂತಹ ಗಂಡ ಆಸ್ಪತ್ರೆಯಲ್ಲಿ ಸಾವು ಬದುಕಿನ ಮಧ್ಯ ಹೋರಾಡುತ್ತಿರುವಾಗ ಗಂಡನ ಜೊತೆಯಲ್ಲಿಯೇ ಇರುವುದನ್ನು ಬಿಟ್ಟು, ಅತಿಥಿಗಳು ಬರುವ ಹಾಗೆ ತನ್ನ ಗೆಳತಿಯರೊಂದಿಗೆ ಅನುಕಂಪ, ದುಃಖಗಳನ್ನು ಸೂಚಿಸಿ, ತನ್ನ ಗಂಡನ ಯೋಗಕ್ಷೇಮವನ್ನು ವಿಚಾರಿಸುವಾಗ, ಬಹಳ ಅಳಬೇಡ ಮನೆಗೆ ಹೋಗಬೇಕಾದರೆ ಸ್ನೋ ಪೌಡರ್ ಹಚ್ಚಬೇಕಾದೀತು, ಮುಖದ ತುಂಬಾ ಬಣ್ಣ ಬಳಿದುಕೊಂಡು ಸಿನಿಮಾದಲ್ಲಿ ಅಳುತ್ತಿರುವ ಮೀನಾಕುಮಾರಿಯ ನೆನಪು ತನ್ನ ಗಂಡನಿಗೆ ಬರುತ್ತದೆ. ಈ ಅಳು ಹೆಣ್ಣಿನ ದೈವದತ್ತಕಲೆ ಕೆಲವರಿಗೆ ಅದೊಂದು ಫ್ಯಾಶನ್, ಇನ್ನುಳಿದವರಿಗೆ ಅದೊಂದು ರೋಗವಾಗಿ ಕಂಡುಬರುತ್ತದೆ. ಹೀಗೆ ಈ ಕತೆಯಲ್ಲಿ ಗಂಡ ಹೆಂಡತಿಯ ಸಂಬಂಧಗಳು, ಮಾನವೀಯ ಮೌಲ್ಯಗಳು, ಕೌಟುಂಬಿಕ ಸಂಬಂಧಗಳು ಒಂದು ಹೆಣ್ಣಿನಿಂದಾಗಿ ಯಾವ ರೀತಿಯದಾಗಿ ತನ್ನ ಮಹತ್ವವನ್ನು ಕಳೆದುಕೊಳ್ಳುತ್ತವೆ ಎಂಬುದನ್ನು ಈ ಕತೆಯಲ್ಲಿ ಕಂಡುಬರುವ ಮಹಿಳಾಲೋಕದ

ವಿಶೇಷವಾಗಿದೆ. ಇದಕ್ಕೆ ಅಪವಾದವೆಂಬಂತೆ ಕತೆಗಾರ ತನ್ನ ಕೌಶಲ್ಯದಿಂದ ಕಿರಣಳ ಎಂಬ ಪಾತ್ರವನ್ನು ತಂದು ರೋಗಿಯಾಗಿ ಚಿಕಿತ್ಸೆಯನ್ನು ಪಡೆಯುತ್ತಿರುವ ಕಥಾನಾಯಕನ ಆರೈಕೆಯಲ್ಲಿ ಮಸ್ಸಿನಗೆ ಚಿಕಿತ್ಸೆ ನೀಡಿ ಬದುಕುವ ಆಸೆಯನ್ನು ಹುಟ್ಟಿಸುವಂತಹ ಮಾನವೀಯತೆಯನ್ನು ಮೆರೆಯುವ ಮಹಿಳಾ ಲೋಕವನ್ನು ಚಿತ್ರಿಸಿರುವುದು ಕತೆಗಾರನ ಜಾಣ್ಮೆಯಾಗಿದೆ.

ದುರಸ್ತಿ ಕತೆಯಲ್ಲಿ ರಾಜಶೇಖರ ನೀರಮಾನ್ವಿಯವರು ಗಂಗಿ ಎಂಬ ಪಾತ್ರವನ್ನು ಚಿತ್ರಿಸುವುದರ ಮೂಲಕ ಮೀನಿನ ಹೆಜ್ಜೆಯನ್ನು ಗುರುತಿಸಬಹುದು ಆದರೆ ಹೆಣ್ಣಿನ ನೆಲೆ ಗುರುತಿಸುವುದು ಸಾಧ್ಯವಿಲ್ಲ ಎಂಬ ಮಾತಿಗೆ ಸಾಕ್ಷಿಯಾಗಿ ಮಹಿಳಾ ಪಾತ್ರವನ್ನು ಚಿತ್ರಿಸಿ ಯಶಸ್ವಿಯಾಗಿದ್ದಾರೆ. ಕಥಾನಾಯಕ ತಿಮ್ಮನನ್ನು ಪ್ರೀತಿಸಿ ಮದುವೆಯಾಗುವೆನೆಂದು ನಂಬಿಸಿ ಆತನಿಂದ ಹಣವನ್ನು ಕಿತ್ತುಕೊಂಡು ಊರನ್ನೇ ಬಿಟ್ಟುಹೋಗುವ ವಿಶ್ವಾಸ ಘಾತಕಿ, ನೀಚ ವ್ಯಕ್ತಿತ್ವದವಳಾಗಿ ಕಂಡು ಬರುತ್ತಾಳೆ. ಗಂಗಿ ವೃತ್ತಿಯಲ್ಲಿ ಸೂಳೆಗಾರಿಕೆ ಮಾಡುತ್ತಾಳೆ ಎಂಬ ವಿಷಯ ತಿಮ್ಮನಿಗೆ ತಿಳಿದಿದ್ದರೂ ಕೂಡಾ ಆಕೆಗೊಂದು ಬಾಳು ಅಥವಾ ನೆಲೆಯನ್ನು ಕೊಡಬೇಕೆಂಬ ಆದರ್ಶ ಮೌಲ್ಯಕ್ಕೆ 'ಎಳ್ಳು ನೀರು ಬಿಡುವ' ತಿಮ್ಮನ ಆಸೆ ಆಕಾಂಕ್ಷೆಗಳಿಗೆ ಮಣ್ಣು ಹಾಕುವಂತಹ ಕೆಲಸ ಮಾಡುತ್ತಾಳೆ. ಒಟ್ಟಾರೆಯಾಗಿ ಪ್ರೀತಿ, ಪ್ರೇಮ, ನಂಬಿಕೆ, ವಿಶ್ವಾಸಕ್ಕೆ ಅಪವಾದವಾಗಿ ಸನ್ನಿವೇಶಕ್ಕೆ ತಕ್ಕಂತೆ ಚಿತ್ರಿಸುವುದು ಇವರ ಪ್ರತಿಭಾ ಕೌಶಲ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಗಂಗಿ ಪಾತ್ರಕ್ಕೆ ಸಮಾನವೆಂಬಂತೆ ಈ ಕತೆಯಲ್ಲಿ ತಿಮ್ಮನ ತಂಗಿ ನಾಗಮ್ಮಳ ಪಾತ್ರ ಚಿತ್ರಣವೂ ಕಂಡು ಬರುತ್ತದೆ. ಇವಳು ತನ್ನ ಅಣ್ಣನಾದ ತಿಮ್ಮನ ಗೌಡನ ಜೊತೆಯಲ್ಲಿ ಅಕ್ರಮ ಸಂಬಂಧವನ್ನಿಟ್ಟುಕೊಂಡು ಹೇಯ ವ್ಯಕ್ತಿತ್ವದವಳಾಗಿ ಮನುಷ್ಯ ಸಂಬಂಧಗಳಿಗೆ ಬೆಲೆಯಿಲ್ಲವೆನ್ನುವಂತೆ ಕಾಮದ ಪ್ರತೀಕವಾಗಿ ಚಿತ್ರಿತಳಾಗಿದ್ದಾಳೆ. 'ಯಮುನಮ್ಮ' ಎಂಬ ಪಾತ್ರವು ಗೌಡನ ಹಿರಿಯ ಮಗಳು ತಿಮ್ಮನ ತಂಗಿ ಬಾಲ್ಯದಲ್ಲಿಯೇ ಮದುವೆಯಾಗಿ ತನ್ನ ಗಂಡನನ್ನು ಕಳೆದುಕೊಂಡು ವಿಧವೆಯಾಗಿ ತವರು ಮನೆ ಸೇರಿರುತ್ತಾಳೆ. ಅಣ್ಣ ಎಂಬ ಮಾನವೀಯ ಸಂಬಂಧವನ್ನು ತಿಳಿಯದೆ ತನ್ನ ದೈಹಿಕ ಸುಖವನ್ನು ಪಡೆಯಲು ಇಚ್ಛಿಸುತ್ತಾಳೆ. ಕೊನೆಗೆ ಅಕ್ರಮ ಸಂಬಂಧದಿಂದಾಗಿ ಬಾವಿಗೆ ಬಿದ್ದು ಸಾಯುತ್ತಾಳೆ. ಈ ಕತೆಯಲ್ಲಿ ಬರುವಂತಹ ಗಂಗಿ, ನಾಗಮ್ಮ, ಯಮುನಕ್ಕ ಪರಸ್ಪರ ಸಂಬಂಧವನ್ನು ಹೊಂದಿರುವ ಪಾತ್ರಗಳಾಗಿವೆ.

ಬಿಸಿಲುಗುದುರೆ ಕತೆಯಲ್ಲಿ ಕಂಡುಬರುವಂತಹ ರಜನಿ ಎಂಬ ಮಹಿಳಾ ಪಾತ್ರವು ಪುರುಷ ಪ್ರಧಾನ ಸಮಾಜದಲ್ಲಿ ಗಂಡಸಿನ ಆಸರೆಯಿಲ್ಲದೇ ಸ್ವತಂತ್ರ್ಯವಾಗಿ ಬದುಕಬೇಕೆನ್ನುವ ಆದರ್ಶ ವ್ಯಕ್ತಿತ್ವದವಳಾಗಿ ಚಿತ್ರಿತವಾಗಿದ್ದಾಳೆ. ಸಾಂಪ್ರದಾಯಿಕ ವಿವಾಹಗಳಲ್ಲಿ ನಂಬಿಕೆಯಿಲ್ಲದವಳಾಗಿ, ತನ್ನ ಕಾಮವನ್ನು ಹಸಿವು, ನೀರಡಿಕೆಗಳಂತೆ ಹಿಂಗಿಸಿಕೊಂಡು ತೃಪ್ತಿ ಹೊಂದುವ, ಮಹಿಳಾ ಸಮಾಜಕ್ಕೆ ವಿರೋಧವಾಗಿ ಆಲೋಚಿಸುವ ವಿಭಿನ್ನ ಪಾತ್ರವಾಗಿ ಚಿತ್ರಿತವಾಗಿದೆ.

'ಬೆತ್ತಲೆ ಸ್ವಾಮಿ' ಕತೆಯಲ್ಲಿ ಕಂಡುಬರುವಂತಹ ಖಾನಾವಳಿ ಯಮುನಕ್ಕ ಇವಳು ತನ್ನ ಜೀವನವನ್ನು ನಡೆಸುವುದಕ್ಕಾಗಿ ಅನೈತಿಕ ಸಂಬಂಧಗಳನ್ನು ಇಟ್ಟುಕೊಂಡು ಖಾನಾವಳಿಯೊಂದನ್ನು ನಡೆಸುತ್ತಿರುತ್ತಾಳೆ. ಕೊನೆಯಲ್ಲಿ ಬೆತ್ತಲೆ ಸ್ವಾಮಿಯ ದಯೆಯಿಂದ ಚುನಾವಣೆಗೆ ಸ್ಪರ್ಧಿಸಿ ಒನಕೆ ಪಕ್ಷದಿಂದ ಆರಿಸಿ ಬಂದಳು. ನಂತರ ಖಾನಾವಳಿ ಯಮುನಕ್ಕ ಯಮುನಾದೇವಿಯಾಗಿ ಮಾರ್ಪಟ್ಟಿರುವುದು ಈ ಕತೆಯಲ್ಲಿ ಬರುವಂತಹ ಮಹಿಳಾ ಲೋಕದ ವಿಶೇಷತೆಯಾಗಿದೆ.

'ನೆಲೆ' ಕತೆಯಲ್ಲಿ ಬರುವಂತಹ ಮಾಬವ್ವಳ ಪಾತ್ರವು ಮಾನವೀಯ ಮೌಲ್ಯದ ಪ್ರತೀಕವಾಗಿ ಚಿತ್ರಿತಳಾಗಿದ್ದಾಳೆ. ಆದರೆ ಇವಳು ಸಹ ಉಳಿದ ಕತೆಯಲ್ಲಿ ಬರುವಂತೆ ಲಿಂಗನ ಗೌಡನ ಜೊತೆಗೆ ಅನೈತಿಕ ಸಂಬಂಧವನ್ನು ಇಟ್ಟುಕೊಂಡಿದ್ದಳು. ಆದರೆ ಕರುಣಾ ಮೂರ್ತಿಯಾದಂತಹ ಮಾಬವ್ವ ಅನಾಥ ಮಗುವಾದ ರಂಗಮ್ಮಳಿಗೆ ಆಶ್ರಯನೀಡಿ ಮಾನವೀಯತೆಯನ್ನು ಮೆರೆಯುವಂತಹ ಮಹಿಳಾ ಲೋಕವಾಗಿ ಚಿತ್ರಿತವಾಗಿರುವುದನ್ನು ಕಾಣಬಹುದು. ಇದೇ ಕತೆಯಲ್ಲಿ ಬರುವಂತಹ ಕಥಾನಾಯಕಿ ರಂಗಮ್ಮ ಎಂಬ ಪಾತ್ರವು ಉಳಿದೆಲ್ಲ ಕತೆಗಳ ಪಾತ್ರಗಳಿಗಿಂತ ವಿಭಿನ್ನ ನೆಲೆಯಲ್ಲಿ ಚಿತ್ರಿತವಾಗಿರುವುದನ್ನು ಕಾಣಬಹುದು. ಅನ್ಯಾಯ, ಅಕ್ರಮ, ಅನೈತಿಕ ಚಟುವಟಿಕೆಗಳು ಮುಂತಾದ ಪರಿಸರದಲ್ಲಿ ಬೆಳೆದಂತಹ ಈ ಪಾತ್ರವು ಅಂತಹ ಸಂಬಂಧಗಳಿಗೆ ಒಳಗಾಗುವಂತೆ ಮಾಡಲು ಎಷ್ಟೇ ಪ್ರಯತ್ನಿಸಿದರೂ ಇಡೀ ಸಮಾಜದ ವಿರುದ್ಧ ಪ್ರತಿಭಟನೆ ಮಾಡಿ ಇದರಿಂದ ತಪ್ಪಿಸಿಕೊಳ್ಳಲು ನಾನು ಯಂಕಯ್ಯನ ಸೂಳೆಯೆಂದು ಮೇಲ್ನೋಟಕ್ಕೆ ಹೇಳಿಕೊಳ್ಳುವುದು ಕಂಡುಬರುತ್ತದೆ. ಈ ಮಹಿಳಾ ಪಾತ್ರವು ನೇರ ದಿಟ್ಟ ಪಾತ್ರವಾಗಿ ಕಂಡುಬಂದು ಪ್ರತಿಯೊಬ್ಬ ಮಹಿಳೆಯರಿಗೆ ಆದರ್ಶ ಪ್ರಾಯವಾಗುವಂತೆ ಚಿತ್ರಿಸಿರುವುದು ನೀರಮಾನ್ವಿಯವರ ಕಥನದ ಶೈಲಿಯಾಗಿದೆ.

'ಎಂಥಾ ಮೋಜಿನ ಕುದುರೆ' ಕತೆಯಲ್ಲಿ ರಾಧಾ ಪಾತ್ರವು ತನ್ನ ಗಂಡನಿಂದ ಮಕ್ಕಳಾಗುವುದಿಲ್ಲ ವೆಂಬುದನ್ನು ಅರಿತು ಅನ್ಯ ಮಾರ್ಗವನ್ನು ಹಿಡಿದು ಮಗುವನ್ನು ಪಡೆಯುತ್ತಾಳೆ. ಇದನ್ನು ತನ್ನ ಗಂಡ ಪ್ರಶ್ನಿಸಿದಾಗ ಬೇಕಾದ್ದನ್ನು ಪಡೆಯುವ ಅಧಿಕಾರ ನನಗೂ ಇದೆ ಎಂಬಂತಹ ದೌರ್ಜನ್ಯದ ಮಹಿಳೆಯಾಗಿ ಕಂಡುಬರುತ್ತಾಳೆ.

ಬಿಂದಿಯಾ ತಮಂಧ ಕಿರಿದೆನ್ನಬಹುದೇ ಅಯ್ಯಾ ಕತೆಯಲ್ಲಿ ಬರುವಂತಹ ಪಾತ್ರವಾಗಿದೆ. ಬಿಂದಿಯಾ ಅರ್ಜುನನ ಹೆಂಡತಿ ತನ್ನ ಗಂಡನಿಗೆ ಮಕ್ಕಳಾಗುವುದಿಲ್ಲ ಎಂಬುದನ್ನು ತಿಳಿದಿದ್ದರೂ ಕೂಡಾ ಮಕ್ಕಳನ್ನು ಪಡೆಯುವ ಆಸೆಯಿಂದ ತೀರ್ಥಯಾತ್ರೆಗೆ ಬರುವುದು, ಅಲ್ಲಿ ಮಳೆಗಾಲದ ಒಂದು ದಿನ ಕಥಾನಾಯಕನನ್ನು ಆಕಸ್ಮಿಕವಾಗಿ ಸೇರುವಂತಹ ಪಾತ್ರವಾಗಿ ಚಿತ್ರಿತಳಾಗಿದ್ದಾಳೆ.

"ಕರ್ಪೂರದ ಕಾಯದಲ್ಲಿ ಬೆಂಕಿಯುಸಿರಾಟ" ಕತೆಯಲ್ಲಿ ಬರುವಂತಹ ಮಾದೇವಿ ಪಾತ್ರವು ಫಕೀರಪ್ಪನ ಮಗಳಾಗಿದ್ದಳು. ಎರಡೆಕರೆ ಹೊಲದಲ್ಲಿ ಬಂದ ಉತ್ಪನ್ನ ಜೀವನ ನಿರ್ವಹಣೆಗೆ ಸಾಲದೆ

ಕೂಲಿ ಮಾಡಿ ಜೀವನವನ್ನು ಸಾಗಿಸುತ್ತಿದ್ದಳು. ಇಪ್ಪತ್ತು ವರ್ಷವಯಸ್ಸಾಗಿದ್ದ ಮಾದೇವಿ ಸುಂದರಳಾಗಿದ್ದಳು, ಕೆಲಕಿಡಿಗೇಡಿಗಳು ಇವಳನ್ನು ಹೊತ್ತುಕೊಂಡು ಹೋದಾಗ ಮಾರುತಿ ಒಬ್ಬನೇ ಹೋಗಿ ಬಿಡಿಸಿಕೊಂಡು ಬಂದು ಅವಳನ್ನೇ ಮದುವೆಯಾಗಿದ್ದನು. ಈ ಕತೆಯಲ್ಲಿ ಹೆಣ್ಣಿನ ಅಸಹಾಯಕತೆಯನ್ನು ತಿಳಿಸುವುದರ ಮೂಲಕ ಭೋಗದ ವಸ್ತುವಾಗಿ ಯಾವ ರೀತಿಯದಾಗಿ ಬಳಕೆಗೊಂಡಿದ್ದಾಳೆ ಎಂಬುದನ್ನು ತಿಳಿಯಬಹುದು.

ರಾಜಶೇಖರ ನೀರಮಾನ್ವಿಯವರು ತಮ್ಮ ಮೊದಲನೆಯ ಕಥಾಸಂಕಲನ ಹಂಗಿನರಮನೆಯ ಹೊರಗೆ ಕತೆಗಳಲ್ಲಿ ಕಂಡುಬರುವಂತಹ ಮಹಿಳಾ ಲೋಕಕ್ಕೂ ಕರ್ಪೂರದ ಕಾಯದಲ್ಲಿ ಕಂಡು ಬರುವಂತಹ ಮಹಿಳೆಯರ ಪಾತ್ರ ಚಿತ್ರಣದಲ್ಲಿ ವಿಶಿಷ್ಟತೆಯನ್ನು ತೋರಿಸಿದ್ದಾರೆ. ಇವರ ಕತೆಗಳಲ್ಲಿ ಎಲ್ಲಾ ತರಹದ ಮಹಿಳೆಯರ ಸೂಕ್ಷ್ಮಪರಿಚಯವನ್ನು ಕಾಣುವುದರ ಜೊತೆಗೆ ಮಹಿಳಾಲೋಕವೆಂಬ ಹೊಸದಾದ ಅದ್ಭುತ ಲೋಕವನ್ನು ಚಿತ್ರಿಸಿದ ಅತ್ಯುತ್ತಮ ಕತೆಗಾರರಾಗಿ ಹೊರಹೊಮ್ಮಿದ್ದಾರೆ.

೪.೫. ನಂಬಿಕೆಗಳು, ಸಂಪ್ರದಾಯಗಳು, ಆಚರಣೆಗಳು

ಮಾನವ ಸಮಾಜ ಜೀವಿ, ಸಮಾಜದಲ್ಲಿಯೇ ಹುಟ್ಟಿ, ಬೆಳೆದು, ಸಮಾಜದಲ್ಲಿಯೇ ತನ್ನ ವಿಕಾಸವನ್ನು ಕಂಡುಕೊಳ್ಳುತ್ತಾನೆ. ಹೀಗೆ ಕ್ರಮೇಣವಾಗಿ ಸಾಗುತ್ತಾ ತನ್ನ ಜೀವನವನ್ನು ರೂಪಿಸಿಕೊಳ್ಳುತ್ತಾ ಸಾಗಿದ್ದಾನೆ. ಇಂತಹ ಸಮಯದಲ್ಲಿ ನಂಬಿಕೆ, ಆಚರಣೆ, ಸಂಪ್ರದಾಯಗಳಲ್ಲಿ ನಂಬಿಕೆಯುಳ್ಳವನಾದುದರಿಂದ ಅವು ಮನುಷ್ಯನ ಜೀವನದಲ್ಲಿ ಹಾಸುಹೊಕ್ಕಾಗಿರುವುದನ್ನು ಕಾಣಬಹುದು. ಅಲ್ಲದೇ ಸಮಾಜದ ಎಲ್ಲಾ ಸ್ತರಗಳಲ್ಲೂ ಅಸ್ತಿತ್ವದಲ್ಲಿವೆ ಮಾನವನು ಸಮಾಜಕ್ಕೆ ಅದರ ಕಟ್ಟುಕಟ್ಟಳೆಗಳಿಗೆ ಬದ್ಧನಾಗಿ ನಡೆದುಕೊಳ್ಳುವುದರಿಂದ ಇವುಗಳಿಂದ ಹೊರತಾಗಿರಲು ಸಾಧ್ಯವಿಲ್ಲ. ಇಂತಹ ನಂಬಿಕೆಗಳು ಆಚರಣೆಗಳು, ಬಹುತೇಕವಾಗಿ ಪ್ರಕೃತಿಯಲ್ಲಿ ಕಂಡುಬರುವುದರಿಂದ ಮಾನವ ಆಚರಣೆಯಲ್ಲಿ ಉಳಿಸಿಕೊಂಡು ಬಂದಿದ್ದಾನೆ. ಹೀಗೆ ನಂಬಿಕೆಗಳು, ಆಚರಣೆಗಳು, ವ್ಯಕ್ತಿಯಿಂದ ವ್ಯಕ್ತಿಗೆ, ಕಾಲದಿಂದ ಕಾಲಕ್ಕೆ ನಿರಂತರವಾಗಿ ಸಾಗಿಕೊಂಡು ಬಂದಿರುವುದನ್ನು ಕಾಣಬಹುದು. ಮಾನವನ ಜೀವನದಲ್ಲಿ ಹಾಸುಹೊಕ್ಕಾಗಿರುವಂತಹ ನಂಬಿಕೆಗಳು, ಆಚರಣೆಗಳು, ಒಂದು ಸಾಹಿತ್ಯ ಕೃತಿ ಅಥವಾ ಕತೆಗಳಲ್ಲಿಯು ಪ್ರತಿಬಿಂಬಿತವಾಗಿರುವುದನ್ನು ಗುರುತಿಸಬಹುದು. ಅದೇ ರೀತಿಯಾಗಿ ರಾಜಶೇಖರ ನೀರಮಾನ್ವಿಯವರು ಕನ್ನಡ ಕಥಾ ಲೋಕಕ್ಕೆ ತಮ್ಮದೇ ಆದ ಕಥಾ ಸಂಕಲನಗಳನ್ನು ಕೊಡುಗೆಯಾಗಿ ನೀಡಿರುವುದರಿಂದ, ಅವರ ಕತೆಗಳಲ್ಲಿಯು ಕೂಡಾ, ಮನುಷ್ಯನ ಜೀವನದಲ್ಲಿ ಹರಡಿಕೊಂಡಿರುವಂತಹ ಇಂತಹ ಅಂಶಗಳನ್ನು ತಂದು, ಸಾಂಪ್ರಾದಾಯಿಕ ಸಮಾಜವನ್ನು ಪರಿಚಯ ಮಾಡಿಕೊಡಲು ಪ್ರಯತ್ನಿಸಿದ್ದಾರೆ.

ರಾಜಶೇಖರ ನೀರಮಾನ್ವಿಯವರ ಮೊದಲನೆಯ ಕಥಾಸಂಕಲನ ಹಂಗಿನರಮನೆಯ ಹೊರಗೆ ವೃತ್ತ ಕತೆಯಲ್ಲಿ ಸಂಪ್ರದಾಯಗಳ ಸೂಕ್ಷ್ಮ ಪರಿಚಯವನ್ನು ಶಂಕ್ರಪ್ಪಗೌಡ ಎಂಬ ಪಾತ್ರದ ಮೂಲಕ ಪರಿಚಯ ಮಾಡಿಕೊಡಲಾಗಿದೆ. "ತಾತ ನೀರುಕಾದಾವ ಮೈತೊಳೆದುಕೊಳ್ಳೋಕ ಬಾ ಎಂದು ಹುಡುಗ ಕರೆಯುತ್ತಾನೆ.

[illegible]

ಬಂದೆ ಪೂಜೆಗೆ ಸಜ್ಜುಮಾಡು ಎಂದು ಅವುಗಳನ್ನು ಸ್ವಚ್ಛಗೊಳಿಸಿ ಓರಣವಾಗಿ ಜೋಡಿಸಿಟ್ಟು ಸ್ನಾನಕ್ಕಿಳಿದರು[೭] ನಮ್ಮ ಭಾರತೀಯ ಸಂಪ್ರದಾಯದಲ್ಲಿ ಸ್ನಾನಮಾಡಿದ ಮೇಲೆ ಪೂಜೆ ಮಾಡುವುದು ಒಂದು ನಂಬಿಕೆಯಾಗಿದೆ. ಅದೇ ರೀತಿಯದಾಗಿ ಶಂಕರಪ್ಪಗೌಡರು ಸ್ನಾನ ಮುಗಿಸಿ ಪೂಜೆಗೆ ಕುಳಿತುಕೊಂಡರು, "ಊದು ಬತ್ತಿಯನ್ನು ಹಚ್ಚುವುದು. ಲಿಂಗದ ಕಾಯಿಯನ್ನು ತೊಳೆಯುವದು ಲಿಂಗಕ್ಕೆ ನೀರು ಹಾಕುವದು, ಬಟ್ಟೆಯನ್ನು ಹಿಂಡಿ ತೊಡೆಯ ಮೇಲೆ ಒಣಗಿಸಲು ಹಾಕಿಕೊಂಡರು. ವಿಭೂತಿಯನ್ನು ಹಚ್ಚಿಕೊಂಡು ಮಂತ್ರ ಪಠಣೆಯಲ್ಲಿ ಓಂನಮಃ ಶಿವಾಯಃ"[೮] ಎಂದು ಹೇಳುವುದು ಇದು ಒಂದು ಸಂಪ್ರದಾಯವಾಗಿದೆ. ಇಂತಹ ಅಂಶಗಳನ್ನು ಈ ಕತೆಯಲ್ಲಿ ಕಾಣಬಹುದು.

ಭಾರತೀಯ ಸಮಾಜದ ಒಳಗಡೆ ಅಂತರ್ಗತವಾಗಿರುವಂತಹ ದೈವತ್ವ, ನಂಬಿಕೆಗಳು, ಆಚರಣೆಗಳು, ದೇವರು, ಧರ್ಮ, ರೀತಿ ನೀತಿಗಳು ಭೂತ ಕತೆಯ ಉದ್ದಗಲಕ್ಕೂ ಬಂದಿರುವುದನ್ನು ಕಾಣಬಹುದು. ಈ ಕತೆಯ ನಾಯಕ ರಮೇಶ ವಿದ್ಯಾವಂತ. "ಈತನ ವಂಶಜರು ಧರ್ಮಾತ್ಮರು, ಪುಣ್ಯಾತ್ಮರು, ನಾಡಿನಾಗ ಇದ್ದ ಗುಡಿಗುಂಡಾರಗಳನ್ನೆಲ್ಲಾ ಕೆಡವಿ ಕಟ್ಟಿಸಿ ಪ್ರತೀ ದಿನವೂ ಅಲ್ಲಿ ಪೂಜೆ ನಡೆಯುವಂತೆ ಮಾಡುತ್ತಿದ್ದರು."[೯] ಇಂತಹ ಪುಣ್ಯದ ಕಾರ್ಯಗಳನ್ನು ಮಾಡುತ್ತಿದ್ದರಿಂದ ಅವರಿಗೆ ಯಾವುದೇ ರೀತಿಯ ಅನಾಹುತಗಳು ಸಂಭವಿಸುತ್ತಿರಲಿಲ್ಲವೆಂಬ ನಂಬಿಕೆ ಆಗಿನ ಕಾಲದ ಜನರಲ್ಲಿತ್ತು. ಅದೇ ರೀತಿಯದಾಗಿ ರಮೇಶನ ಕಾಲಕ್ಕೆ ಇಂತಹ ಕಾರ್ಯಗಳು ಕಡಿಮೆಯಾದುದರಿಂದ "ಈಗ ನಿಮ್ಮನ್ನ ಕಾಡಾಕ ಹತ್ತೈತಿ, ಗಾಳಿಕಾಟ ಬಹಳ ಆಗೈತಿ"[೧೦] ಅದಕ್ಕೆ ನೀವು ಶಾಂತಿ ಮಾಡಿಸಬೇಕೆಂದು ವಿಚಿತ್ರವೇಷದ ವ್ಯಕ್ತಿಯೊಬ್ಬ ಹೇಳುತ್ತಾನೆ ಈ ರೀತಿಯದಾಗಿ ನಂಬಿಕೆಗಳು, ಭ್ರಮೆಗಳು ಭೂತ ಕತೆಯಲ್ಲಿ ಕಂಡುಬರುತ್ತವೆ. ಮುಂದುವರೆದು ನನ್ನ ಹೆಂಡತಿ ಸತ್ತದ್ದು ಮೆದುಳು ರೋಗದಿಂದ, ಅವಳಿಗೆ ಔಷಧಿ ಕುಡಿಸಲು ಹೋದಾಗ ಕೈ ಕಾಲು ಗಟ್ಟಿಯಾಗಿ ಹಿಡಿದವನನ್ನು ಕಾಲಿನಿಂದ ಒದೆಯುವುದು, ನಾನು ಬೇಟೆಯಾಡಿ ಬಂದಾಗಿನಿಂದ ತನಗೂ ಗಾಳಿ ಬಡಿದುಕೊಂಡಿದೆ ಎಂದು ಜನ ತಿಳಿದಿದ್ದಾರೆ. ಆದರೆ ತನಗೆ ಬಡಿದುಕೊಂಡಿದ್ದು ವರ್ತಮಾನದವರ ಭೂತವೆಂದು ವಿದ್ಯಾವಂತ ರಮೇಶನು ಕೂಡಾ ಇಂತಹ ಪ್ರಸಂಗಗಳನ್ನು ನಂಬುವುದು ಕಂಡುಬರುತ್ತದೆ. ಆ ನಂತರ ಮನೆಯಲ್ಲಿ ಶಾಂತಿ ಮಾಡಿಸುವುದಕ್ಕಾಗಿ ಅಯ್ಯನೋರನ್ನು ಕರೆಸಲು ಪ್ರಯತ್ನಿಸುವುದು, ಈ ವಿಷಯ ತಿಳಿದು ಮನೆಯಲ್ಲಿ ದೆವ್ವಗಳ ಕಾಟ ಬಹಳ ಆಗೈತೆ ಎಂದು ಊರು ಬಿಟ್ಟು ಹೋಗಿದ್ದರು. ಶಾಂತಿಯನ್ನು ಮಾಡಿಸುವವರು ಕೂಡಾ ಇಂತಹ ಅಂಶಗಳಲ್ಲಿ ನಂಬಿಕೆಯನ್ನು ಹೊಂದಿರುವುದನ್ನು ಕಾಣುತ್ತೇವೆ. ಕೊನೆಗೆ ರಮೇಶನಿಗೆ ಅಂಟಿಕೊಂಡಿದ್ದಂತಹ ದೆವ್ವವನ್ನು ಬಿಡಿಸಲು ಆಯನೂರಿಗೆ ಹೋಗಲು ಹೇಳಿದಾಗ ರಮೇಶನು ಬೇಡವೆಂದು ಹೇಳುತ್ತಾನೆ. ಆಗ ಸಿದ್ಧಪ್ಪ ನಿನ್ನ ಮೈಯಲ್ಲಿ ಇರುವಂತಹ ದೆವ್ವವು ಇಂತಹ ಮಾತನ್ನು ಆಡಿಸುತ್ತದೆ ಎಂದು ಸಿದ್ಧಪ್ಪ ಬೇಡಿಕೊಂಡಾಗ ಸಿದ್ಧಪ್ಪನ ಮಾತಿಗೆ ಒಪ್ಪಿಬರುತ್ತಾನೆ.

"ಕಂಬಕ್ಕೆ ಬಿಗಿದು ಬಾರುಕೋಲಿನಿಂದ ಹೊಡೆಯುವುದು, ಕೂದಲನ್ನು ಕಿತ್ತುಕೊಳ್ಳುವುದು, ಹೆಂಗಸರನ್ನು ಚಾವಡಿಯತ್ತ ಎಳೆದುಕೊಂಡು ಬರುವುದು, ಎಲ್ಲೆಲ್ಲೂ ಕುಡಿದು ತೂರಾಡುತ್ತಿರುವ ಜನಸಮೂಹ, ವಿಶಾಲವಾದ ಹಲಾಯಿಕುಣಿ, ಯಾಹುಸೇನ್ ಬಾಹುಸೇನ್ ಧೂಲ್ಕ ಎಂದು ಸುತ್ತುಹಾಕುವಂತಹ ಆಚರಣೆಗಳು ಈ ಕತೆಯಲ್ಲಿ ಕಂಡುಬರುತ್ತವೆ."[xxx]

"ತಮಂಧ ಕಿರಿದೆನ್ನಬಹುದೇ ಅಯ್ಯಾ" ಈ ಕತೆಯು ಪ್ರವಾಸ ಕತೆಯಾಗಿದೆ ಪ್ರವಾಸಕ್ಕೆ ಹೋಗುವಂತಹ ಸಮಯದಲ್ಲಿ ಪ್ರಯಾಣವು ಸುಖಕರವಾಗಿರಲೆಂದು ಪ್ರಾರ್ಥನೆಯನ್ನು ಮಾಡುತ್ತೇವೆ. ಇಂತಹ ಸಂಪ್ರದಾಯಗಳು, ನಂಬಿಕೆಗಳು ಇನ್ನೂ ನಮ್ಮಲ್ಲಿ ಜೀವಂತವಾಗಿವೆ. ಅದೇ ರೀತಿಯದಾಗಿ ಇಲ್ಲಿ ಎಲ್ಲಾರು ಬಸ್ಸಿನ ಮಧ್ಯ ನಿಂತು ಸಂಸ್ಕೃತ ಶ್ಲೋಕಗಳನ್ನು ಹಾಡಿ ದೇವರಲ್ಲಿ ಮೊರೆಯಿಡುವಂತಹ ಅಂಶಗಳು ಕಂಡು ಬರುತ್ತವೆ.

"ಬೆತ್ತಲೆಸ್ವಾಮಿ" ಕತೆಯಲ್ಲಿ ಆಚರಣೆಗಳು, ನಂಬಿಕೆಗಳು ಯಾವ ತೆರನಾಗಿ ಕಂಡುಬರುತ್ತವೆ ಎಂಬುದನ್ನು ರಾಜಶೇಖರ ನೀರಮಾನ್ವಿಯವರು ಸಮರ್ಥವಾಗಿ ಕಟ್ಟಿಕೊಟ್ಟಿದ್ದಾರೆ.

"ಒಂದು ವರ್ಷ ದೊಡ್ಡ ಬರಗಾಲ ಬಂತು, ಮಳೆಗಾಲ ಮುಗಿಯುತ್ತಾ ಬಂದರೂ ಮೋಡಗಳ ಸುಳಿವೇ ಇಲ್ಲ. ಬಿತ್ತಿದ ಬೀಜ ಮೊಳಕೆಯೊಡೆಯಲಿಲ್ಲ ಕೆರೆ ಬಾವಿಗಳು ಒಣಗ ಹತ್ತಿದಾಗ ಊರಿನ ಜನರೆಲ್ಲಾರು ಸೇರಿ ಬೆಟ್ಟದ ಮೇಲಿರುವ ಮಳೆ ಮಲ್ಲೇಶಪ್ಪನ ಗುಡಿಯಲ್ಲಿ ಮಳೆಗಾಗಿ ಸಪ್ತ ಭಜನೆ ಮಾಡುವುದು"[xxxi] ಇಂತಹ ಆಚರಣೆಗಳು ನೀರಮಾನ್ವಿಯವರ ಕತೆಗಳಲ್ಲಿ ವಿಶೇಷವಾಗಿ ಕಂಡುಬರುತ್ತವೆ.

"ಮಳೆಗಾಗಿ ಸಪ್ತಭಜನೆ ಮಾಡಿದರೂ ಕೂಡಾ ಮಳೆಯ ಸುಳಿವು ಕಂಡುಬರಲಿಲ್ಲ ಶನಿವಾರದ ದಿನದಂದು ಹನುಮಂತನ ಗುಡಿಯೊಳಗೆ ಕಲ್ಲುಗಳು ಬೀಳಲಾರಂಭಿಸಿದಾಗ ಜನಗಳು ಅವುಗಳಿಂದ ತಪ್ಪಿಸಿಕೊಳ್ಳಲು ಪರಾರಿಯಾಗುವುದು. ಬೆಟ್ಟವಿಳಿದು ತಮ್ಮ ಮನೆಗೆ ಹೋಗುವಷ್ಟರಲ್ಲಿ ಜಡಿ ಮಳೆ ಪ್ರಾರಂಭವಾಗುವುದು ಇದೆಲ್ಲ ಬೆತ್ತಲೆಸ್ವಾಮಿಯ ದಯೆಯಿಂದ ಎಂದು ಸಂಪ್ರದಾಯಗಳಲ್ಲಿ ನಂಬಿಕೆಯನ್ನು ಇಟ್ಟಿರುವಂತಹ ಅಂಶಗಳನ್ನು ಕಾಣುತ್ತೇವೆ.

ಬೆತ್ತಲೆಸ್ವಾಮಿಗೆ ಪ್ರತೀ ದಿನವೂ ಪೂಜೆ ಪುನಸ್ಕಾರಗಳು, ಊದಿನ ಕಡ್ಡಿ, ಲೋಭಾನ, ಸುಗಂಧದ್ರವ್ಯಗಳನ್ನು ಹಚ್ಚುವುದು, ಭಜನೆಯ ಹಾಡುಗಳನ್ನು ಹಾಡುವುದು, ಇಂತಹ ಆಚರಣೆಗಳನ್ನು ಕೂಡಾ ಗುರುತಿಸಬಹುದು. ಬೆತ್ತಲೆಸ್ವಾಮಿಯ ಮಕ್ಕಳಾಗದವರಿಗೆ ಮಕ್ಕಳ ಸಂತಾನಕೊಡುತ್ತಾನೆ, ಒಡೆದ ಸಂಸಾರವನ್ನು ಒಂದು ಗೂಡಿಸುವವ, ಚುನಾವಣೆಯಲ್ಲಿ ಗೆಲ್ಲಿಸುವ ಪವಾಡದ ವ್ಯಕ್ತಿಯಾಗಿ ಚಿತ್ರಿತನಾಗಿದ್ದಾನೆ. ನೀರಮಾನ್ವಿಯವರು ಈ ಕತೆಯಲ್ಲಿ ನಂಬಿಕೆಗಳು, ಆಚರಣೆಗಳು, ಸಂಪ್ರದಾಯಗಳು ಈ ಮೂರು ಅಂಶಗಳನ್ನು ಒಟ್ಟಿಗೆ ತಂದಿರುವುದು ಇವರ ಕೌಶಲ್ಯವನ್ನು ತಿಳಿಸುತ್ತದೆ.

ನಂಬಿಕೆಗಳು, ಆಚರಣೆಗಳು ಭಾರತೀಯ ಸಂಪ್ರದಾಯದಲ್ಲಿ ಪ್ರಾಚೀನ ಕಾಲದಿಂದ ಹಿಡಿದು ಇಂದಿನವರೆಗೂ ಜನರ ಜೀವನದ ಭಾಗವಾಗಿವೆ ಎಂಬುದನ್ನು ತಮ್ಮ ಕತೆಗಳಲ್ಲಿ ಹಿಡಿದಿಡುವುದರ ಮೂಲಕ ಅದರ ಸೂಕ್ಷ್ಮ ಪರಿಚಯ ಮಾಡಿಕೊಟ್ಟಿರುವುದನ್ನು ಗಮನಿಸಬಹುದು.

೪.೬ ದಲಿತ ಲೋಕ:

ಸಾಹಿತ್ಯವು ನಿಂತ ನೀರಲ್ಲ ಅದುಸದಾ ಹರಿಯುವ ನೀರಿನಂತೆ ಪರಿವರ್ತನೆಯೇ ಅದರ ಪ್ರಮುಖ ಲಕ್ಷಣ. ಹೀಗೆ ವಿವಿಧ ಕಾಲ ಘಟ್ಟಗಳಲ್ಲಿ ಬೆಳೆಯುತ್ತಾ ಬಂದಿರುವುದನ್ನು ಗಮನಿಸಬಹುದು. ಅದರಲ್ಲಿ ಹೊಸಗನ್ನಡ ಸಾಹಿತ್ಯ ಘಟ್ಟವೂ ಒಂದಾಗಿದೆ. ಈ ಹೊಸಗನ್ನಡ ಸಾಹಿತ್ಯವೂ ನವೋದಯ, ಪ್ರಗತಿಶೀಲ, ನವ್ಯ ಹಾಗೂ ದಲಿತ ಬಂಡಾಯ ಎಂಬ ನಾಲ್ಕು ಕಾಲಘಟ್ಟಗಳಲ್ಲಿ ಬೆಳೆಯುತ್ತಾ ಬಂದಿದ್ದು, ಪ್ರತಿಯೊಂದು ಘಟ್ಟದ ಕತೆ, ಕಾದಂಬರಿ, ಕವನ ಈ ಮುಂತಾದ ಪ್ರಕಾರಗಳಲ್ಲಿ ದಲಿತರ ನೋವು, ನಲಿವುಗಳನ್ನು ಚಿತ್ರಿಸಿದ್ದರೂ ಕೂಡಾ ಅದು ಅಷ್ಟೊಂದು ಸಮರ್ಪಕವಾಗಿ ಕಂಡುಬಂದಿಲ್ಲ. ಹೀಗಾಗಿ ದಲಿತ ಬಂಡಾಯ ಸಂದರ್ಭದಲ್ಲಿ ಸಿದ್ಧಲಿಂಗಯ್ಯ, ಅರವಿಂದ ಮಾಲಗತ್ತಿ, ಕುಂ.ವೀ. ಬಿ.ಟಿ. ಲಲಿತಾನಾಯಕ್,ಚೆನ್ನಣ್ಣವಾಲೀಕಾರ,ದೇವನೂರು ಮಹಾದೇವ ರಂತಹವರು ದಲಿತರಾಗಿದ್ದರಿಂದ ದಲಿತರನೋವು, ಅವಮಾನ, ಶೋಷಣೆ, ದಬ್ಬಾಳಿಕೆ ಈ ಮುಂತಾದವುಗಳನ್ನು ಅನುಭವಿಸಿದ್ದರು. ಆದ್ದರಿಂದ ತಮ್ಮದೇ ಆದ ಕತೆ, ಕವನ, ಕಾದಂಬರಿ ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ ಹಿಡಿದಿಡುವ ಪ್ರಯತ್ನ ಮಾಡಿ ಯಶಸ್ವಿಯಾದರು. ಹೀಗೆ ಕನ್ನಡದ ಕತೆ, ಕಾದಂಬರಿಗಳಲ್ಲಿ ಚಿತ್ರಿತಗೊಂಡಿರುವ ದಲಿತಲೋಕ ಕನ್ನಡದ ಕಥನಕಾರರು ತಮ್ಮ ಕಥನಗಳ ಮೂಲಕ ದಲಿತರ ನೋವು ಮತ್ತು ನಲಿವುಗಳಿಗೆ ಹೇಗೆ ಸ್ಪಂದಿಸಿದ್ದಾರೆ ಎಂದು ತಿಳಿದು ಕೊಳ್ಳುವುದೇ ದಲಿತ ಲೋಕವಾಗಿದೆ. ಇದಕ್ಕಿಂತ ಮುಂಚೆ ದಲಿತರು ಅಂದರೆ ಯಾರು? ಅವರ ಸಂವೇದನೆ ಏನು? ಈ ಮುಂತಾದ ಅರ್ಥಗಳನ್ನು ತಿಳಿಯುವುದು ಅವಶ್ಯಕವಾಗಿದೆ.

ದಲಿತ ಎನ್ನುವ ಪದದ ಅರ್ಥ ದಳ, ಗುಂಪು, ಸೈನ್ಯ, ಶೋಷಿತ ಎನ್ನುವ ಅರ್ಥಗಳು ಶಬ್ದಕೋಶದಲ್ಲಿ ಕಂಡು ಬರುತ್ತವೆ. ದಲಿತರು ಎಂದರೆ ಶೋಷಿತರು, ಅಸ್ಪೃಶ್ಯರು, ಆದಿವಾಸಿಗಳು, ಕೆಳಜಾತಿಯವರು, ಅಧಿಕಾರಹೀನರು, ಹೀನವಾದ ಉದ್ಯೋಗ ಮಾಡುವವರು ಇನ್ನೂ ಮುಂತಾದ ಅರ್ಥಗಳಲ್ಲಿ ಅರ್ಥೈಸಲಾಗುತ್ತದೆ. ಒಟ್ಟಾರೆಯಾಗಿ ದಲಿತರು ಎಂದರೆ ಅಸ್ಪೃಶ್ಯರು, ಹರಿಜನರು, ಹಿಂದುಳಿದವರು ಮಾತ್ರವಾಗಿರದೇ ಸಮಾಜದಲ್ಲಿ ಸಾಂಸ್ಕೃತಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ ಯಾರು ಧಮನಕ್ಕೆ ಒಳಗಾಗಿರುತ್ತಾರೋ ಅವರೆಲ್ಲಾರನ್ನು ದಲಿತರು ಎಂದು ಕರೆಯುತ್ತಾರೆ. ಹೈದ್ರಬಾದ್ ಕರ್ನಾಟಕದ ಸಮರ್ಥ ಕತೆಗಾರರಾದಂತಹ ರಾಜಶೇಖರ ನೀರಮಾನ್ವಿಯವರು ಆ ಭಾಗದಲ್ಲಿ ದಲಿತರನ್ನು ಯಾವ ರೀತಿ ಶೋಷಣೆ ಮಾಡಲಾಗುತ್ತಿದೆ ಅವರ ಸ್ಥಾನಮಾನಗಳೇನು ಈ ಮುಂತಾದ ಅಂಶಗಳನ್ನು ತಮ್ಮ ಕತೆಗಳಲ್ಲಿ ತಂದು "ದಲಿತ ಲೋಕದ" ಸೂಕ್ಷ್ಮ ಪರಿಚಯ ಮಾಡಿಕೊಟ್ಟಿರುವುದನ್ನು ನಾವು ಗುರುತಿಸಬಹುದು.

"ವೃತ್" ಕತೆಯು ರಾಯಚೂರಿನ ಗ್ರಾಮೀಣ ಪರಿಸರದ ಕತೆಯಾಗಿರುವದರಿಂದ ಶಂಕರಪ್ಪ ಗೌಡನ ವ್ಯಕ್ತಿ ಪ್ರಜ್ಞೆಯಲ್ಲಿಯೇ ಬಿಚ್ಚಿಕೊಳ್ಳುತ್ತಾ ಹಳ್ಳಿಯ ಜೀವನದ ಸ್ವರೂಪ ಯಾವ ರೀತಿ ಇರುತ್ತದೆ. ಎಂಬುದನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುವುದರ ಮೂಲಕ ದಲಿತ ಲೋಕದ ಪರಿಚಯ ಮಾಡಿಕೊಟ್ಟಿರುವುದನ್ನು ನಾವು ಗಮನಿಸಬಹುದು.

ಗೌಡರ ಮನೆಯಲ್ಲಿ ಜೀತದಾಳುಗಳಾಗಿ ದುಡಿಯುವಂತಹ ದಲಿತರು ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಆರ್ಥಿಕವಾಗಿ ಶೋಷಣೆಗೆ ಒಳಗಾಗಿ ತಮ್ಮ ಸ್ವತಂತ್ರ್ಯವನ್ನು ಕಳೆದುಕೊಂಡು ಹೇಗೆ ದಾಸ್ಯತ್ವದ ಜೀವನ ನಡೆಸುತ್ತಿದ್ದರು ಎಂಬುದನ್ನು ಇವರ ಕತೆಗಳಿಂದ ತಿಳಿಯಬಹುದು. ಕತೆಯ ಆರಂಭದಲ್ಲಿ ನಾಯಿಯು ಚಿರತೆಯ ಬಾಯಿಯಿಂದ ತಪ್ಪಿಸಿಕೊಂಡು ಮನೆ ಹತ್ತಿರ ಬಂದು ಅರಚಾಡುತ್ತಿರುತ್ತದೆ. ಇದನ್ನು ಕಂಡಂತಹ ಗೌಡರು ಅಂಗಳದಲ್ಲಿ ಮಲಗಿದ್ದಂತಹ ಆಳಿನ ಹತ್ತಿರ ಹೋಗಿ "ಲೇಯಂಕಾ" ಎಂದು ಗಟ್ಟಿಧ್ವನಿಯಲ್ಲಿ ಕೂಗುವುದು ಕಂಡು ಬರುತ್ತದೆ. ಇಲ್ಲಿ ಈ ಮಾತಿನಿಂದ ತಿಳಿಯುವುದೇನೆಂದರೆ ಮಾತನಾಡಿಸುವಾಗಲೂ ಕೂಡಾ ಮರ್ಯಾದೆಯನ್ನು ನೀಡದೇ, ಲೇ ಎಂದು ಸಂಭೋಧಿಸುತ್ತಿರುವುದು ಒಂದು ದೌರ್ಜನ್ಯದ ದಬ್ಬಾಳಿಕೆಯ ಸಂಕೇತವಾಗಿದೆ. ಇಂತಹ ಅಂಶಗಳನ್ನು ಈ ಕತೆಯ ಆರಂಭದಲ್ಲಿಯೇ ಕಾಣುತ್ತೇವೆ. ಹೀಗೆ ಗಟ್ಟಿಧ್ವನಿಯಲ್ಲಿ ಕೂಗಿದಂತಹ ಗೌಡರ ಮಾತುಗಳನ್ನು ಕೇಳಿ ಒಮ್ಮೆಗೆ ಗಡಬಡಿಸಿ ಎದ್ದೇಳುವುದು, ನಂತರ ಆ ನಾಯಿಯನ್ನು ಅಂಗಳಕ್ಕೆ ಹೊತ್ತುಕೊಂಡು ಬರುವುದು ಕಂಡುಬರುತ್ತದೆ. ಇದರಿಂದ ಆ ಭಾಗದಲ್ಲಿ ಇನ್ನೂ ದಲಿತರ ಮೇಲಿನ ಶೋಷಣೆ ಆಚರಣೆಯಲ್ಲಿವೆ ಎಂಬಂತಹ ಅಂಶ ತಿಳಿದು ಬರುತ್ತದೆ. ಯಂಕಾ ಮತ್ತು ರಂಗ ಇಬ್ಬರೂ ಸೇರಿ ಆ ಸತ್ತಂತಹ ನಾಯಿಯನ್ನು ಹೊತ್ತುಕೊಂಡು ಹೋಗಿ ಉಳುತ್ತಾರೆ. ಸತ್ತ ಮನುಷ್ಯರನ್ನು ಉಳುವುದು, ಸತ್ತ ಪ್ರಾಣಿಗಳ ಮಾಂಸವನ್ನು ತಿನ್ನುವುದು ಇಂತಹ ಹೀನವಾದ ಕೆಲಸಗಳನ್ನು ಮಾಡುವುದು ದಲಿತರ ಕೆಲಸವಾಗಿದೆ. ಎಂಬಂತಹ ಅಂಶ ತಿಳಿದು ಬರುವುದರ ಜೊತೆಗೆ ಆ ಭಾಗದಲ್ಲಿ ಇನ್ನೂ ದಲಿತ ಲೋಕದ ಆಚರಣೆ ಕಂಡು ಬರುತ್ತದೆ ಎಂಬುದನ್ನು ನೀರಮಾನ್ವಿಯವರು ತಮ್ಮ ಕತೆಯಲ್ಲಿ ಸಮರ್ಥವಾಗಿ ಕಟ್ಟಿಕೊಟ್ಟಿದ್ದಾರೆ.

ದಲಿತರು ಗೌಡರ ಮನೆಯನ್ನು ಹಸನು ಮಾಡುವುದು ಇವರ ಕೆಲಸವಾಗಿರದೇ, ಹೊಲಗದ್ದೆಗಳಲ್ಲಿ ದುಡಿಯುವಂತಹ ಕೆಲಸಗಾರರಾಗಿಯೂ ಕಂಡು ಬರುತ್ತಾರೆ. ಅವರ ಮನೆಯ ಎತ್ತುಗಳನ್ನು ಸಂಭಾಳಿಸುವುದು, ಅವುಗಳನ್ನು ಆರೈಕೆ ಮಾಡುವುದು, ಹೊಲಗಳಲ್ಲಿ ಗಳೇವು ಹೊಡೆಯುವುದು, ನೀರುಕಟ್ಟುವುದು, ಈ ಮುಂತಾದ ಕೆಲಸಗಳನ್ನು ಮಾಡುವವರು ದಲಿತರೇ ಎಂದು ಕತೆಗಳಿಂದ ತಿಳಿಯುತ್ತೇವೆ. ಕೇವಲ ಗಂಡಸರು ಮಾತ್ರ ಅವರ ಮನೆಯಲ್ಲಿ ದುಡಿಯುವದೊಂದೇ ಅಲ್ಲದೇ ದಲಿತ ಹೆಣ್ಣು ಮಕ್ಕಳು ಕೂಡಾ ಅವರ ಹೊಲಗಳಲ್ಲಿ ಕೆಲಸ ಮಾಡುವುದನ್ನು ಕಾಣುತ್ತೇವೆ. ಅಷ್ಟೇ ಅಲ್ಲದೇ ನಮ್ಮಂತಹ ಕೆಳಜಾತಿಯ ಹೆಂಗಸರ ಮೇಲೆ ಉನ್ನತ ಜಾತಿಯ ಗೌಡರ ದೃಷ್ಟಿ ಬಿದ್ದರೆ ಅದು ಸುದೈವ ಎಂದು ತಿಳಿಯುವಂತಹ ದಲಿತ ಮಹಿಳೆಯರು ಅವರಿಗೆ ಸೆರಗಾಸುವುದು, ಸುಖಕೊಡುವುದು, ಸೇವೆ ಮಾಡುವುದು, ನಮ್ಮ ಕೆಲಸವೇ

ಎಂದು ತಿಳಿಯುತ್ತಾರೆ. ಒಂದು ವೇಳೆ ಇದಕ್ಕೆ ಒಪ್ಪದಿದ್ದರೆ ಅಂತವರನ್ನು ಊರಿನಿಂದ ಉಚ್ಚಾಟನೆ ಮಾಡುವುದು, ಬಹಿಷ್ಕಾರ ಹಾಕುವುದು ಇಂತಹ ಸಂಪ್ರದಾಯಗಳು ಕಂಡು ಬರುತ್ತವೆ. ಇದಕ್ಕೆ ಉದಾಹರಣೆಯೆಂಬಂತೆ ಬ್ಯಾಡರ ಲಚುಮಿಯ ಪಾತ್ರವು ಇದಕ್ಕೆ ಹೊರತಾಗಿಲ್ಲ.ಇವಳ ರೂಪ ಸೌಂದರ್ಯಕ್ಕೆ ಮಾರುಹೋದಂತಹ ಗೌಡ ತನ್ನ ಭೋಗದ ವಸ್ತುವನ್ನಾಗಿ ಮಾಡಿಕೊಂಡಿದ್ದ ಎಂಬಂತಹ ಅಂಶ ಇಲ್ಲಿ ಕಂಡು ಬರುತ್ತದೆ. ಒಟ್ಟಾರೆಯಾಗಿ ವೃತ್ತ ಕತೆಯಲ್ಲಿ ನೀರಮಾನ್ವಿಯವರು ದಲಿತ ಲೋಕವನ್ನು ಚಿತ್ರಿಸಿ ಅವರು ಸಮಾಜದಲ್ಲಿ ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ತಮ್ಮ ಸ್ಥಾನವನ್ನು ಸ್ವಾತಂತ್ರ್ಯವನ್ನು ಕಳೆದುಕೊಂಡು ಗೌಡರ ಅಧೀನದಲ್ಲಿ ಬದುಕಿದ್ದರು ಎಂಬ ದಲಿತ ಲೋಕದ ಅಸಹಾಯಕತೆಯ ಚಿತ್ರಣವನ್ನು ಕಟ್ಟಿಕೊಟ್ಟಿರುವುದನ್ನು ನಾವು ಗಮನಿಸಬಹುದು.

ಭೂತ ಕತೆಯಲ್ಲಿಯೂ ಕೂಡಾ ದಲಿತ ಲೋಕದ ಚಿತ್ರಣವನ್ನು ಕಾಣಬಹುದು. ವೃತ್ತ ಕತೆಯಲ್ಲಿನ ದಲಿತರು ಕೇವಲ ಹೊಲಗಳಲ್ಲಿ, ಮನೆಯಲ್ಲಿ ಧೀನರಾಗಿ ಸೇವೆ ಮಾಡುವವರಂತೆ ಕಂಡು ಬಂದರೆ ಭೂತ ಕತೆಯಲ್ಲಿನ ದಲಿತರು ಅಮಾಯಕರು ಕಾಡು ಜನಗಳಂತೆ ಕಂಡು ಬರುತ್ತಾರೆ. ಇಲ್ಲಿ ಕಂಡು ಬರುವ ಒಂದು ಜನಾಂಗವೆಂದರೆ ಬೇಡ ಜನಾಂಗ ಈ ಕತೆಯ ಆರಂಭದಲ್ಲಿಯೇ ಬೇಟೆಯಾಡಿ ಹೊಡೆದುರುಳಿಸಿದ ಕಾಡು ಹಂದಿಯನ್ನು ಪಾಲು ಮಾಡಿಕೊಳ್ಳಲು ತಮ್ಮಲ್ಲಿಯೇ ಕಚ್ಚಾಡುವಂತಹ ವ್ಯಕ್ತಿಗಳಾಗಿ ಕಂಡು ಬರುತ್ತಾರೆ. ಈ ತರಹದ ಅಂಶಗಳನ್ನು ದಲಿತರಲ್ಲಿ ಕಾಣುತ್ತೇವೆ. ಮುಂದುವರೆದು ರಮೇಶನು ತನ್ನ ವಂಶಜರ ಇತಿಹಾಸವನ್ನು ತಿಳಿಯಲು ಹೋದಾಗ ತನ್ನ ಜೊತೆಗೆ ತನ್ನ ಆಳು ಸಿದ್ದಪ್ಪ ಕರುಣಿಕನನ್ನು ಕರೆದುಕೊಂಡು ಹೋಗುವುದು. ತನಗೆ ಇಷ್ಟವಿಲ್ಲದಿದ್ದರೂ ಕೂಡಾ ರಮೇಶ ಧಣಿಯ ಒತ್ತಾಯಕ್ಕೆ ಮಣಿದು ಅವನ ಜೊತೆಯಲ್ಲಿಯೇ ಪಂಜು ಹಿಡಿದು ಹೋಗುತ್ತಾನೆ.ಹೀಗೆ ಈ ಕತೆಯಲ್ಲಿ ಕರುಣಿಕ ಸಿದ್ದಪ್ಪ ದಲಿತ ಪಾತ್ರವಾಗಿ ಚಿತ್ರಿತವಾಗಿರುವುದನ್ನು ಕಾಣಬಹುದು.ರಮೇಶ ದಿವಾನಖಾನ ಮನೆಯ ಬಾಗಿಲು ತೆಗೆಯಲು ಹೋದಾಗ ಸಿದ್ದಪ್ಪ ಇದರಿಂದ ಆಗುವಂತಹ ಅನಾಹುತವನ್ನು ತಿಳಿಸಿದಾಗ ರಮೇಶನು ಸಿದ್ದಪ್ಪನ ಮೇಲೆ ತನ್ನದೇ ಆದ ಅಧಿಕಾರ ಚಲಾಯಿಸುವುದನ್ನು ಕಾಣುತ್ತೇವೆ. ಇಲ್ಲಿ ಧಣಿ ರಮೇಶನ ಆಜ್ಞೆಯನ್ನು ಮೀರಲಾಗದೇ ನಡುಗುತ್ತಿರುವ ಕೈಗಳಿಂದ ತನ್ನೆಲ್ಲಾ ಶಕ್ತಿಯನ್ನು ಉಪಯೋಗಿಸಿ ನೂಕಿದ ಮುದುಕ ಬಾಗಿಲು ತೆರೆಯಿತು, ತೆರೆದ ಬಾಗಿಲಿನೊಂದಿಗೆ ಮುದುಕ ಒಳಗೆ ಹೋಗುತ್ತಾನೆ ಇಲ್ಲಿ ಸಿದ್ದಪ್ಪ ಅಸಹಾಯಕ ಪಾತ್ರವಾಗಿ ದೌರ್ಜನ್ಯ, ಶೋಷಣೆಗಳಿಗೆ ಒಳಗಾಗಿರುವಂತಹ ದಲಿತ ಪಾತ್ರವಾಗಿ ಚಿತ್ರಿತವಾಗಿದೆ. ಬೂದಿಯನ್ನು ತೆಗೆದುಕೊಂಡು ಅವನ ಪಾದವನ್ನು ಉಜ್ಜುತ್ತಾ ಸೇವೆಯನ್ನು ಮಾಡುವುದು ಕಂಡು ಬರುತ್ತದೆ. ಇಲ್ಲಿ ಚಿತ್ರಿತವಾಗಿರುವ ಸಿದ್ದಪ್ಪ ಎನ್ನುವಂತಹ ದಲಿತ ಪಾತ್ರವು ರಮೇಶನ ಪ್ರತಿಯೊಂದು ಚಟುವಟಿಕೆಯಲ್ಲೂ ಕಂಡುಬರುತ್ತಾ ಆತನ ಯೋಗಕ್ಷೇಮವನ್ನು ಸದಾಕಾಲ ಯೋಚಿಸುತ್ತಾ, ತನಗೇನಾದರೂ ಚಿಂತೆ ಇಲ್ಲ ನಮ್ಮ ಧಣಿಗಳು ಚೆನ್ನಾಗಿರಬೇಕು ಎಂದು ಬಯಸುವಂತಹ ಈ ಪಾತ್ರವು ರಮೇಶನ ಹಿತವನ್ನು ಹೆಜ್ಜೆಹೆಜ್ಜೆಯಲ್ಲೂ ತನ್ನ ಆಸೆ ಆಕಾಂಕ್ಷೆಗಳನ್ನು ಬದಿಗೊತ್ತಿ ರಮೇಶನ ಹಿತವನ್ನು ಬಯಸುವ ಪಾತ್ರವಾಗಿ ಚಿತ್ರಣವಾಗಿದೆ.

ದುರಸ್ತಿ ಕತೆಯಲ್ಲಿ ಬರುವಂತಹ ತಿಮ್ಮನ ಪಾತ್ರವು ಸಹ ದಲಿತ ಪಾತ್ರವಾಗಿ ಚಿತ್ರಿತವಾಗಿರುವುದನ್ನು ಅದರ ಆಳ ಅಂತರ್ಯಕ್ಕೆ ಇಳಿದಾಗ ಕಂಡುಬರುವಂತಹ ಸಂಗತಿಯಾಗಿದೆ. ತಿಮ್ಮ ನಗರದಲ್ಲಿ ಸೈಕಲ್ ರಿಕ್ಷಾ ತುಳಿಯುತ್ತಲೇ ತನ್ನ ಜೀವನವನ್ನು ಸಾಗಿಸುತ್ತಿರುತ್ತಾನೆ. ಅನೈತಿಕ ಸಂಬಂಧದಿಂದ ಬದುಕುವ ಗಂಗಿಗೆ ಜೀವನವನ್ನು ಕೊಡಲು ಪ್ರಯತ್ನಿಸಿ ಅವಳಿಂದ ಮೋಸ ಹೋಗುತ್ತಾನೆ. ಅದೇ ರೀತಿಯಾಗಿ ತನ್ನ ತಂಗಿ ನಾಗಮ್ಮಳಿಗೆ ಒಳ್ಳೆ ಕಡೆ ಸಂಬಂಧವನ್ನು ನೋಡಿ ಮದುವೆ ಮಾಡಿಸಿಕೊಡಬೇಕೆಂಬ ಆಸೆಯನ್ನು ಇಟ್ಟುಕೊಂಡಿದ್ದಂತಹ ತಿಮ್ಮನ ಕನಸಿಗೆ ಕೊಡಲಿಪೆಟ್ಟು ನೀಡುವುದು ಕಂಡುಬರುತ್ತದೆ. ಈ ಕತೆಯಲ್ಲಿ ಬರುವಂತಹ ಮತ್ತೊಂದು ಪಾತ್ರ ಯಮುನಮ್ಮ ಬಾಲ್ಯದಿಂದಲೇ ಮದುವೆಯಾಗಿ ತವರುಮನೆ ಸೇರಿರುತ್ತಾಳೆ ತನ್ನ ದೈಹಿಕ ತೃಪ್ತಿಯನ್ನು ತೀರಿಸಿಕೊಳ್ಳಲು ಹೋಗಿ ತಮ್ಮನನ್ನು ಊರುಬಿಟ್ಟು ಹೋಗುವಂತೆ ಮಾಡುತ್ತಾಳೆ. ನೀರಮಾನ್ವಿಯವರು ತಮ್ಮ ಹಿಂದಿನ ಕತೆಗಳಲ್ಲಿ ಚಿತ್ರಿತವಾಗಿರುವಂತಹ ದಲಿತ ಪಾತ್ರಗಳು ದೈಹಿಕವಾಗಿ ಹೊಲಗದ್ದೆಗಳಲ್ಲಿ ಮನೆಯಲ್ಲಿ ದುಡಿಯುತ್ತಾ ಶೋಷಣೆಗೆ, ದಬ್ಬಾಳಿಕೆಗೆ ತುತ್ತಾಗಿರುವುದನ್ನು ಕಂಡರೆ ಇಲ್ಲಿಯ ತಿಮ್ಮನ ಪಾತ್ರವು ಸಮಾಜದಲ್ಲಿ ಮಾನಸಿಕವಾಗಿ ಶೋಷಣೆಗೆ ಒಳಗಾಗಿರುವುದನ್ನು ಗುರುತಿಸಬಹುದು. ಈ ಪಾತ್ರವು ಕೂಡ ದಲಿತ ಲೋಕದ ವ್ಯಾಪ್ತಿಯಲ್ಲಿ ಸೇರಿಕೊಳ್ಳುತ್ತದೆ. ಹೀಗೆ ಸಾಮಾಜಿಕವಾಗಿ, ಆರ್ಥಿಕವಾಗಿ, ಧಾರ್ಮಿಕವಾಗಿ ಶೋಷಣೆಗೆ ದಬ್ಬಾಳಿಕೆಗೆ ಗುರಿಯಾಗಿರುವುದನ್ನು ಅದರ ಆಂತರ್ಯಕ್ಕೆ ಇಳಿದು ಸೂಕ್ಷ್ಮವಾಗಿ ಅವಲೋಕಿಸಿದಾಗ ಕಂಡು ಬರುವಂತಹ ಅಂಶವಾಗಿದೆ.

ಹಂಗಿನರಮನೆಯ ಹೊರಗೆ ಕತೆಯಲ್ಲಿ ಬರುವಂತಹ ರೋಗಿಯು ಕೂಡಾ ದಲಿತ ಪಾತ್ರವಾಗಿ ಚಿತ್ರಿತವಾಗಿರುವುದನ್ನು ಗುರುತಿಸಬಹುದು. ಮಾನಸಿಕವಾಗಿ, ಅಸ್ವಸ್ಥನಾಗಿ ಕುಟುಂಬದಲ್ಲಿ ಹಾಗೂ ಸಮಾಜದಲ್ಲಿ ಬದುಕಿರುವುದಕ್ಕಿಂತ ಸಾಯುವುದು ಲೇಸು ಎಂಬಂತಹ ನಿರ್ಧಾರಕ್ಕೆ ಬಂದಿರುತ್ತಾನೆ. ತನ್ನ ತಂದೆ, ತಾಯಿ, ಕುಟುಂಬ, ಹೆಂಡತಿಯಿಂದಲೇ ಮಾನಸಿಕವಾಗಿ ಶೋಷಣೆಗೆ ಒಳಗಾಗಿ ಸಮಾಜದಲ್ಲಿ ಹಾಗೂ ಕುಟುಂಬದಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ದಬ್ಬಾಳಿಕೆಗೆ ತುತ್ತಾಗಿರುತ್ತಾನೆ. ಇಂತಹ ಅಂಶಗಳನ್ನು ಆ ಪಾತ್ರದ ಆಳಕ್ಕೆ ಇಳಿದು ನೋಡಿದಾಗ ಗಮನಿಸುವಂತಹ ಪ್ರಮುಖ ಅಂಶವಾಗಿ ದಲಿತ ಪಾತ್ರವಾಗಿ ಚಿತ್ರಿತವಾಗಿರುವುದನ್ನು ಕಾಣಬಹುದಾಗಿದೆ.

ಹೀಗೆ ರಾಜಶೇಖರ ನೀರಮಾನ್ವಿಯವರು ತಮ್ಮ ಕತೆಗಳಲ್ಲಿ ರಾಜಕೀಯವಾಗಿ, ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ ಅಲ್ಲೋಲ ಕಲ್ಲೋಲಗೊಳ್ಳುತ್ತಾ ಬಂದ ಈ ಭಾಗದ ಜನರು ಅಥವಾ ದಲಿತರು ಆಗಾಗ ಆಳುವ ವರ್ಗದ ಕ್ರೌರ್ಯಕ್ಕೆ ದಬ್ಬಾಳಿಕೆ ಹೇಗೆ ತುತ್ತಾಗಿದ್ದಾರೆ ಹಾಗೂ ಅಲ್ಲಿಯ ದಲಿತರ ಜೀವನ ಕ್ರಮ ಯಾವ ರೀತಿ ಇದೆ ಎಂಬುದನ್ನು ತಮ್ಮ ಕತೆಗಳಲ್ಲಿ ಹಿಡಿದಿಡುವ ಮೂಲಕ ದಲಿತ ಲೋಕವನ್ನು ಚಿತ್ರಿಸಿರುವುದು ಕಂಡು ಬರುತ್ತದೆ.

ಅಡಿಟಿಪ್ಪಣಿ

೦೧. ಜಂಬಣ್ಣ ಅಮರು ಚಿಂತಕ ಮತ್ತು ರಾಜಶೇಖರ ನೀರಮಾನ್ವಿ ಸಾಹಿತ್ಯ, ಸಂ.ಡಾ.ದಸ್ತಗೀರ್ ಸಾಬ್‌ದಿನ್ನಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೮, ಪುಟ-೪೧

೦೨. ರಾಜಶೇಖರ ನೀರಮಾನ್ವಿ, ಹಂಗಿನರಮನೆಯ ಹೊರಗೆ, ೧೯೯೮, ಪುಟ-೬

೦೩. ಅದೇ, ಪುಟ-೨೧

೦೪. ಸಾಹಿತ್ಯವಾದಗಳು ಮತ್ತು ಚಳುವಳಿಗಳು, ಖ್ಯಾತ ವಿದ್ವಾಂಸರ, ಲೇಖನಗಳ ಸಂಪುಟ, ಸುಂದರ ಪುಸ್ತಕ ಪ್ರಕಾಶನ, ಧಾರವಾಡ, ೨೦೦೬, ಪುಟ-೮೬

೦೫. ಜಂಬಣ್ಣಅಮರುಚಿಂತಕ ಮತ್ತು ರಾಜಶೇಖರ ನೀರಮಾನ್ವಿ ಸಾಹಿತ್ಯ, ಸಂ.ಡಾ.ದಸ್ತಗೀರ್ ಸಾಬ್‌ದಿನ್ನಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೮, ಪುಟ-೩೬

೦೬. ಡಾ.ಸಿ.ಆರ್.ಯೆರವಿನ ತಲೆಮಠ, ಪಾಶ್ಚಾತ್ಯ ಸಾಹಿತ್ಯವಾದಗಳು ಮತ್ತು ಕನ್ನಡ ಸಾಹಿತ್ಯ ಸಂದರ್ಭ, ೨೦೦೦, ಪುಟ-೧೭

೦೭. ರಾಜಶೇಖರ ನೀರಮಾನ್ವಿ, ಹಂಗಿನರಮನೆಯಹೊರಗೆ, ೧೯೯೮, ಪುಟ-೫

೦೮. ಅದೇ, ಪುಟ-೬

೦೯. ಅದೇ, ಪುಟ-೪೦

೧೦. ಅದೇ, ಪುಟ-೪೧

೧೧. ಅದೇ, ಪುಟ-೪೮

೧೨. ರಾಜಶೇಖರ ನೀರಮಾನ್ವಿ, ಕರ್ಪೂರದ ಕಾಯದಲ್ಲಿ, ೧೯೯೦, ಪುಟ-೨೨

ಅಧ್ಯಾಯ - ಐದು

ರಾಜಶೇಖರ ನೀರಮಾನ್ವಿಯವರ ಕಥನದ ವೈಶಿಷ್ಟ್ಯಗಳು

೫.೧. ಪ್ರವೇಶ

೫.೨. ಕಥಾವಸ್ತು ಮತ್ತು ಆಶಯ

೫.೩. ಪಾತ್ರಗಳು

೫.೪. ಭಾಷೆ ಮತ್ತು ಶೈಲಿ

೫.೫. ತಂತ್ರ

೫.೬. ಉಪಸಂಹಾರ

ಅಧ್ಯಾಯ - ಐದು

ರಾಜಶೇಖರ ನೀರಮಾನ್ವಿಯವರ ಕಥನದ ವೈಶಿಷ್ಟ್ಯಗಳು

೫.೧. ಪ್ರವೇಶ

ಕನ್ನಡ ಕಥಾ ಸಾಹಿತ್ಯಕ್ಕೆ ರಾಜಶೇಖರ ನೀರಮಾನ್ವಿಯವರು ವಿಶಿಷ್ಟ ಕೊಡುಗೆಯನ್ನು ನೀಡಿದ್ದಾರೆ. ಇವರ ಕತೆಗಳು ಸಂಖ್ಯೆಯ ದೃಷ್ಟಿಯಿಂದ ಕಡಿಮೆಯಿದ್ದರೂ, ಗಾತ್ರ ಹಾಗೂ ಗುಣದ ದೃಷ್ಟಿಯಿಂದ ಮಹತ್ವವಾಗಿವೆ. ನೀರಮಾನ್ವಿಯವರು ಪ್ರಕಟಿಸಿದ್ದು ಕೇವಲ ಎರಡು ಕಥಾ ಸಂಕಲನಗಳು ಮಾತ್ರ. ಈ ಎರಡು ಕಥಾಸಂಕಲನಗಳಲ್ಲಿ ಒಟ್ಟು ಹದಿಮೂರು ಕತೆಗಳು ನಮಗೆ ದೊರೆಯುತ್ತವೆ. ಇವರ ಮೊದಲನೆಯ ಕಥಾ ಸಂಕಲನ "ಹಂಗಿನರಮನೆಯ ಹೊರಗೆ" ಈ ಸಂಕಲನದಲ್ಲಿ ೧. ವೃತ್ತ ೨.ಭೂತ ೩.ಹಂಗಿನರಮನೆಯ ಹೊರಗೆ ೪.ದುರಸ್ತಿ ೫.ಬಿಸಿಲುಗುದುರೆ ಎಂಬ ಐದು ಕತೆಗಳಿವೆ.

'ಕರ್ಪೂರದ ಕಾಯದಲ್ಲಿ' ಎಂಬ ಕಥಾಸಂಕಲನದಲ್ಲಿ ೧. ತಮಂಥ ಕಿರಿದೆನ್ನ ಬಹುದೇ ಅಯ್ಯಾ ೨.ಬೆತ್ತಲೆಸ್ವಾಮಿ ೩.ಪ್ರಜಾಪ್ರಭುತ್ವದಲ್ಲಿ ಒಂದು ಸಾವು ೪.ಗುಡಿಯ ನೋಡಿರಣ್ಣಾ ೫.ಎಂಥಾ ಮೋಜಿನ ಕುದುರೆ ೬. ನೆಲೆ ೭. ಕರ್ಪೂರದ ಕಾಯದಲ್ಲಿ ಬೆಂಕಿಯುಸಿರಾಟ ಹೀಗೆ ಒಟ್ಟು ಏಳು ಕತೆಗಳಿವೆ. ರಾಜಶೇಖರ ನೀರಮಾನ್ವಿಯವರು ಸೃಜನಶೀಲ ಬರಹಗಾರರೆಂಬುದಕ್ಕೆ ಈ ಎರಡೂ ಕಥಾ ಸಂಕಲನಗಳು ಸಾಕ್ಷಿಯಾಗಿವೆ. ಈ ಎರಡು ಕಥಾ ಸಂಕಲನಗಳಲ್ಲಿ ಸಾಮಾಜಿಕ ಕಾಳಜಿ ಮತ್ತು ಸಾಹಿತ್ಯಿಕ ಕಾಳಜಿಗಳ ನಡುವೆ ಒಂದು ಬಗೆಯ ಸಮತೋಲನವನ್ನು ತರುವಂತಹ ಪ್ರಯತ್ನ ಮಾಡಿದ್ದಾರೆ.

ಇವರ ಮೊದಲನೆಯ ಕಥಾ ಸಂಕಲನ ವ್ಯಕ್ತಿಗತ ಪ್ರಜ್ಞೆಯಲ್ಲಿ ಸಾಗಿದರೆ, ಎರಡನೆಯದು ಸಾಮಾಜಿಕ ಪ್ರಜ್ಞೆಯಲ್ಲಿ ಸಾಗುತ್ತಾ ಹೋಗುತ್ತದೆ. ಹೀಗೆ ಇವರ ಎಲ್ಲಾ ಕತೆಗಳಲ್ಲಿ ವಸ್ತು, ತಂತ್ರ, ಶೈಲಿಗಳಿಂದ ಭಿನ್ನವಾಗಿದ್ದು ಹೈದ್ರಾಬಾದ ಕರ್ನಾಟಕದ ಸಾಂಸ್ಕೃತಿಕ ಪ್ರತಿನಿಧಿಯಾಗಿ ತಮ್ಮ ಕಥಾ ಸಾಹಿತ್ಯವನ್ನು ವಿಸ್ತರಿಸಿಕಟ್ಟಿಕೊಡುವಲ್ಲಿ ವಿಭಿನ್ನರಾಗಿದ್ದಾರೆ.

೫.೨. ಕಥಾವಸ್ತು ಮತ್ತು ಆಶಯ

ಕಥಾವಸ್ತು ಎಂದರೆ ಕತೆಯ ಮುಖ್ಯ ಘಟನೆ. ಕಥಾವಸ್ತುವಿಗೆ ಪ್ರಸಂಗ, ಸನ್ನಿವೇಶ, ಪಾತ್ರರಚನೆ, ಸಂಭಾಷಣೆ, ವರ್ಣನೆ, ವಿವರಣೆ ಅತ್ಯಂತ ಮಹತ್ವದ ಅಂಶಗಳಾಗಿವೆ. ಇವುಗಳಿಂದಲೇ ಕತೆಯು ನಿರ್ಮಾಣವಾಗುತ್ತದೆ. ಹಾಗೂ ಪ್ರಧಾನ ಪಾತ್ರವಹಿಸುತ್ತದೆ. ಒಂದು ಕತೆಯು ಜನಪ್ರಿಯತೆಯಾಗುವಲ್ಲಿ ವಸ್ತುವಿನ ಪಾತ್ರ ತುಂಬಾ ಮಹತ್ವದ್ದು. ಇಂತಹ ವಸ್ತುವನ್ನು ಲೇಖಕ ತನ್ನ ಅತಃಸ್ಫೂರ್ತಿಯಿಂದ ವಸ್ತುವೊಂದರ ಪಡಿಯಚ್ಚಿನಲ್ಲಿ ಎರಕ ಹೊಯ್ಯುತ್ತಾನೆ. ನಂತರ ಅದು ಕಾಲ, ದೇಶ, ಪರಿಸರಕ್ಕೆ ತಕ್ಕಂತೆ ಜೀವನ ಪಡೆಯುತ್ತವೆ.

ಇಂತಹ ಕಥಾವಸ್ತುವಿನ ನಿರ್ಮಾಣದಲ್ಲಿ ಲೇಖಕನಿಗೆ ಕೇವಲ ಪ್ರತಿಭೆಯೊಂದಿದ್ದರೆ ಸಾಲದು. ಅದರ ಜೊತೆಗೆ ಜೀವನಾನುಭವವೂ ಕಾರಣೀಭೂತವಾಗಿದೆ. ಜೀವನಾನುಭವವು ಎಷ್ಟು ವಿಶಾಲವಾಗಿದೆಯೊ ಅಷ್ಟು ವಿಧದ ವಸ್ತು ಕತೆಗಾರನಿಗೆ ಸಿಗುತ್ತದೆ. ಸೃಜನಶೀಲ ಕತೆಗಾರರಾಗಿರುವ ರಾಜಶೇಖರ ನೀರಮಾನ್ವಿಯವರ ಕತೆಗಳು ವೈವಿಧ್ಯಮಯ ವಸ್ತುವನ್ನು ಹೊಂದಿವೆ. ಗ್ರಾಮೀಣ ಪರಿಸರದಿಂದ ಬಂದವರಾದ್ದರಿಂದ ಗ್ರಾಮೀಣ ಪರಿಸರದಲ್ಲಿ ಕಂಡಂತಹ ಘಟನೆಗಳು, ಅನ್ಯಾಯ, ಅಕ್ರಮಗಳು, ಮೂಢನಂಬಿಕೆಗಳು ಮೊದಲಾದವುಗಳನ್ನು ಕತೆಯ ವಸ್ತುವನ್ನಾಗಿ ಮಾಡಿಕೊಂಡು, ತಮ್ಮದೇ ಆದ ವಿಶಿಷ್ಟ ಭಾಷಾ ಶೈಲಿ, ತಂತ್ರಗಳಿಂದ ಕತೆಗಳನ್ನು ಹೆಣೆದಿದ್ದಾರೆ. ಗ್ರಾಮೀಣ ಪರಿಸರದ ಜೊತೆಗೆ ಆಧುನಿಕ ಸಮಾಜದಲ್ಲಿಯ ಹಲವಾರು ಘಟನೆಗಳು, ರಾಜಕೀಯ, ಮೋಸ, ಆಚರಣೆಗಳು ಹೀಗೆ ಹಲವಾರು ವಿಷಯಗಳು ಕತೆಗಳ ವಸ್ತುಗಳಾಗಿವೆ.

ವೃತ್ತ

ಈ ಕತೆಯು ಹಂಗಿನರಮನೆಯ ಹೊರಗೆ ಕಥಾ ಸಂಕಲನದ ಮೊದಲ ಕತೆಯಾಗಿದ್ದು. ಇಲ್ಲಿ ಮಾಗಿದ ವ್ಯಕ್ತಿತ್ವದ ಶಂಕರಪ್ಪಗೌಡನ ಜೀವನ, ಅವನ ಆದರ್ಶ, ಏಳು-ಬೀಳುಗಳನ್ನು, ಹೈದ್ರಬಾದ-ಕರ್ನಾಟಕ ಭಾಗದಲ್ಲಿ ನಡೆದ ರಜಾಕಾರರ ದಬ್ಬಾಳಿಕೆಯನ್ನು ಚಿತ್ರಿಸಲಾಗಿದೆ. ಇದೊಂದು ಸುದೀರ್ಘವಾದ ಕತೆಯಾಗಿದ್ದು ನಾಲ್ಕು ಹಂತಗಳಲ್ಲಿ ತನ್ನ ವ್ಯಾಪ್ತಿಯನ್ನು ಹರಡಿಕೊಂಡಿದೆ. ಕತೆಯ ಮೊದಲನೇ ಹಂತದಲ್ಲಿ ನಾಯಿಯಸಾವು, ರಾಮಲಿಂಗನ ವ್ಯಕ್ತಿತ್ವದ ಸೂಕ್ಷ್ಮ ಪರಿಚಯವಿದೆ. ಎರಡನೆಯ ಹಂತದಲ್ಲಿ ಗೌಡನ ಹಿಂದಿನ ಜೀವನ, ರಜಾಕಾರರ ಹಾವಳಿ, ಗೌಡನ ಮನೆತನದ ವಿವರವಿದೆ. ಮೂರನೇ ಹಂತದಲ್ಲಿ ಗೌಡನ ಮದುವೆ, ಗೌಡತಿಯ ಉದಾತ್ತ ವ್ಯಕ್ತಿತ್ವವಿದೆ ನಾಲ್ಕನೆಯ ಹಂತದಲ್ಲಿ ಗೌಡತಿಯನ್ನು ಮದುವೆಯಾದುದು ಶಂಕರಪ್ಪಗೌಡನ ವ್ಯಕ್ತಿತ್ವ, ರಾಮಲಿಂಗಪ್ಪನ ದುರ್ವ್ಯವಹಾರ ಹಾಗೂ ಗೌಡನ ಸಾವಿನ ಚಿತ್ರಣವನ್ನು ನೀಡಲಾಗಿದೆ.

ನಾಯಿಯ ಸಾವಿನೊಂದಿಗೆ ಆರಂಭವಾಗುವ ಈ ಕತೆಯು ಗೌಡನ ಸಾವಿನೊಂದಿಗೆ ಮುಕ್ತಾಯಗೊಳ್ಳುತ್ತದೆ. ಇದು ನೀರಮಾನ್ವಿಯವರು ತೆಗೆದುಕೊಂಡಿರುವ ಕತೆಯ ವಸ್ತುವಾಗಿದೆ.

ವ್ಯಕ್ತಿ ಎಷ್ಟೇ ಆದರ್ಶ ಜೀವನ ಮೌಲ್ಯಗಳನ್ನು ಅಳವಡಿಸಿಕೊಂಡು ಜೀವಿಸಿದರೂ ಕಷ್ಟನಷ್ಟಗಳು ಬೆನ್ನು ಬಿಡುವುದಿಲ್ಲ. ಅಂತಹುಗಳನ್ನು ಜೀವನದಲ್ಲಿ ಧೈರ್ಯವಾಗಿ ಎದುರಿಸಬೇಕು ಎಂಬುದನ್ನು ಶಂಕರಪ್ಪಗೌಡ ಎಂಬ ಪಾತ್ರದ ಮೂಲಕ ತಿಳಿಸುವುದು ಈ ಕತೆಯ ಆಶಯವಾಗಿದೆ.

ಭೂತ

ಗ್ರಾಮೀಣ ಜನಜೀವನದಲ್ಲಿ ಬೆರೆತುಹೋಗಿರುವ ದೆವ್ವಭೂತಗಳ ನಂಬಿಕೆ, ಇವುಗಳ ಹೆಸರಿನಲ್ಲಿ ನಡೆಯುವ ಹಿಂಸೆ, ದಬ್ಬಾಳಿಕೆ, ವಂಶಪಾರಂಪರ್ಯ, ಆಚರಣೆಗಳು, ಮೂಢನಂಬಿಕೆಗಳು ಮುಂತಾದವುಗಳನ್ನು ಈ ಕತೆಯು ವಸ್ತುವಾಗಿ ಒಳಗೊಂಡಿದೆ. ಈ ಕತೆಯು ನಾಲ್ಕು ಹಂತಗಳಲ್ಲಿ ವಿಸ್ತರಿಸಿಕೊಂಡಿದೆ. ಪನ್ನೂರಿನ ದಣಿ ರಮೇಶಪ್ಪನ ಜೀವನ, ಅವನ ವಂಶಜರ ಕುಕೃತ್ಯಗಳು ಮೊದಲಾದವುಗಳನ್ನು ಕತೆಗಾರರು ಕಲಾತ್ಮಕವಾಗಿ ಚಿತ್ರಿಸಿದ್ದಾರೆ. ಒಟ್ಟಾರೆ ಗ್ರಾಮೀಣ ಮೌಲ್ಯವಾದ ಭೂತದ ವಿಷವರ್ತುಲದಿಂದ ಹೊರಬರಲು ಪ್ರಯತ್ನಿಸಿದರೂ ಅವನಿಗೆ ಸಾಧ್ಯವಾಗದೇ ಅವನ ವೈಚಾರಿಕ ಪ್ರಜ್ಞೆ ಸೋಲನ್ನು ಅನುಭವಿಸಿ, ಆ ವೈಚಾರಿಕತೆ ಪ್ರಶ್ನೆಯಾಗಿಯೇ ಉಳಿಯುತ್ತದೆ.

ಈ ಕತೆಯಲ್ಲಿ ರಾಜಮನೆತನದವರ ದಬ್ಬಾಳಿಕೆ ಹಾಗೂ ವ್ಯಕ್ತಿ ತನ್ನ ಮನಸ್ಸಿನ ಮೇಲೆ ನಿಯಂತ್ರಣ ಕಳೆದುಕೊಂಡರೆ ಅವನು ಭೂತದಂತೆ ವರ್ತಿಸುತ್ತಾನೆ ಎಂಬುದನ್ನು ತಿಳಿಸುವುದು ಈ ಕತೆಯ ಆಶಯವಾಗಿದೆ.

ಹಂಗಿನರಮನೆಯ ಹೊರಗೆ

ಕಥಾನಾಯಕ ವಿಕ್ಷಿಪ್ತ ವ್ಯಕ್ತಿತ್ವದವನು. ತಾನು ಬದುಕಿದಂತಹ ಸಮಾಜವನ್ನು ವಿರೋಧಿಸುವವನು. ತನ್ನ ಕುಟುಂಬ, ಹೆಂಡತಿ, ತಂದೆ, ತಾಯಿ ಎಲ್ಲರ ವಿರುದ್ಧ ಬಂಡಾಯದ ಮನೋಭಾವ ತಳೆದವನು. ತಾನು ಇಂತಹ ಸಮಾಜದಲ್ಲಿ ಬದುಕುವುದಕ್ಕಿಂತ ಸಾಯುವುದೇ ಲೇಸು ಎಂಬ ನಿರ್ಧಾರಕ್ಕೆ ಬಂದ ಕಥಾನಾಯಕನ ಪ್ರಜ್ಞೆಯಲ್ಲಿಯೇ ಸಾಗಿ, ಸಮಾಜ ಮತ್ತು ಮನುಷ್ಯನ ಮನಸ್ಸಿನ ಆಳಪಾತಾಳಗಳನ್ನು ಬಗೆಯುವ ಕ್ರಮ ಇಲ್ಲಿದೆ. ಮನುಷ್ಯ ಸಂಬಂಧಗಳು, ಮಾನವೀಯ ಮೌಲ್ಯಗಳು, ಕೌಟುಂಬಿಕ ಸಂಬಂಧಗಳು ಆಧುನೀಕತೆಯಿಂದಾಗಿ ಯಾವ ರೀತಿ ನಾಶವಾಗುತ್ತಿವೆ ಎಂಬುದು ಈ ಕತೆಯ ವಸ್ತುವಾಗಿದೆ. ಒಟ್ಟಾರೆ ಕತೆಯಲ್ಲಿ ವ್ಯಕ್ತವಾಗುವ ಕತೆಗಾರನ ಸಿನಿಕತನ, ತಾಂತ್ರಿಕತೆ, ಭಾವುಕತೆ, ಗಂಭೀರತೆ, ಅಸ್ಥಿರತೆ ಈ ಎಲ್ಲಾ ಅಂಶಗಳು ಮಿತವಾಗಿ, ಸೂಕ್ಷ್ಮವಾಗಿ ಜೊತೆ ಜೊತೆಯಲ್ಲಿಯೇ ಪ್ರಕಟವಾಗಿರುವುದು ಕತೆಯ ವಿಶಿಷ್ಟತೆಗೆ ಸಾಕ್ಷಿಯಾಗಿದೆ.

ದುರಸ್ತಿ

ಮಾನವೀಯ ಮೌಲ್ಯಗಳನ್ನು ಹೊಂದಿರುವಂತಹ ಒಬ್ಬ ಬಡವ್ಯಕ್ತಿ ಭೂ ಮಾಲೀಕರಿಂದ ಹೇಗೆ ಶೋಷಣೆಗೆ ಒಳಪಡುತ್ತಾನೆ. ಹಾಗೂ ತನಗೆ ಆಪ್ತರಾದವರನ್ನು ಶೋಷಣೆಯಿಂದ ಬಿಡುಗಡೆಗೊಳಿಸಿ, ಹೊಸಬದುಕನ್ನು ಕಟ್ಟಿಕೊಡಬೇಕೆನ್ನುವ ಶೋಷಿತನ ತವಕಗಳನ್ನು ಚಿತ್ರಿಸುವುದೇ ಈ ಕತೆಯ ವಸ್ತುವಾಗಿದೆ. ರಿಕ್ಷಾದ ಫ್ರೀವೀಲ್ ಬೀಳುವುದರೊಂದಿಗೆ ಆರಂಭಗೊಳ್ಳುವ ಕತೆ ತಿಮ್ಮನ ಪೂರ್ವಾಪರಗಳನ್ನು ತಿಳಿಸುತ್ತಾ ಕೆಲವರ ನೀಚ ವ್ಯಕ್ತಿತ್ವವನ್ನು ಬಯಲಿಗೆಳೆಯುತ್ತಾ ಸಾಗಿ ತಿಮ್ಮನು ಸಾತ್ವಿಕವಾಗಿ ಶೋಷಣೆಯ ವಿರುದ್ಧ ಬಂಡೇಳುವವರೆಗೂ ಕತೆಯು ಮುಂದುರಿಯುತ್ತದೆ.

'ಬಿಸಿಲುಗುದುರೆ' ಹಂಗಿನರಮನೆಯ ಹೊರಗೆ ಕಥಾ ಸಂಕಲನದ ಕೊನೆಯ ಕತೆ ಇದು. ಈ ಸಂಕನಲದ ಉಳಿದ ಕತೆಗಳಿಗಿಂತ ವಸ್ತು, ಆಶಯ ಮತ್ತು ಪರಿಣಾಮದ ದೃಷ್ಟಿಯಿಂದ ಮಾಮೂಲಿ ಕತೆಯಾಗಿದೆ ಕತೆಯು ಬಿಡಿ ಬಿಡಿಯಾಗಿ ಆರು ಹಂತಗಳಲ್ಲಿ ಹರಡಿಕೊಂಡಿದ್ದು. ಓದುಗರ ಮೇಲೆ ಯಾವುದೇ ಹೆಚ್ಚಿನ ಪರಿಣಾಮ ಬೀರುವಲ್ಲಿ ಕತೆಯು ವಿಫಲವಾಗುತ್ತದೆ. ಕತೆಯಲ್ಲಿ ನವ್ಯದ ಶೈಲಿ ಕಂಡುಬರುತ್ತದೆ. ಕಥಾನಾಯಕನ ವಿಚಾರಗಳ ಸುರಳಿಯೊಂದಿಗೆ ಬಿಚ್ಚಿಕೊಳ್ಳುತ್ತಾ ಹೋದಂತೆ ಹಿಂದಿನ ಘಟನೆಗಳ ಅವಲೋಕನದತ್ತ ಸಾಗುವದು ಕತೆಯ ವಸ್ತುವಾಗಿದೆ.

ತಮಂಧ ಕಿರಿದೆನ್ನಬಹುದೇ ಅಯ್ಯ

ಕರ್ಪೂರದ ಕಾಯದಲ್ಲಿ ಕಥಾ ಸಂಕಲನದ ಮೊದಲ ಕತೆ ಇದು. ಕತೆಗಾರರು ತಾವು ಪ್ರವಾಸ ಕೈಗೊಂಡಾಗ ಕಂಡ ಘಟನೆಗಳನ್ನು ಆಧರಿಸಿ ಆಂತರಿಕ ಒತ್ತಡದಿಂದ ಈ ಕತೆಯನ್ನು ಬರೆದಿದ್ದಾರೆ. ಇದರ ಆರಂಭ ಪುಣ್ಯಕ್ಷೇತ್ರದಿಂದಾದರೆ ಅಂತ್ಯ ಎತ್ತಲೋ ಸಾಗಿ ಜಟಿಲ ಸಮಸ್ಯೆಯೊಂದಿಗೆ ಮುಕ್ತಾಯವಾಗುತ್ತದೆ. ಹರಿದ್ವಾರ, ರಿಷಿಕೇಶಗಳಿಗೆ ಭೇಟಿ ನೀಡುವ ಯಾತ್ರಾರ್ಥಿಗಳ ಸ್ವಾರ್ಥಗುಣ, ಧಾರ್ಮಿಕ ಶೋಷಣೆ, ದೇವಾಲಯಗಳ ವೈಭವೋಪೇತ ಅಲಂಕಾರ, ಪೂಜಾರಿಗಳ ಹಾವಳಿ, ನದಿಯಬಳಿ ಯಾತ್ರಾರ್ಥಿಗಳಿಂದ ಹೊಟ್ಟೆಯನ್ನು ಹೊರೆದುಕೊಳ್ಳುವ ಜನರು ಈ ಎಲ್ಲಾವನ್ನು ಕತೆಯ ವಸ್ತುವನ್ನಾಗಿ ಸ್ವೀಕರಿಸಿದ್ದಾರೆ. ಜನರಲ್ಲಿ ಅಜ್ಞಾನ, ಮೌಢ್ಯತೆ, ಕಂದಾಚಾರ, ಭ್ರಷ್ಟಾಚಾರ ಇತ್ಯಾದಿಗಳು ಪುಣ್ಯಕ್ಷೇತ್ರಗಳವರೆಗೂ ವ್ಯಾಪಿಸಿದೆ ಅದನ್ನು ತೊಡೆದುಹಾಕಬೇಕು ಎಂಬ ಆಶಯವನ್ನು ಕತೆಗಾರರು ಇಲ್ಲಿ ವ್ಯಕ್ತಪಡಿಸಿದ್ದಾರೆ.

ಬೆತ್ತಲೆ ಸ್ವಾಮಿ

ಕರ್ಪೂರದ ಕಾಯದಲ್ಲಿಯ ಕಥಾಸಂಕಲನದ ಒಂದು ಪ್ರಮುಖ ಕತೆ. ಗ್ರಾಮೀಣ ಸಮಾಜದ ಮೌಢ್ಯತೆ, ದೇವರು, ಧರ್ಮ ಸ್ವಾಮಿಗಳ ಮೇಲಿನ ಅಂಧಶ್ರದ್ಧೆ, ಈ ಶ್ರದ್ಧೆಯನ್ನು ದುರುಪಯೋಗ ಪಡಿಸಿಕೊಳ್ಳುವ ಭ್ರಷ್ಟ ವ್ಯಕ್ತಿಗಳ ಚಿತ್ರಣ ಈ ಕತೆಯ ಪ್ರಮುಖ ವಸ್ತುಗಳಾಗಿವೆ.

ನೆಲೆ

ಈ ಕತೆಯಲ್ಲಿ ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯು ಯಾವ ರೀತಿ ಶೋಷಣೆಗೆ ಒಳಗಾಗಿದ್ದಾಳೆ ಎಂಬುದನ್ನು ತಿಳಿಸುತ್ತಾ, ಕೆಲವರ ಅನೀತಿಯ ಬದುಕು, ಕಥಾನಾಯಕಿಯಾದ ರಂಗಮ್ಮಳ ಶೋಷಣೆ, ಇದರ ಮಧ್ಯ ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳಲು ಸಮಾಜದಲ್ಲಿ ಯಾವ ರೀತಿಯದಾಗಿ ಪ್ರತಿಭಟನೆ ಮಾಡುತ್ತಾಳೆ ಎಂಬುದು ಕತೆಯ ವಸ್ತುವಾಗಿದೆ ಹಾಗೂ ಆಶಯವೂ ಕೂಡಾ ಆಗಿದೆ.

ಪ್ರಜಾಪ್ರಭುತ್ವದಲ್ಲಿ ಒಂದು ಸಾವು

ಈ ಕತೆಯು ನಗರ ಜೀವನದ ಬಗ್ಗೆ ತಿಳಿಸಿಕೊಡುತ್ತದೆ. ನಗರದಲ್ಲಿ ಮಾನವೀಯ ಮೌಲ್ಯಗಳು, ಸಂಬಂಧಗಳು ಯಾವ ರೀತಿ ವಿನಾಶದ ಅಂಚಿಗೆ ಸಾಗಿವೆ ಎಂಬುದನ್ನು ತಿಳಿಸುತ್ತಾರೆ ಹಾಗೂ ಸಾಮಾಜಿಕ ಮತ್ತು ರಾಜಕೀಯ ವಸ್ತುವನ್ನಿಟ್ಟುಕೊಂಡು ಈ ಕತೆಯು ತನ್ನ ಆಯಾಮವನ್ನು ತೆರೆದುಕೊಳ್ಳುತ್ತದೆ.

ನಮ್ಮದು ಪ್ರಜಾಪ್ರಭುತ್ವ ರಾಷ್ಟ್ರ, ಇಲ್ಲಿ ಎಲ್ಲಾರಿಗೂ ಸ್ವಾತಂತ್ರ್ಯ ಹಾಗೂ ರಕ್ಷಣೆ ಇದೆ. ಸಮಾಜದಲ್ಲಿ ಅನ್ಯಾಯ, ಅತ್ಯಾಚಾರ ಮುಂತಾದ ದುರುಪಯೋಗಗಳು ಹೆಚ್ಚಾಗಿ ನಡೆಯುತ್ತಿದ್ದು ಮಾನವೀಯ ಸಂಬಂಧಗಳು ನಾಶವಾಗುತ್ತಿವೆ. ಇದನ್ನು ತಡೆಯಬೇಕು ಎಂಬ ಆಶಯವನ್ನು ಕತೆ ವ್ಯಕ್ತಪಡಿಸುತ್ತದೆ.

ಗುಡಿಯನೋಡಿರಣ್ಣಾ

ಈ ಕತೆಯು ಗುಣಾತ್ಮಕ ಮೌಲ್ಯಗಳನ್ನು ಒಳಗೊಂಡಿರುವ ಕತೆಯಾಗಿದೆ. ಮನುಷ್ಯ ಸಂಬಂಧಗಳು, ಕೌಟುಂಬಿಕ ಸಂಬಂಧಗಳು, ಅಂತರ್ಜಾತೀಯ ವಿವಾಹ ಈ ಕತೆಯ ವಸ್ತುಗಳಾಗಿದೆ. ಒಟ್ಟಿನಲ್ಲಿ ಮನುಷ್ಯಸಂಬಂಧಗಳು ಜಾತಿಮತಗಳಿಗಿಂತ ಮುಖ್ಯ ಎಂಬ ಆಶಯವನ್ನು ಈ ಕತೆಯು ವ್ಯಕ್ತಪಡಿಸುತ್ತದೆ.

ಎಂಥಾ ಮೋಜಿನ ಕುದುರೆ

ವಿಷಯಾಸಕ್ತ ಲಂಪಟನಾದ ವಿಜಯನು ಹಲವಾರು ಹೆಣ್ಣುಗಳೊಂದಿಗೆ ಚೆಕ್ಕಂದವಾಡಿ ತನ್ನತನವನ್ನೇ ಕಳೆದುಕೊಂಡ ವ್ಯಕ್ತಿಯೊಬ್ಬನ ಚಿತ್ರಣವನ್ನು ಈ ಕತೆಯಲ್ಲಿ ವಸ್ತುವಾಗಿ ತೆಗೆದುಕೊಂಡಿರುವುದನ್ನು ಕಾಣಬಹುದು.

ವ್ಯಕ್ತಿಯು ಯೌವನದಲ್ಲಿ ದೇಹ ಮತ್ತು ಮನಸ್ಸಿನ ಮೇಲೆ ಹತೋಟಿಯನ್ನಿಟ್ಟುಕೊಂಡು ಬದುಕಬೇಕು. ಇಲ್ಲವಾದಲ್ಲಿ ದೈಹಿಕವಾಗಿ ಮಾನಸಿಕವಾಗಿ ನರಳಬೇಕಾಗುತ್ತದೆ ಎಂಬ ಆಶಯವನ್ನು ಈ ಕತೆಯಲ್ಲಿ ಕಾಣಬಹುದು.

ಕರ್ಪೂರದ ಕಾಯದಲ್ಲಿ ಬೆಂಕಿಯುಸಿರಾಟ

ಇದು 'ಕರ್ಪೂರದ ಕಾಯದಲ್ಲಿ' ಕಥಾಸಂಕಲನದಲ್ಲಿರುವ ವಿಶಿಷ್ಟ ಕತೆಯಾಗಿದೆ. ರೈತಚಳುವಳಿ, ಗಡಿಸಮಸ್ಯೆ, ಭಾಷಾ ಸಮಸ್ಯೆ ಈ ಕತೆಯ ಪ್ರಮುಖ ವಸ್ತುಗಳಾಗಿವೆ.

೫.೩. ಪಾತ್ರಗಳು

ರಾಜಶೇಖರ ನೀರಮಾನ್ವಿಯವರು ತಮ್ಮ ಎರಡು ಕಥಾ ಸಂಕಲನಗಳಲ್ಲಿ ಪಾತ್ರಗಳನ್ನು ಚಿತ್ರಿಸುವುದರಲ್ಲಿ ತನ್ನದೇ ಆದಂತಹ ಸ್ವಂತಿಕೆಯನ್ನು ಮೆರೆದಿದ್ದಾರೆ. ಸಮಯ ಸಂದರ್ಭಕ್ಕೆ ತಕ್ಕಂತೆ ಪಾತ್ರಗಳನ್ನು ಸೃಷ್ಟಿ ಮಾಡಿ ಕತೆಯ ಮುಂದವರಿಕೆಯಲ್ಲಿ ಪ್ರಧಾನ ಪಾತ್ರ ವಹಿಸಿದ್ದಾರೆ. ಇಲ್ಲಿ ಕೆಲವೊಂದು ಮುಖ್ಯ ಪಾತ್ರಗಳನ್ನು ಈ ಕೆಳಗಿನಂತೆ ತಿಳಿಯೋಣ.

ಶಂಕರಪ್ಪಗೌಡ

ವತ್ತಕತೆಯಲ್ಲಿ ಅನುಭವವನ್ನು ಹೊಂದಿರುವ ಶಂಕರಪ್ಪಗೌಡನ ವ್ಯಕ್ತಿತ್ವವನ್ನು ಕೇಂದ್ರವಾಗಿಟ್ಟುಕೊಂಡು ಈ ಕತೆಯು ಸಾಗುತ್ತದೆ. ಈ ಕತೆಯಲ್ಲಿ ಪ್ರಧಾನ ಪಾತ್ರವಾಗಿ ಕಂಡುಬರುತ್ತದೆ.

ಹುಸೇನಿ

ವೃತ್ತಕತೆಯಲ್ಲಿ ಕಂಡುಬರುವ ಮತ್ತೊಂದು ಪ್ರಮುಖ ಪಾತ್ರವಾಗಿದೆ. ಈ ಪಾತ್ರದ ಮುಖಾಂತರ ಹೈದ್ರಾಬಾದ್ ಕರ್ನಾಟಕದಲ್ಲಿ ನಡೆದ ರಜಾಕಾರರ ದಬ್ಬಾಳಿಕೆ, ನಿಜಾಮರ ಕ್ರೌರ್ಯದ ಪರಿಚಯವನ್ನು ಕತೆಗಾರರು ಮಾಡಿಸುತ್ತಾರೆ. ಹುಸೇನಿ ಕತೆಯಲ್ಲಿ ಅತ್ಯಂತ ಕ್ರೂರಿಯಾಗಿ ಅಮಾನವೀಯ ವ್ಯಕ್ತಿಯಾಗಿ ಕಂಡುಬರುತ್ತಾನೆ.

ಪಾರ್ವತಿ

ಗೌಡತಿಯ ಪಾತ್ರವು ವೃತ್ತ ಕತೆಯಲ್ಲಿ ಬರುವ ಪ್ರಮುಖ ಪಾತ್ರವಾಗಿದೆ. ಈ ಪಾತ್ರ ಕತೆಯಲ್ಲಿ ನೇರವಾಗಿ ಬರುವುದಿಲ್ಲ. ಉತ್ತಮ ಮಾತೃ ಹೃದಯ ಹೊಂದಿದ ಕರುಣಾ ಮೂರ್ತಿಯಂತೆ ಚಿತ್ರಿತಗೊಂಡಿದೆ.

ವೆಂಕಟಪ್ಪ ಧಣೇರು

ಈ ಪಾತ್ರ ಬರುವುದು ಭೂತ ಕತೆಯಲ್ಲಿ. ಕತೆಯಲ್ಲಿ ವೆಂಕಟಪ್ಪ ಧಣೇರು ಜೀವಂತ ಪಾತ್ರವಾಗಿರದೆ ಅವರನ್ನು ಅಮೂರ್ತ ರೀತಿಯಲ್ಲಿ ಚಿತ್ರಿಸಲಾಗಿದೆ. ವೆಂಕಟಪ್ಪ ಧಣಿ ರಮೇಶನ ಅಜ್ಜ, ಒಂದು ರೀತಿಯಲ್ಲಿ ವೆಂಕಟಪ್ಪ ಎಷ್ಟು ಪರಾಕ್ರಮಿಯಾಗಿದ್ದನೋ ಅಷ್ಟೇ ಕ್ರೂರಿ, ಅತ್ಯಾಚಾರಿ, ಅಧರ್ಮೀಯನಾಗಿದ್ದನೆಂಬುದು ಈ ಕತೆಯಿಂದ ತಿಳಿದುಬರುತ್ತದೆ.

ತಿಮ್ಮ

ದುರಸ್ತಿ ಕತೆಯಲ್ಲಿ ಪ್ರಮುಖ ಪಾತ್ರವಾಗಿ ಚಿತ್ರಿತನಾಗಿದ್ದಾನೆ. ತನ್ನ ಬೆನ್ನಿಗಂಟಿದವರನ್ನು ಶೋಷಣೆಯಿಂದ ಬಿಡುಗಡೆಗೊಳಿಸಿ ಹೊಸ ಬದುಕನ್ನು ಕಟ್ಟಿಕೊಡಬೇಕೆನ್ನುವ ಒಬ್ಬ ಶೋಷಿತನ ಪಾತ್ರವಾಗಿ ಈ ಕತೆಯಲ್ಲಿ ಚಿತ್ರತನಾಗಿದ್ದಾನೆ.

ಗಂಗಿ

ಕಥಾನಾಯಕ ತಿಮ್ಮನನ್ನು ಪ್ರೀತಿಸುವಂತೆ ನಟಿಸಿ, ಮದುವೆಯಾಗುವುದಾಗಿ ನಂಬಿಸಿ, ಹಣದಾಸೆಗಾಗಿ ಊರನ್ನೇ ಬಿಟ್ಟು ಹೋಗುವ ವಿಶ್ವಾಸ ಘಾತಕಿ, ನೀಚ ವ್ಯಕ್ತಿತ್ವವುಳ್ಳ ಪಾತ್ರವಾಗಿ ದುರಸ್ತಿ ಕತೆಯಲ್ಲಿ ಕಂಡುಬರುತ್ತಾಳೆ.

ನಾಗಮ್ಮ

ಈ ಪಾತ್ರ ದುರಸ್ತಿ ಕತೆಯಲ್ಲಿ ಕಂಡುಬರುತ್ತದೆ. ತಂದೆ, ತಾಯಿಗಳು ತೀರಿಹೋಗಿದ್ದರೂ ತಿಮ್ಮನ ಆಶ್ರಯದಲ್ಲಿ ಬೆಳೆದವಳು. ಇವಳು ಸಹ ಕತೆಯಲ್ಲಿ ತನ್ನ ಅಣ್ಣನೊಂದಿಗೆ ದೈಹಿಕ ಸಂಪರ್ಕ ಹೊಂದುವ ಹೇಯ ವ್ಯಕ್ತಿತ್ವದವಳಾಗಿ ಕಂಡುಬರುತ್ತಾಳೆ.

ರಾಮಣ್ಣ

ರಾಮಣ್ಣ ತಿಮ್ಮನ ಗೆಳೆಯ. ರಾಮಣ್ಣ ತಿಮ್ಮನ ಗೆಳೆಯನಾಗಿ, ಆತನ ಹಿತ ಚಿಂತಕನಾಗಿ, ತಿಮ್ಮಣ್ಣನ ಕಷ್ಟ-ಸುಖಗಳನ್ನು ಅರಿತವನಾಗಿ ಕಂಡುಬರುತ್ತಾನೆ.

ಲೆಕ್ಚರರ್ ರವಿ

ರವಿ ಹಂಗಿನರಮನೆಯ ಹೊರಗೆ ಕತೆಯ ನಾಯಕನ ಪರಮಮಿತ್ರ. ಕಥಾನಾಯಕನನ್ನು ಅರ್ಥಮಾಡಿಕೊಂಡಿದ್ದು ಅಂತರಂಗದ ಮಿತ್ರ. ಒಟ್ಟಾರೆಯಾಗಿ ಯಾವುದೇ ವಿಚಾರವನ್ನು ಬಿಚ್ಚು ಮನಸ್ಸಿನಿಂದ ನೋಡುವ ವ್ಯಕ್ತಿತ್ವವುಳ್ಳವನಾಗಿ ರವಿ ಕಥಾನಾಯಕನ ಸ್ನೇಹಿತನಾಗಿ ಅವನಿಗೆ ಸಹಾಯ ಮಾಡುವ ಉಪಕಾರಿಯಾಗಿ ಕಂಡುಬರುತ್ತಾನೆ.

ಕಿರಣ

ಈ ಪಾತ್ರ ಹಂಗಿನರಮನೆಯ ಹೊರಗೆ ಕತೆಯಲ್ಲಿ ಕಂಡು ಬರುತ್ತದೆ. ಕಿರಣಳು ಕಥಾನಾಯಕನ ಪ್ರೇಯಸಿ. ಕಥಾನಾಯಕ ಕಿರಣಳನ್ನು ಪ್ರೇಮಿಸಿ ತನ್ನ ತಂದೆ-ತಾಯಿಗಳ ಒತ್ತಡಕ್ಕೆ ಮಣಿದು, ತನ್ನ ಅಪ್ಪ ನೋಡಿದ ಕನ್ಯೆಯನ್ನೇ ಮದುವೆಯಾಗುತ್ತಾನೆ. ಕಿರಣಳ ಹಿಂದಿನ ಕತೆಗೊತ್ತಾಗಿ ಗಂಡ ಆಕೆಯನ್ನು ಬಿಟ್ಟುಬಿಡುತ್ತಾನೆ. ಕತೆಗಾರ ರೋಗಿಯಾಗಿ ಚಿಕಿತ್ಸೆ ಪಡೆಯುತ್ತಿರುವ ಸುದ್ದಿ ತಿಳಿದು ಆಸ್ಪತ್ರೆಗೆ ಬಂದು, ಕಥಾನಾಯಕನ ಮನಸ್ಸಿಗೆ ಚಿಕಿತ್ಸೆ ನೀಡುವ, ಬದುಕುವ ಆಸೆಯನ್ನು ಹುಟ್ಟಿಸುವ ಮಾನವೀಯ ಮೌಲ್ಯವನ್ನು ಮೆರೆಯುವ ಪಾತ್ರವಾಗಿ ಕಂಡುಬರುತ್ತಾಳೆ.

ಚಂದ್ರು

ಪ್ರಜಾಪ್ರಭುತ್ವದಲ್ಲಿ ಒಂದು ಸಾವು ಕತೆಯಲ್ಲಿ ಈ ಪಾತ್ರ ಬರುತ್ತದೆ. ಒಂದು ದಿನ ರಸ್ತೆಯಲ್ಲಿ ವಿಷವನ್ನು ಕುಡಿದು ಒದ್ದಾಡುತ್ತಿದ್ದ ವ್ಯಕ್ತಿಯನ್ನು ಆಸ್ಪತ್ರೆಗೆ ತಂದು ದಾಖಲಿಸುತ್ತಾನೆ. ಕತೆಯಲ್ಲಿ ಮಾನವೀಯ ಮೌಲ್ಯದಿಂದ ಮೆರೆಯುವ ಪಾತ್ರವಾಗಿ ಕಂಡುಬರುತ್ತದೆ.

ಯಮುನಕ್ಕ

ಬೆತ್ತಲೆ ಸ್ವಾಮಿ ಕತೆಯಲ್ಲಿ ಬರುವ ಪಾತ್ರವಿದು. ಊರಿನ ಜನರ ನಾಡಿಮಿಡಿತವನ್ನು ಅರಿತುಕೊಂಡು ಅವರ ಆಶೋತ್ತರಗಳನ್ನು ಆ ಅನೀತಿಯಿಂದ ಪೂರೈಸಿ, ಹಣಗಳಿಸಿ ಗಟ್ಟಿಗೊಳ್ಳುವ ವ್ಯಕ್ತಿಯಾಗಿ ಕಂಡುಬರುತ್ತಾಳೆ. ಕೊನೆಗೆ ಬೆತ್ತಲೆ ಸ್ವಾಮಿಯ ದಯೆಯಿಂದ ಚುನಾವಣೆಯಲ್ಲಿ ನಿಂತು ಗೆಲ್ಲುವ ಯಮುನಕ್ಕ ಯಮುನಾದೇವಿಯಾಗುವ ರೀತಿಯಲ್ಲಿ ಚಿತ್ರಿತಳಾಗಿದ್ದಾಳೆ.

ಕುಬೇರಪ್ಪ

ಕುಬೇರಪ್ಪ ಊರಿನ ಚೇರ್‌ಮನ್ ಆಗಿದ್ದು. ಈತ ವೈಚಾರಿಕತೆಯುಳ್ಳ ವ್ಯಕ್ತಿಯಾಗಿ ಕಂಡುಬರುತ್ತಾನೆ. ಬೆತ್ತಲೆ ಸ್ವಾಮಿಯ ಹೆಸರಿನಲ್ಲಿ ನಡೆಯುವ ಭ್ರಷ್ಟ ವ್ಯಕ್ತಿಗಳ ಕೃತ್ಯಗಳನ್ನು ಖಂಡಿಸುವ ಧೈರ್ಯವಂತನಾಗಿ ಚಿತ್ರಿತನಾಗಿದ್ದಾನೆ.

ಮಾಬವ್ವ

ನೆಲೆ ಕತೆಯಲ್ಲಿ ಬರುವ ಪಾತ್ರವಿದು. ಮಾಬವ್ವಳ ಪಾತ್ರ ನೇರವಾಗಿ ಕತೆಯಲ್ಲಿ ಪಾಲ್ಗೊಳ್ಳುವುದಿಲ್ಲ. ಕತೆಯಲ್ಲಿ ಮಾಬವ್ವ ಶೋಷಣೆಗೆ ಒಳಗಾದವಳಾಗಿ ಕಂಡುಬಂದರೂ ಆಕೆಯಲ್ಲಿ ಮಾನವೀಯ ಮೌಲ್ಯಗಳಿದ್ದವು. ಮಾಬವ್ವ ಸತ್ತಾಗ ಆಕೆಯ ಮಣ್ಣಿಗೆ ಊರಿನ ಸಾಕಷ್ಟು ಜನರು ಬಂದಿದ್ದರು ಇದು ಆಕೆಯ ಜನಪ್ರಿಯ ವ್ಯಕ್ತಿತ್ವಕ್ಕೆ ಸಾಕ್ಷಿಯಾಗುತ್ತದೆ.

ರಂಗಮ್ಮ

ಈಕೆ ನೆಲೆ ಕತೆಯ ನಾಯಕಿ ಎಲೆ ಮಾರುವ ಪಾತ್ರವಾಗಿ ಕಂಡುಬರುತ್ತಾಳೆ. ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣನ್ನು ಯಾವ ರೀತಿಯಾಗಿ ಕಾಣುತ್ತದೆ. ಇದರ ವಿರುದ್ಧ ಪ್ರತಿಭಟಿಸುವ ಧ್ವನಿಯೆತ್ತುವ ಪಾತ್ರವಾಗಿ ಕಂಡುಬರುತ್ತಾಳೆ.

ಸಾಯಬಣ್ಣ

ನೆಲೆ ಕತೆಯಲ್ಲಿ ಬರುವ ಪಾತ್ರವಿದು. ಸಾಯಬಣ್ಣ ತನ್ನ ಹೆಂಡತಿಯನ್ನು ಹಣದ ಆಸೆಗಾಗಿ ಇನ್ನೊಬ್ಬರಿಗೆ ಒಪ್ಪಿಸುವ ನೀಚ ವ್ಯಕ್ತಿಯಾಗಿ ಕತೆಯಲ್ಲಿ ಚಿತ್ರಿತಗೊಂಡಿದ್ದಾನೆ.

ಶಿವನಗೌಡ

ಗುಡಿಯ ನೋಡಿರಣ್ಣಾ ಕತೆಯಲ್ಲಿ ಬರುವ ಪಾತ್ರವಿದು. ರವಿಯು ಚಿಕ್ಕವನಿರುವಾಗಲೇ ತಾಯಿ ತೀರಿಕೊಂಡಿದ್ದರಿಂದ ತಾಯಿಯ ನೆನಪು ಬಾರದಂತೆ ಅವನ ತಂದೆ ಬೆಳೆಸಿದ್ದನು. ಅನ್ಯಜಾತಿಯವಳನ್ನು ಮದುವೆಯಾದ ಕಾರಣ ಪಾರ್ಶ್ವವಾಯು ಬಡಿತದಿಂದ ಆಸ್ಪತ್ರೆಗೆ ಸೇರಿದನು. ರವಿಯ ಹೆಂಡತಿ ಮಾಡಿದ ಸೇವೆ, ಗುಣವನ್ನು ಮೆಚ್ಚಿ, ತನ್ನ ಸೊಸೆ, ರವಿಯಿಂದ ದೂರವಿದ್ದಕ್ಕೆ ಪಶ್ಚಾತ್ತಾಪ ಪಡುವ ಪಾತ್ರವಾಗಿ ಮೂಡಿ ಬಂದಿದೆ.

ರಾಧಾ

ಈ ಪಾತ್ರ ಎಂಥಾ ಮೋಜಿನ ಕುದುರೆ ಕತೆಯಲ್ಲಿ ಬರುತ್ತದೆ. ಕಥಾನಾಯಕ ವಿಜಯನನ್ನು ಮದುವೆಯಾಗಿ ತನ್ನ ಗಂಡನಿಂದ ಮಕ್ಕಳಾಗುವುದಿಲ್ಲವೆಂದು ತಿಳಿದು ಅನ್ಯಮಾರ್ಗವನ್ನು ಹಿಡಿದು ಮಗುವನ್ನು ಪಡೆಯುವ ಪಾತ್ರವಾಗಿ ಕಂಡುಬರುತ್ತದೆ.

ಬಿಂದಿಯಾ

ತಮಂಥ ಕಿರಿದೆನ್ನ ಬಹುದೇ ಅಯ್ಯ ಕತೆಯಲ್ಲಿ ಬರುವ ಪಾತ್ರವಿದು. ಬಿಂದಿಯಾ ಅರ್ಜುನನ ಹೆಂಡತಿ ತನಗೆ ಮಕ್ಕಳಾಗುವುದಿಲ್ಲವೆಂದು ತಿಳಿದಿದ್ದರೂ ಮಕ್ಕಳ ಆಸೆಯಿಂದ ತೀರ್ಥಯಾತ್ರೆಗೆ ಬಂದ ಕಥಾನಾಯಕನನ್ನು ಆಕಸ್ಮಿಕವಾಗಿ ಸೇರುತ್ತಾಳೆ.

೫.೪. ಭಾಷೆ ಮತ್ತು ಶೈಲಿ

ಭಾಷೆಯು ಭಾವನೆಗಳನ್ನು ಅಭಿವ್ಯಕ್ತಗೊಳಿಸುವ ಒಂದು ಮಾಧ್ಯಮವಾಗಿದೆ. ಒಂದು ಸಾಹಿತ್ಯ ಕೃತಿಯು ಪ್ರಕಟವಾಗುವುದು ಭಾಷೆಯ ಮೂಲಕವೇ ಆಗಿದೆ. ಭಾಷೆಯಿಲ್ಲದಿದ್ದರೆ ಇಂದು ನಮಗೆ ಸಾಹಿತ್ಯ ಕೃತಿಗಳು ಲಭ್ಯವಿರುತ್ತಿರಲಿಲ್ಲ. ಹೀಗೆ ಪ್ರತಿಯೊಂದು ಕ್ಷೇತ್ರದಲ್ಲಿಯೂ ಕೂಡಾ ಭಾಷೆಯು ತುಂಬಾ ಗಮನಾರ್ಹವಾದ ಪಾತ್ರವನ್ನು ನಿರ್ವಹಿಸುತ್ತದೆ.

ಯಾವುದೇ ಒಂದು ಸಾಹಿತ್ಯ ಕೃತಿಯಲ್ಲಿ ಭಾಷೆಯನ್ನು ಹೇಗೆ ಬಳಸಿಕೊಂಡಿದ್ದಾರೆ ಎಂಬುದನ್ನು ತಿಳಿಯುವುದೇ ಶೈಲಿಯಾಗಿದೆ. ಇದು ಬರಹಗಾರನ ಶಬ್ದಶಕ್ತಿ, ಕಲ್ಪನಾಶಕ್ತಿ, ಬುದ್ಧಿಶಕ್ತಿಯನ್ನು ಅವಲಂಬಿಸಿರುತ್ತದೆ. ಒಬ್ಬ ಕತೆಗಾರ ಅಥವಾ ಕವಿ ತನಗೆ ಕಂಡುಬಂದ ವಸ್ತುಗಳನ್ನು ತನ್ನದೇ ಆದ ರೀತಿಯಲ್ಲಿ ಭಾಷೆಯನ್ನು ಬಳಸಿ ಬರೆಯುತ್ತಾನೆ. ಅಂತಹ ಬರವಣಿಗೆಯಲ್ಲಿ ವಾಕ್ಯಗಳ ರಚನೆ, ಪದಗಳ ಬಳಕೆ, ಗಾದೆ, ನಾಣ್ಣುಡಿಗಳು ಹೇಗೆ ಬಳಕೆಯಾಗಿವೆ ಎಂಬುದನ್ನು ತಿಳಿಯುವುದೇ ಶೈಲಿಯಾಗಿದೆ.

ಒಬ್ಬ ಲೇಖಕ ಅಥವಾ ಸಾಹಿತಿ ಪ್ರಸಿದ್ಧಿಯಾಗುವುದು ಅವನು ಬರೆದ ವಸ್ತು, ಶೈಲಿ, ಆಧಾರದ ಮೇಲೆ ಅವಲಂಭಿಸಿರುತ್ತದೆ. ರಾಜಶೇಖರ ನೀರಮಾನ್ವಿಯವರು ತಮ್ಮ ಅನುಭವಗಳನ್ನು ಅಭಿವ್ಯಕ್ತಪಡಿಸುವಲ್ಲಿ ಶಿಷ್ಟ ಭಾಷೆಗೆ ಅಂಟಿಕೊಳ್ಳದೇ, ಪ್ರಾದೇಶಿಕ ಭಾಷೆಯಲ್ಲಿ ಅಭಿವ್ಯಕ್ತಪಡಿಸಿ ತನ್ನದೇ ಆದ ವಿಶೇಷತೆಯನ್ನು ಮೆರೆದಿದ್ದಾರೆ. ಅಲ್ಲದೇ ಗ್ರಾಮೀಣ ಭಾಷೆಯ ಸೊಗಡನ್ನು ಎತ್ತಿಹಿಡಿದಿದ್ದಾರೆ. ಗ್ರಾಮೀಣ ಬದುಕಿನ ಹಲವಾರು ಚಿತ್ರಣಗಳನ್ನು ಯಥಾವತ್ತಾಗಿ ಆಡು ಮಾತಿನ ಶೈಲಿಯಲ್ಲಿ ಕಟ್ಟಿಕೊಡುವಂತಹ ಕಲೆಯನ್ನು ಇವರು ಅರಗಿಸಿಕೊಂಡಿದ್ದಾರೆ.

ವೃತ್ತ ಕತೆಯು ಗ್ರಾಮೀಣ ಜನರ ಜೀವನದೊಂದಿಗೆ ಅಲ್ಲಿನ ಭಾಷೆಯ ಸೊಗಡು ಮೂಡಿದೆ. "ಕಪಗಲ್ಲು ಹೊಲಕ ಕೂಲೇರಿಗೆ ಹೇಳಿದೆ, ಹೇಳಿನೆಪ ಬಂದಿಪ್ಪತ್ತು ಆಳು ಬರತಾರೇನಪ"[10] "ಹೊಲದಾಗ ದನ ಬಿದ್ದೈತಲ್ಲಪ್ಪ ಹೊಡದರ ಬರ್ತೇನಿ"[11] ಎನ್ನುವ ರಾಯಚೂರಿನ ಭಾಷೆ ಮೇಳೈಸಿಕೊಂಡಿದೆ.

ಭೂತ ಕತೆಯಲ್ಲಿ ಕೂಡಾ ಗ್ರಾಮೀಣ ಭಾಷೆಯ ಸೊಗಡು ಇರುವುದನ್ನು ಕಾಣಬಹುದು. "ನಿಮ್ಮ ತಂದೆಯೋರ್ಕಿಂತ ದೊಡ್ಡೋರು ಬಬ್ರಿದ್ರಂತ, ಅವ್ರು ಬಂದ್ಸರ್ತಿ ಬ್ಯಾಟಿ ಆಡಿ ಹೊಡೆದ ಚಿರ್ತನ್ನ ಮ್ಯಾಳೂರು ಗೌಡಿತಿ ನೀಲಮ್ಮ ತಾನs ಹೊಡದೀನಿ ಅಂತ ಸಾಧಿಸಿದ್ಲು"[12] ಇಲ್ಲೆಲ್ಲಾ ಗ್ರಾಮೀಣ ಭಾಷೆ ಕಂಡುಬರುತ್ತದೆ.

ಹಂಗಿನರಮನೆಯ ಹೊರಗೆ ಮತ್ತು ಬಿಸಿಲುಗುದುರೆ ಕತೆಯಲ್ಲಿ ಆಡುನುಡಿಗಿಂತ ಹೆಚ್ಚಾಗಿ ಶಿಷ್ಟ ಭಾಷೆ ಮೂಡಿಬಂದಿರುವುದನ್ನು ಕಾಣಬಹುದು. ದುರಸ್ತಿ ಕತೆಯ ಆರಂಭ ಗ್ರಾಮೀಣ ಭಾಷೆಯ ಸೊಗಡಿನಿಂದ ಪ್ರಾರಂಭವಾಗುತ್ತದೆ. "ಇವನಮ್ಮನ್ನಾಡ ಪ್ರಿವೀಲು ಮುಂಜಾಲಿಂದ ಗೋಳಾಡಸ್ತದ"[೪] ಗಂಗಾವತಿಲಿಂದ: ಗಾಜಗಾರ ಪ್ಯಾಟಿಗೆ ಬರ್ತಿಹ್ಯಾ ಏನ್ಮೊಡಬೇಕು?[೫] "ನೀನು ಮನೆ ಬುಟ್ಟು ಬಂದ್ರೂ ನಿನ್ ಪೀಡ ಆಕಿನ್ನ ಬುಡ್ಲಿಲ್ಲ."[೬] ಈ ಕತೆಯಲ್ಲಿ ಭಾಷೆಯು ಈ ರೀತಿಯಾಗಿ ಬಳಕೆಯಾಗಿದೆ.

'ನೆಲೆ' ಕತೆಯಲ್ಲಿ "ಎಲ್ಲಿದು ಬಿಡು ಖೋಡಿ, ಅದರ ಮಾರಿ ನೋಡಿ ತಿಂಗಳಾಯ್ತು"[೭] "ಏನೋ ಬಿಡವ್ವ ನಿನಕೂಡ ಮಾತಾಡೋದೆ ತಿಪ್ಲ"[೮] ಎನ್ನುವ ಮಾತುಗಳು ರಾಯಚೂರಿನ ಭಾಷೆಯನ್ನು ಪ್ರತಿಧ್ವನಿಸುತ್ತದೆ.

ಕರ್ಪೂರದ ಕಾಯದಲ್ಲಿ ಕಥಾಸಂಕಲನದಲ್ಲಿಯ ಇನ್ನಿತರ ಕತೆಗಳಾದ ಗುಡಿಯ ನೋಡಿರಣ್ಣಾ, ಕರ್ಪೂರದ ಕಾಯದಲ್ಲಿ, ಪ್ರಜಾಪ್ರಭುತ್ವದಲ್ಲಿ ಒಂದು ಸಾವು ಕತೆಗಳಲ್ಲಿ ಶಿಷ್ಟ ಭಾಷೆಯ ಜೊತೆಗೆ ಆಡು ಮಾತಿನ ಮಿಶ್ರಣ ಕಂಡುಬರುತ್ತದೆ. ತಮಂಧಕಿರಿದೆನ್ನಬಹುದೇ ಅಯ್ಯಾ ಸಂಪೂರ್ಣ ಭಿನ್ನ ಶೈಲಿಯ ಕತೆ. ಒಮ್ಮೆ ಓದಿದರೆ ಅರ್ಥವಾಗದಂತಿರುವ ಕತೆ, ಶಿಷ್ಟ ಭಾಷೆಯಲ್ಲಿ ರಚನೆಯಾಗಿದೆ.

ಕತೆಯ ಸೌಂದರ್ಯ ಹೆಚ್ಚಿಸಲು ಕತೆಗಳಲ್ಲಿ ಗಾದೆ ಮಾತುಗಳು ಕೂಡಾ ಬಳಕೆಗೊಂಡಿವೆ. "ಹೊಯ್ದ ಹೊಯ್ಗುಳು ಕೈಯ ಮೇಲ್"[೯] (ವೃತ್ತ), "ಹೆಣ್ಣಿನ ನೆಲೆ ಕುದುರೆ ನೆಲೆ ಸಿಗೋದಿಲ್ಲ"[೧೦] (ಹಂಗಿನರಮನೆಯ ಹೊರಗೆ), "ತೆಗ್ಗಿಗೆ ಬಿದ್ರೆ ಆಳಿಗೊಂದು ಕಲ್ಲಂದಗ"[೧೧] (ದುರಸ್ತಿ), "ಕೋತಿಗೆ ಹೆಂಡ ಕುಡ್ಸಿದಂಗ"[೧೨] ಈ ಮೊದಲಾದ ಗಾದೆ ಮಾತುಗಳು ಕತೆಯಲ್ಲಿ ಬಳಕೆಗೊಂಡಿವೆ. ಗಾದೆಗಳಲ್ಲದೇ ಹಡಿಬಿಟ್ಟಿ ಸೂಳೆಮಕ್ಳು, ತಿಕ್ಕಪುಕ್ಕವ, ನನ್ನಾಟಗಳು, ಬಾರಲಬಡಿಯಾ, ಭಾಡ್ಯಾ, ಮಿಂಡ್ರುಗುಟ್ಟಿದ ಸೂಳೆ ಮುದಿ ಮೂಳ ಇತ್ಯಾದಿ ಬೈಗುಳಗಳ ಪದಗಳು ಕತೆಯಲ್ಲಿ ಬಳಕೆಗೊಂಡಿವೆ. ಹೈದ್ರಬಾದ-ಕರ್ನಾಟಕ ಬಹುಕಾಲ ನಿಜಾಮನ ಆಳ್ವಿಕೆಗೆ ಒಳಪಟ್ಟು ಉರ್ದು ಭಾಷೆ ಪ್ರಬಲವಾಗಿ ಪಸರಿಸಿದ್ದ ಕಾರಣದಿಂದ ಕತೆಯಲ್ಲಿ ಕುಚ್ ನೈಸಾಬ್, ಜಮಾನಾ ಕಿತ್ನಾ ಖರಾಬ್ ಹೋಗಯಾ, ಖಬರ್‌ಹಾರ್ ಇಂತಹ ಪದಗಳು ಬಳಕೆಗೊಂಡಿರುವುದನ್ನು ಕಾಣಬಹುದು.

ಹೀಗೆ ತಾವು ಕಂಡ ವಸ್ತುಗಳನ್ನು ತಮ್ಮದೇ ಆದ ಆಡುನುಡಿಯ ಶೈಲಿಯಲ್ಲಿ ರಾಜಶೇಖರ ನೀರಮಾನ್ವಿಯವರು ಕತೆಗಳನ್ನು ಕಟ್ಟುವಲ್ಲಿ ಯಶಸ್ವಿಯಾಗಿದ್ದಾರೆ. ತಮ್ಮದೇ ಆದ ಗ್ರಾಮೀಣ ಭಾಷೆಯ ಶೈಲಿಯಿಂದ ಕತೆಗಳನ್ನು ಕಟ್ಟುವ ಇವರು ಕನ್ನಡ ಕಥಾ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದ್ದಾರೆ.

೫.೫. ತಂತ್ರ

ಒಂದು ಸಾಹಿತ್ಯ ಕೃತಿಯ ನಿರ್ಮಾಣದಲ್ಲಿ ವಸ್ತು, ಭಾಷೆ, ಶೈಲಿ ಯಾವ ರೀತಿ ಮಹತ್ವದ ಪಾತ್ರವನ್ನು ವಹಿಸುತ್ತವೆಯೋ, ತಂತ್ರ ಕೂಡಾ ಅಷ್ಟೇ ಮಹತ್ವದ್ದಾಗಿದೆ. ತಂತ್ರವೆನ್ನುವುದು ಒಂದು ಸಾಹಿತ್ಯ ಕೃತಿಯನ್ನು ಹೇಗೆ ಅಭಿವ್ಯಕ್ತಿ ಮಾಡಬೇಕು ಎನ್ನುವುದನ್ನು ತಿಳಿಸುತ್ತದೆ. ಇಲ್ಲಿ ಕೃತಿಯ ಆರಂಭ, ಕೃತಿಯ ಮುಕ್ತಾಯದ ವಿಧಾನವೇ ತಂತ್ರವಾಗಿದೆ.

ಲೇಖಕನೊಬ್ಬ ತನ್ನ ಜೀವನಾನುಭವಗಳ ಹಿನ್ನಲೆಯಲ್ಲಿ ಕಥಾವಸ್ತುವನ್ನು ಕಟ್ಟಿಕೊಡುವ ಒಂದು ವಿಧಾನವೇ ತಂತ್ರವಾಗಿದೆ. "ಎಡ್ಗರ್ ಅಲೆನ್ ಪೋ" ಹೇಳುವಂತೆ ಆರಂಭ ಕುತೂಹಲವನ್ನು ಕಾಯ್ದುಕೊಂಡು ಹೋಗುವ ಮಧ್ಯ ಅಂತ್ಯಗಳನ್ನೊಳಗೊಂಡ ಕಥಾವಳಿಗಳನ್ನು ಅದು ಹೊಂದಿರತಕ್ಕದ್ದು. ಇಲ್ಲಿ ಲೇಖಕ ಯಾವ ವಸ್ತುವನ್ನು ಇಟ್ಟುಕೊಂಡು ಕತೆಯನ್ನು ಹೆಣೆದಿದ್ದಾನೆ, ಯಾವ ಆಶಯವನ್ನು ವ್ಯಕ್ತಪಡಿಸಲು ಮುಂದಾಗಿದ್ದಾನೆ ಎನ್ನುವುದಕ್ಕೆ ಮೂರ್ತ ರೂಪವನ್ನು ನೀಡುವ ಅಭಿವ್ಯಕ್ತಿಯೇ ತಂತ್ರವಾಗಿದೆ. ರಾಜಶೇಖರ ನೀರಮಾನ್ವಿಯವರು ಹಲವು ತಂತ್ರಗಳನ್ನು ಬಳಸಿಕೊಂಡಿದ್ದಾರೆ. ನಿರೂಪಣಾತಂತ್ರ, ವರ್ಣನಾ ತಂತ್ರ, ತಿರುಗುನೋಟ ತಂತ್ರ ಪ್ರಜ್ಞಾ ಪ್ರವಾಹ ತಂತ್ರ, ಮೊದಲಾದವುಗಳನ್ನು ನೀರಮಾನ್ವಿಯವರು ಬಳಸಿಕೊಂಡಿದ್ದಾರೆ.

ಹಂಗಿನರಮನೆಯ ಹೊರಗೆ ಕಥಾಸಂಕಲನದ ವೃತ್ತಕತೆಯಲ್ಲಿ ತಿರುಗುನೋಟ ತಂತ್ರದ ಬಳಕೆಯಿದೆ. ಈ ಕತೆಯ ನಾಯಕ ತನ್ನ ಗತ ಜೀವನದ ನೆನಪುಗಳನ್ನು ಇಳಿ ವಯಸ್ಸಿನಲ್ಲಿ ಸ್ಮರಣೆಗೆ ತಂದುಕೊಳ್ಳುವಲ್ಲಿ ತಿರುಗುನೋಟ ತಂತ್ರ ಬಳಕೆಗೊಂಡಿದೆ. ಭೂತ ಕತೆಯಲ್ಲಿ ಕಥಾ ನಾಯಕ ರಮೇಶನ ಮನಸ್ಸಿನಲ್ಲಿ ಹುದುಗಿರುವ ಭಾವನೆಗಳನ್ನು ಸುಪ್ತವಾಗಿ ಹೊರಗೆಡವಲು ಪ್ರಯತ್ನಿಸಿದ್ದಾರೆ. ದುರಸ್ತಿ ಕತೆಯಲ್ಲಿ ತನ್ನನ್ನು ತಾನೇ ಅವಲೋಕನ ಮಾಡಿಕೊಳ್ಳುವ ತಂತ್ರವನ್ನು ಬಳಸಿದ್ದಾರೆ. 'ಹಂಗಿನರಮನೆಯ ಹೊರಗೆ' ಕತೆಯಲ್ಲಿ ಕಥಾನಾಯಕನ ಮನಸ್ಸಿನ ಅಂತರಾಳದಲ್ಲಿ ಬಚ್ಚಿಟ್ಟುಕೊಂಡಿರುವ ಭಾವನೆಗಳನ್ನು ಹೇಗೆ ಅಭಿವ್ಯಕ್ತಿಗೊಳಿಸುತ್ತಾನೆ ಎಂಬ ತಂತ್ರವನ್ನು ಬಳಸಿರುವುದರಿಂದ ಕೆಲವೊಮ್ಮೆ ಕತೆಯು ಸರಳವಾಗಿ ಅರ್ಥವಾಗುವುದಿಲ್ಲ.

ತಮಂಧ ಕಿರಿದೆನ್ನಬಹುದೇ ಅಯ್ಯಾ ಕತೆಯಲ್ಲಿ ಕತೆಗಾರರೇ ಕಥಾನಾಯಕನಾಗಿ ಕತೆಯನ್ನು ನಿರೂಪಿಸುತ್ತಾ ಹೋಗುತ್ತಾರೆ.

ಬೆತ್ತಲೆಸ್ವಾಮಿ, ನೆಲೆ, ಪ್ರಜಾಪ್ರಭುತ್ವದಲ್ಲಿಸಾವು ಗಂಭೀರ ವಸ್ತುಗಳಾಗಿದ್ದರಿಂದ ವಿಶಿಷ್ಟ ರೀತಿಯಲ್ಲಿ ಬೆಳವಣಿಗೆ ಹೊಂದುತ್ತಾ ತಿರುಗು ನೋಟ, ಸಂಭಾಷಣೆ, ನಿರೂಪಣೆ ಹೀಗೆಯೇ ಕತೆಗಳು ಸಾಗುತ್ತವೆ.

ಕತೆಗಾರರು ತಮ್ಮ ಕತೆಗಳ ಯಶಸ್ಸಿಗಾಗಿ ಕೆಲವು ಕತೆಗಳಲ್ಲಿ ಸಂಕೇತಗಳನ್ನು ಬಳಸಿಕೊಂಡಿದ್ದಾರೆ. ವೃತ್ತದಲ್ಲಿ ನಾಯಿ, ಹಂಗಿನರಮನೆಯ ಹೊರಗೆ ಕತೆಯಲ್ಲಿ ಶಸ್ತ್ರಚಿಕಿತ್ಸೆ, ದುರಸ್ತಿಯಲ್ಲಿ ಫ್ರಿವಿಲ್ ಹೀಗೆ ಹಲವಾರು ವಸ್ತುಗಳನ್ನು ಸಾಂಕೇತಿಕವಾಗಿ ಬಳಸಿಕೊಂಡು ವಿಶಿಷ್ಟ ರೀತಿಯಲ್ಲಿ ಕತೆಗಳನ್ನು ಕಟ್ಟಿಕೊಟ್ಟಿದ್ದಾರೆ.

ಉಪಸಂಹಾರ

ರಾಜಶೇಖರ ನೀರಮಾನ್ವಿಯವರು ಕನ್ನಡದ ಅಪರೂಪದ ಕತೆಗಾರರಲ್ಲಿ ಒಬ್ಬರಾಗಿದ್ದಾರೆ. ಸಮಾಜದಲ್ಲಿ ನಡೆಯುವಂತಹ ಅನ್ಯಾಯ, ಅತ್ಯಾಚಾರ, ಮಾನವೀಯ ಸಂಬಂಧಗಳು, ಮಾನವೀಯ ಮೌಲ್ಯಗಳು, ಕೌಟುಂಬಿಕ ಸಂಬಂಧಗಳು ಈ ಮುಂತಾದ ಅಂಶಗಳನ್ನು ತಮ್ಮ ಕತೆಯಲ್ಲಿ ಗ್ರಾಮ್ಯ ಭಾಷೆಯಲ್ಲಿ ಎಲ್ಲಾರಿಗು ತಿಳಿಯುವಂತೆ ಬರೆಯುವುದು ಇವರ ಕತೆಗಳ ವೈಶಿಷ್ಟ್ಯವಾಗಿದೆ.

ಗ್ರಾಮೀಣ ಜೀವನದ ಪರಿಸರವನ್ನು, ನಗರಜೀವನದ ಪರಿಸರವನ್ನು ಕುರಿತಂತೆ ತಮ್ಮ ಕತೆಗಳಲ್ಲಿ ತಮ್ಮದೇ ಆದ ಭಾಷೆ, ಶೈಲಿ, ತಂತ್ರಗಳಿಂದ ಕತೆಗಳನ್ನು ಹೆಣೆದು, ನವ್ಯಕಥಾ ಸಾಹಿತ್ಯದಲ್ಲಿ ತಮ್ಮ ಸ್ಥಾನವನ್ನು ಗಟ್ಟಿಗೊಳಿಸಿಕೊಂಡು ಇಂದಿಗೂ ಚಿರಸ್ಥಾಯಿಯಾಗಿ ಉಳಿದಿದ್ದಾರೆ.

ಅಡಿಟಿಪ್ಪಣಿ

೦೧. ರಾಜಶೇಖರ ನೀರಮಾನ್ವಿ, ಹಂಗಿನರಮನೆಯ ಹೊರಗೆ, ೧೯೯೦, ಪುಟ-೬

೦೨. ಅದೇ, ಪುಟ-೧೫

೦೩. ಅದೇ, ಪುಟ-೩೩

೦೪. ಅದೇ, ಪುಟ-೭೪

೦೫. ಅದೇ, ಪುಟ-

೦೬. ಅದೇ, ಪುಟ-೭೫

೦೭. ಅದೇ, ಪುಟ-೬೯

೦೮. ಅದೇ, ಪುಟ-೭೦

೦೯. ಅದೇ, ಪುಟ-೨೮

೧೦. ಅದೇ, ಪುಟ-೬೮

೧೧. ಅದೇ, ಪುಟ-೮೪

೧೨. ಅದೇ, ಪುಟ-೧೦೬

ಅಧ್ಯಾಯ - ಆರು

ಅಧ್ಯಯನದ ಫಲಿತಗಳು

ಅಧ್ಯಾಯ - ಆರು

ಅಧ್ಯಯನದ ಫಲಿತಗಳು

ರಾಜಶೇಖರ ನೀರಮಾನ್ವಿಯವರು ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ನೀರಮಾನ್ವಿಯವರು. ಇವರು ಹೈದ್ರಾಬಾದ ಕರ್ನಾಟಕ ಭಾಗದ ಪ್ರಮುಖ ಕತೆಗಾರರಾಗಿ, ಉತ್ತರ ಕರ್ನಾಟಕದ ಸಾಂಸ್ಕೃತಿಕ ಪ್ರತಿನಿಧಿಯಾಗಿ ಕನ್ನಡ ಕಥಾ ಸಾಹಿತ್ಯಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ನವ್ಯದ ಆರಂಭ ಹಾಗೂ ದಲಿತ ಬಂಡಾಯದ ಸಂದರ್ಭದಲ್ಲಿ ಮೂಡಿ ಬಂದ ಅತ್ಯುತ್ತಮ ಕತೆಗಾರರು. ಇವರು ಕನ್ನಡ ಕಥಾ ಸಾಹಿತ್ಯಕ್ಕೆ ಹಂಗಿನರಮನೆಯ ಹೊರಗೆ ೧೯೭೮ ಮತ್ತು ಕರ್ಪೂರದ ಕಾಯದಲ್ಲಿ (೧೯೯೦) ಎಂಬ ಕಥಾ ಸಂಕಲನಗಳನ್ನು ಕೊಡುಗೆಯಾಗಿ ನೀಡಿದ್ದಾರೆ. ಇವರ ಕತೆಗಳು ನವ್ಯದ ಪ್ರಭಾವಕ್ಕೆ ಒಳಗಾಗಿದ್ದರೂ ಕೂಡಾ ಬಂಡಾಯದ ವಸ್ತುವನ್ನಿಟ್ಟುಕೊಂಡು ರಚನೆಯಾಗಿವೆ. ಇವರ ಕತೆಗಳಲ್ಲಿ ಕೆಲವು ವ್ಯಕ್ತಿ ಪ್ರಜ್ಞೆಯಲ್ಲಿಯೇ ಸಾಗಿದರೆ, ಕೆಲವು ಕತೆಗಳು ಸಮಾಜ ಕೇಂದ್ರಿತ ಪ್ರಜ್ಞೆ ನೆಲೆಯಲ್ಲಿ ಸಾಗುವುದನ್ನು ಕಾಣಬಹುದಾಗಿದೆ. ಇವರ ಕತೆಗಳಲ್ಲಿ ರಾಯಚೂರಿನ ಗ್ರಾಮೀಣ ಪರಿಸರ, ದುಡಿಯುವ ವರ್ಗದ ನೋವುಗಳು, ಹೆಣ್ಣಿನ ಶೋಷಣೆ, ಭೂ ಮಾಲೀಕರ ಶೋಷಣೆ, ಮೂಢನಂಬಿಕೆಗಳು, ವ್ಯವಸ್ಥೆಯ ಕ್ರೂರತೆಗಳು, ಅನ್ಯಾಯ, ದೌರ್ಜನ್ಯ, ಅಜ್ಞಾನ ಈ ಮುಂತಾದ ಅಂಶಗಳನ್ನು ಕುರಿತು ಚರ್ಚಿಸಿದ್ದಾರೆ. ಈ ಹಿನ್ನಲೆಯಲ್ಲಿ ಅಧ್ಯಯನದ ಫಲಿತಗಳನ್ನು ಈ ಕೆಳಗೆ ನೀಡಲಾಗಿದೆ.

* ನೀರಮಾನ್ವಿ ಕತೆಗಳಲ್ಲಿ "ಕಲ್ಪನೆ ಮತ್ತು ವಾಸ್ತವಿಕ ಚಿತ್ರಣ" ಎಂಬ ಅಂಶದ ಆಧಾರದ ಮೇಲೆ ನೀರಮಾನ್ವಿ ಕತೆಗಳನ್ನು ಗ್ರಹಿಸಿರುವುದನ್ನು ಕಾಣಬಹುದಾಗಿದೆ. ಕತೆಗಾರನು ಹೇಳುವಂತಹ ಜೀವಾನಾನುಭವಗಳು ಓದುಗರ ಕೈಗೆ ಸಿಕ್ಕಾಗಲೇ ಸಾರ್ಥಕತೆಯನ್ನು ಪಡೆದುಕೊಳ್ಳುತ್ತವೆ. ಇಂತಹ ಅನುಭವಗಳು ಎಷ್ಟೇ ನೈಜವಾಗಿ ವಾಸ್ತವವಾಗಿದ್ದರೂ ಕೂಡಾ ಕಲ್ಪನೆ ಮತ್ತು ವಾಸ್ತವಾಂಶಗಳಿಂದ ಕೂಡಿರುತ್ತವೆ. ನೀರಮಾನ್ವಿಯವರ ಕತೆಯ ಬೇರುಗಳು ವಾಸ್ತವದಲ್ಲೇ ಇದ್ದರೂ, ಅವು ಪಲ್ಲವಿಸುವದು ಕಲ್ಪನೆಯಲ್ಲಿ ಎಂಬಂತಹ ಅಂಶವನ್ನು ಗ್ರಹಿಸಬಹುದು.

[illegible]

[illegible]

[illegible]

* ನೀರಮಾನ್ವಿಯವರ ಕತೆಗಳಲ್ಲಿ "ವ್ಯಕ್ತಿ ತನ್ನತನದ ಹುಡುಕಾಟ ಎಂಬಂತಹ ಅಸ್ತಿತ್ವವಾದದ ಹಿನ್ನಲೆಯಲ್ಲಿ ಚರ್ಚೆಯಾಗಿರುವುದನ್ನು ಗಮನಿಸಬಹುದು. ವೃತ್ತ ಕತೆಯ ಶಂಕರಪ್ಪಗೌಡ, ದುರಸ್ತಿ ಕತೆಯ ತಿಮ್ಮ, ಭೂತಕತೆಯ ರಮೇಶ, ಹಂಗಿನರಮನೆಯ ಹೊರಗೆ ಕಥಾನಾಯಕ ರೋಗಿ, ನೆಲೆ ಕತೆಯ ರಂಗಮ್ಮ ಈ ಎಲ್ಲಾ ಪಾತ್ರಗಳು ಒಂದಿಲ್ಲೊಂದು ರೀತಿಯಲ್ಲಿ ತನ್ನ ಅಸ್ತಿತ್ವವನ್ನು ಕಂಡುಕೊಳ್ಳಲು ಹೇಗೆ ಹೋರಾಟ ಮಾಡುತ್ತವೆ ಎಂಬಂತಹ ಅಂಶವನ್ನು ತಿಳಿಯಬಹುದು.

* ರಾಜಶೇಖರ ನೀರಮಾನ್ವಿ ಹಾಗೂ ಅವರ ಕತೆಗಳು ಈ ರೀತಿಯಾಗಿ ಒಟ್ಟು ಅವರ ಕೃತಿಗಳನ್ನು ವಿವರವಾಗಿ ಚರ್ಚಿಸಿರುವದನ್ನು ಕಾಣುತ್ತೇವೆ. ಕತೆಗಳಲ್ಲಿನ ಜೀವಂತಿಕೆಯ ಸೂಕ್ಷ್ಮ ಪರಿಚಯ ಕೂಡಾ ಮಾಡಿಕೊಡಲಾಗಿದೆ. ಒಟ್ಟಾರೆಯಾಗಿ ತಮ್ಮ ಕಾವ್ಯಮಯ ಶೈಲಿಯಿಂದ ರಾಯಚೂರಿನ ಗ್ರಾಮೀಣ ಭಾಷೆಯ ಸೊಗಡಿನಿಂದ, ನಿರೂಪಣೆಯ ಸೊಗಸಿನಿಂದ ಇವರ ಕತೆಗಳನ್ನು ಮತ್ತೆ ಓದುವಂತೆ ಚರ್ಚಿಸಿರುವದನ್ನು ಕಾಣಬಹುದು.

* ನೀರಮಾನ್ವಿಯವರ ಕತೆಗಳ ಆಳ ಆಂತರ್ಯಕ್ಕೆ ಇಳಿದು ನೋಡಿದಾಗ ಒಂಟಿತನ, ಹತಾಶೆ, ನೋವು, ಅಸ್ತಿತ್ವದ ಹುಡುಕಾಟ, ವ್ಯಕ್ತಿಗತ ಶೋಧನೆ, ಪಾಪಪ್ರಜ್ಞೆ, ಅಗಲಿಕೆ ಇಂತಹ ಅಂಶಗಳು ಕಂಡುಬರುತ್ತವೆ. ಈ ಎಲ್ಲಾ ಅಂಶಗಳಿಂದ ನವ್ಯ ಕಥಾ ಸಾಹಿತ್ಯ ಕೂಡಾ ಹೊರತಾಗಿ ರಚನೆಯಾಗಿಲ್ಲ ಅದುದರಿಂದ ನೀರಮಾನ್ವಿಯವರ ಹಂಗಿನರಮನೆಯ ಹೊರಗೆ" "ಕರ್ಪೂರದ ಕಾಯದಲ್ಲಿ" ಈ ಎರಡು ಕಥಾ ಸಂಕಲನಗಳಲ್ಲಿ ನವ್ಯ ಕಥಾ ಸಾಹಿತ್ಯದ ಹಲವಾರು ಅಂಶಗಳನ್ನು ವಿಸ್ತರಿಸಿರುವುದನ್ನು ಕಾಣಬಹುದು. ಆದುದರಿಂದಾಗಿಯೇ ನೀರಮಾನ್ವಿಯವರು ನವ್ಯ ಕಥಾ ಸಾಹಿತ್ಯದಲ್ಲಿ ತಮ್ಮದೇ ಆದ ಸ್ಥಾನ ಪಡೆದುಕೊಂಡಿರುವದನ್ನು ಅಧ್ಯಯನದ ಫಲಿತಗಳಲ್ಲಿ ಗುರುತಿಸಬಹುದು.

* ರಾಜಶೇಖರ ನೀರಮಾನ್ವಿಯವರು ಗ್ರಾಮೀಣ ಪರಿಸರದಿಂದ ಬಂದವರಾಗಿದ್ದರಿಂದ ಗ್ರಾಮೀಣ ಪರಿಸರದಲ್ಲಿ ಕಂಡಂತಹ ಘಟನೆಗಳು, ಅನ್ಯಾಯ ಅಕ್ರಮಗಳು, ಮೂಢನಂಬಿಕೆಗಳು ಮೊದಲಾದವುಗಳನ್ನು ಚಿತ್ರಿಸುವದರಲ್ಲಿ ತಮ್ಮದೇ ಆದ ಪ್ರಾವೀಣ್ಯತೆಯನ್ನು ಸಾಧಿಸಿರುವಂತೆ, ನಗರ ಜೀವನದ ಚಿತ್ರಣವನ್ನು ಕಟ್ಟಿಕೊಡುವಲ್ಲಿ ಯಶಸ್ವಿಯಾಗಿದ್ದಾರೆ. ಎಂಬಂತಹ ಅಂಶವನ್ನು ಅಧ್ಯಯನದ ಫಲಿತಗಳಲ್ಲಿ ಗುರುತಿಸಬಹುದು.

* ನೀರಮಾನ್ವಿಯವರು ತಮ್ಮ ಕತೆಗಳಲ್ಲಿ ದಯೆ, ಅನುಕಂಪ, ಮಾನವೀಯ ಮೌಲ್ಯಗಳು, ಪ್ರೀತಿ, ವಿಶ್ವಾಸ ನಂಬಿಕೆಗಳಂತಹ ಅಂಶಗಳನ್ನು ಕತೆಗಳಲ್ಲಿ ಕಾಣಿಸಿದ್ದಾರೆ.

* ನೀರಮಾನ್ವಿಯವರು ತಮ್ಮ ಕತೆಗಳಲ್ಲಿ ಸಮಾಜದ ಕೊಳಕನ್ನು, ರಾಜಕೀಯ ಬೆಳವಣಿಗೆಯ ಕ್ರೂರ ಮುಖಗಳನ್ನು, ಅನ್ಯಾಯ ದೌರ್ಜನ್ಯಗಳನ್ನು, ಶೋಷಣೆಗಳನ್ನು ಒಂದಲ್ಲ ಒಂದು ರೀತಿಯಲ್ಲಿ ಚಿತ್ರಿಸುತ್ತಾ ಹೋಗಿ ಗ್ರಾಮೀಣ ಜನ ಜೀವನದ ಚಿತ್ರಣವನ್ನು ಕಣ್ಣಿಗೆ ಕಟ್ಟುವಂತೆ ಕತೆಗಳಲ್ಲಿ ವಿವರಿಸಿರುವದನ್ನು ಅಧ್ಯಯನದ ಫಲಿತಗಳಲ್ಲಿ ಗುರುತಿಸಬಹುದು.

* ನವ್ಯ ಕಥಾ ಸಾಹಿತ್ಯವು ಯು.ಆರ್.ಅನಂತಮೂರ್ತಿ, ಲಂಕೇಶ್, ಚಿತ್ತಾಲ, ದೇಸಾಯಿ, ತೇಜಸ್ವಿ ಅವರಂತಹ ಶಕ್ತ ಬರಹಗಾರರಿಂದ ರಚನೆಯಾದುದು. ರಾಜಶೇಖರ ನೀರಮಾನ್ವಿಯವರು ಗ್ರಾಮೀಣ ಅನುಭವಗಳನ್ನು, ಭೂ ಮಾಲೀಕ ವ್ಯವಸ್ಥೆಯನ್ನು ಅವರ ಮಟ್ಟಕ್ಕೆ ನಿಂತು ಕತೆಗಳನ್ನು ಹೇಗೆ ರಚಿಸಿದ್ದಾರೆ ಎಂಬಂತಹ ಅಂಶಗಳನ್ನು ಕಾಣಬಹುದು.

* ನೀರಮಾನ್ವಿಯವರು ತಮ್ಮ ಕತೆಗಳಲ್ಲಿ ಪುರುಷ ಪಾತ್ರಗಳನ್ನು ಸಮಯ, ಸಂದರ್ಭ, ಸನ್ನಿವೇಶಕ್ಕೆ ಅನುಗುಣವಾಗಿ ಚಿತ್ರಿಸಿರುವಂತೆ ಮಹಿಳಾ ಲೋಕವನ್ನು ಕೂಡಾ ಅಗತ್ಯಕ್ಕೆ ತಕ್ಕಂತೆ ಚಿತ್ರಿಸಿ ಕತೆಯ ಮುಂದುವರಿಕೆಯಲ್ಲಿ ತಮ್ಮದೇ ಆದ ವಿಶಿಷ್ಟತೆಯನ್ನು ತೋರಿಸಿದ್ದಾರೆ.

* ನೀರಮಾನ್ವಿಯವರ ತಮ್ಮ ಕಥಾ ಸಂಕಲನಗಳಾದ ಹಂಗಿನರಮನೆಯ ಹೊರಗೆ ಕಥಾ ಸಂಕಲನವು ವ್ಯಕ್ತಿ ಪ್ರಜ್ಞೆಯಲ್ಲಿಯೇ ಸಾಗಿದರೆ, ಅಂದರೆ ತಿಮ್ಮ, ರಮೇಶ, ಶಂಕರಪ್ಪಗೌಡ, ರೋಗಿ ಈ ಪ್ರಮುಖ ಪಾತ್ರಗಳ ಮೂಲಕ ಕತೆಯು ಸುತ್ತುತ್ತಾ ಹೋಗುವದನ್ನು ಕಾಣಬಹುದು. "ಕರ್ಪೂರದ ಕಾಯದಲ್ಲಿ" ಹೆಚ್ಚು ಸಮಾಜಮುಖಿಯಾಗಿದೆ. ಅಂದರೆ ಇಲ್ಲಿನ ಎಲ್ಲಾ ಕತೆಗಳು ಕೂಡಾ ಸಮಾಜ ಕೇಂದ್ರ ಪ್ರಜ್ಞೆಯಲ್ಲಿಯೇ ಸಾಗುವದನ್ನು ಅಧ್ಯಯನದ ಫಲಿತಗಳಲ್ಲಿ ಗುರುತಿಸಬಹುದು.

* ರಾಜಶೇಖರ ನೀರಮಾನ್ವಿಯವರು ತಮ್ಮ ಕತೆಗಳಲ್ಲಿ ದಲಿತ ಲೋಕದ ಚಿತ್ರಣವನ್ನು ಸಹ ಕಾಣಬಹುದಾಗಿದೆ. ಬಂಡಾಯದ ಕತೆಗಾರರಾಗಿಯೂ ನೀರಮಾನ್ವಿಯವರು ಗ್ರಾಮೀಣ ಭಾಗದಲ್ಲಿ ಇಂದಿಗೂ ದಲಿತತ್ವದ ಅಂಶಗಳು ಹೇಗೆ ಕಂಡು ಬರುತ್ತವೆ ಎಂಬುದನ್ನು ತಿಳಿಸಿಕೊಟ್ಟು, ದಲಿತರು ಅಂದರೆ ಯಾರು ಅವರ ನೋವು ನಲಿವುಗಳು, ಯಾತನೆಗಳು, ಶೋಷಣೆಗಳು, ದಬ್ಬಾಳಿಕೆಗಳು ಈ ಮುಂತಾದ ಅಂಶಗಳನ್ನು ಅವರ ಕತೆಗಳಲ್ಲಿ ಶಕ್ತವಾಗಿ ಚಿತ್ರಿತವಾಗಿವೆ.

* ನೀರಮಾನ್ವಿಯವರು ತಮ್ಮ ಕತೆಗಳಲ್ಲಿ ಗ್ರಾಮೀಣ ಭಾಗದ ಜನರಲ್ಲಿ ಇಂದಿಗೂ ಮೂಢನಂಬಿಕೆಗಳು, ಸಂಪ್ರದಾಯಗಳು, ಆಚರಣೆಗಳು ಹೇಗೆ ಅಸ್ತಿತ್ವದಲ್ಲಿವೆ ಎಂಬುದನ್ನು ತಮ್ಮ ಕತೆಗಳಲ್ಲಿ ವಾಸ್ತವವಾದಿ ನೆಲೆಯಲ್ಲಿ ಕಾಣಿಸಿದ್ದಾರೆ.

* ನೀರಮಾನ್ವಿಯವರು ತಮ್ಮ ಕತೆಗಳಲ್ಲಿ ಗ್ರಾಮೀಣ ಭಾಗದ ಜನರು ಮಕ್ಕಳನ್ನು ಪಡೆಯುವುದಕ್ಕಾಗಿ ಬೆತ್ತಲೆ ಸೇವೆ ಮಾಡುವದು ತೀರ್ಥಯಾತ್ರೆಗಳನ್ನು ಕೈಗೊಳ್ಳುವದು, ದೇವರ ದರ್ಶನ ಪಡೆಯುವದು ಹೀಗೆ ಕಂದಾಚಾರ, ಮೂಢನಂಬಿಕೆಗಳಂತಹ ಅಂಶಗಳಲ್ಲಿ ಯಾವ ತೆರನಾಗಿ ನಂಬಿಕೆಯನ್ನಿಟ್ಟಿದ್ದರು. ವ್ಯವಸ್ಥೆಯ ಕ್ರೂರತೆ, ಶೋಷಣೆ, ಧರ್ಮದ ಹೆಸರಿನಲ್ಲಿ ಮೋಸ ಮಾಡುವ ಸಮಯ ಸಾಧಕರು, ಜಾತಿ, ಅನೀತಿಗಳು ಈ ಮುಂತಾದ ಅಂಶಗಳನ್ನು ನೋಡಬಹುದು.

* ಸಮಾಜದಲ್ಲಿ ಕಂಡುಬರುವಂತಹ ಅನ್ಯಾಯ, ಅನೀತಿ, ಭ್ರಷ್ಟಾಚಾರಗಳು ಮೊದಲಾದವುಗಳನ್ನು ತಮ್ಮದೇ ಆದ ದೃಷ್ಟಿಕೋನದಿಂದ ಕತೆಗಳನ್ನು ಕಟ್ಟಿಕೊಡುವದರ ಜೊತೆಗೆ, ಗ್ರಾಮೀಣ ಜನಜೀವನದ

ನೆಲೆಗಳನ್ನು ಶೋಧಿಸುವಂತೆ ಆಧುನಿಕ ಜೀವನದ ನೆಲೆಗಳನ್ನು ಕೂಡಾ ಶೋಧಿಸಿರುವದನ್ನು ಅಧ್ಯಯನದ ಫಲಿತಗಳಲ್ಲಿ ಕಂಡುಕೊಂಡಿದ್ದೇನೆ.

* ನೀರಮಾನ್ವಿಯವರು ತಮ್ಮ ಕತೆಗಳಲ್ಲಿ ಭಾಷೆ, ತಂತ್ರ, ಶೈಲಿಯಲ್ಲಿ ತಮ್ಮದೇ ಆದ ವಿಶಿಷ್ಟತೆಯನ್ನು ಮೆರೆದು ಹೈದ್ರಾಬಾದ ಕರ್ನಾಟಕ ಭಾಗದ ಅದರಲ್ಲೂ ರಾಯಚೂರಿನ ಗ್ರಾಮೀಣ ಭಾಷೆ ಅಚ್ಚಳಿಯದಂತೆ ಮೂಡಿ ಬಂದಿರುವುದನ್ನು ಕಾಣಬಹುದು. ಇವರ ಪ್ರಾದೇಶಿಕ ಭಾಷೆ ಜೀವಂತಿಕೆಯಿಂದ ಕೂಡಿದೆ ಎಂಬುದನ್ನು ಅಧ್ಯಯನದ ಫಲಿತಗಳಲ್ಲಿ ಕಂಡುಕೊಂಡಿದ್ದೇನೆ.

* ನೀರಮಾನ್ವಿಯವರು ತಮ್ಮ ಕತೆಗಳಲ್ಲಿ ಪಾತ್ರಗಳನ್ನು ಸೃಷ್ಟಿ ಮಾಡುವಾಗ ಭೂತ ಮತ್ತು ವರ್ತಮಾನದಲ್ಲಿ ತೊಡಕಿಲ್ಲದಂತೆ ಪಾತ್ರಗಳನ್ನು ಸೃಷ್ಟಿ ಮಾಡಿದ್ದಾರೆ. ಕೆಲವು ಕತೆಗಳ ಪ್ರಧಾನ ಪಾತ್ರಗಳು ಅಂತರ್ಮುಖಿಯಾಗಿಯೇ ಸಾಗುವುದನ್ನು ಕಾಣಬಹುದು.

* ನೀರಮಾನ್ವಿಯವರು ತಮ್ಮ ಕತೆಗಳಲ್ಲಿ ಸಾಮಾಜಿಕ ಸಂಬಂಧಗಳು, ಅಂತರ್ಜಾತೀಯ ವಿವಾಹಗಳು, ಮಾನವೀಯ ಮೌಲ್ಯಗಳು ಈ ಮುಂತಾದ ಅಂಶಗಳನ್ನು ಚಿತ್ರಿಸುವಂತಹ ಸೃಜನಶೀಲ ನಡೆಗಳನ್ನು ಕತೆಗಳಲ್ಲಿ ಕಾಣಲಾಗಿದೆ. ಇವರ ಎರಡೇ ಕಥಾ ಸಂಕಲನಗಳು ಬಂದಿದ್ದರೂ, ಕನ್ನಡ ಕಥಾ ಸಾಹಿತ್ಯಕ್ಕೆ ಇವರ ಕೊಡುಗೆ ವಿಶಿಷ್ಟವಾಗಿದೆ.

* ನೀರಮಾನ್ವಿಯವರು ತಮ್ಮ ಕತೆಗಳಲ್ಲಿ ಅನೀತಿಯ ಬದುಕಿನ ಮೌಲ್ಯಗಳು ಪ್ರಜಾಪ್ರಭುತ್ವದಲ್ಲಿ ಹೇಗೆ ಅವನತಿಯತ್ತ ಸಾಗುತ್ತಿವೆ ಎಂಬಂತಹ ಅಂಶಗಳನ್ನು ಕಾಣಿಸಿದ್ದಾರೆ.

* ನೀರಮಾನ್ವಿಯವರು ತಮ್ಮ ಕತೆಗಳಲ್ಲಿ ಮಹಿಳೆಯರ ಪಾತ್ರವನ್ನು ಸೃಷ್ಟಿಸುವದರ ಜೊತೆಗೆ ದಲಿತ ಮಹಿಳೆಯರನ್ನು ಉನ್ನತ ಜಾತಿಯವರು ಭೋಗದ ವಸ್ತುವನ್ನಾಗಿ ಹೇಗೆ ಉಪಯೋಗಿಸುತ್ತಿದ್ದರು ಮತ್ತು ಹೊಲ ಗದ್ದೆಗಳಲ್ಲಿ ಹೇಗೆ ಕೆಲಸ ಕಾರ್ಯಗಳಲ್ಲಿ ಬಳಸಿಕೊಳ್ಳುತ್ತಿದ್ದರು ಎಂಬಂತಹ ಅಂಶಗಳನ್ನು ಕಾಣುಬಹುದು.

ಅನುಬಂಧಗಳು

೧. ರಾಜಶೇಖರ ನೀರಮಾನ್ವಿಯವರ ಜೀವನ ಪರಿಚಯ

೨. ಕೃತಿಗಳು

೩. ಸಂಘ-ಸಂಸ್ಥೆಗಳಲ್ಲಿ ಸದಸ್ಯತ್ವ ಸೇವೆ

೪. ಪ್ರಶಸ್ತಿ ಪುರಸ್ಕಾರಗಳು

೫. ರಾಜಶೇಖರ ನೀರಮಾನ್ವಿಯವರ ಸಂದರ್ಶನ

೬. ಗ್ರಂಥಋಣ

೧. ರಾಜಶೇಖರ ನೀರಮಾನ್ವಿಯವರ ಜೀವನ ಪರಿಚಯ

ಸೃಜನಶೀಲ ಕತೆಗಾರರೆಂದು ಹೆಸರುವಾಸಿಯಾಗಿರುವ ರಾಜಶೇಖರ ನೀರಮಾನ್ವಿಯವರು ಮೂಲತಃ ರಾಯಚೂರು ಜಿಲ್ಲೆಯವರು. ಇವರು ೧೯೪೨ನೇ ಮಾರ್ಚ್ ೫ ರಂದು (೫.೩.೧೯೪೨) ಶ್ರೀ ವೀರನಗೌಡ ಪಾರ್ವತಮ್ಮ ದಂಪತಿಗಳ ಮಗನಾಗಿ ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ನೀರಮಾನ್ವಿಯಲ್ಲಿ ಜನಿಸಿದರು. ಬಾಲ್ಯದಲ್ಲಿಯೇ ಸಾಹಿತ್ಯಿಕ ಪರಿಸರದಲ್ಲಿ ಬೆಳೆದಂತಹ ರಾಜಶೇಖರ ನೀರಮಾನ್ವಿಯವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ತಾಯಿಯ ಊರಾದ ಚಿಮಲಾಪುರ ಹಾಗೂ ನೀರಮಾನ್ವಿಯಲ್ಲಿ ಪಡೆದರು. ಮುಂದೆ ಹೆಚ್.ಎಸ್.ಸಿ.ಯನ್ನು ರಾಯಚೂರಿನ ಹಂದರ್ದ್ ಪ್ರೌಢಶಾಲೆಯಲ್ಲಿ ೧೯೫೮ರಲ್ಲಿ ಮುಗಿಸಿದರು. ಈ ವೇಳೆಗಾಗಲೇ ಚಿಕ್ಕಕವನ, ಕತೆಗಳನ್ನು ಬರೆಯುವುದಕ್ಕೆ ಆರಂಭಿಸಿದ್ದರು. ೧೯೬೪ರಲ್ಲಿ ಧಾರವಾಡದ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದಲ್ಲಿ ಬಿ.ಎಸ್.ಸಿ ಪದವಿಯನ್ನು ಎರಡನೇ ದರ್ಜೆಯಲ್ಲಿ ಪಡೆದುಕೊಂಡರು. ೧೯೬೭ರಲ್ಲಿ ಅನ್ವಯಿಕ ಭೂ ವಿಜ್ಞಾನದಲ್ಲಿ ಎಂ.ಎಸ್.ಸಿ ಪದವಿಯನ್ನು ಪ್ರಥಮ ದರ್ಜೆಯಲ್ಲಿ ಪಡೆದುಕೊಂಡರು. ೧೯೮೪ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಿಂದ ಭೂ ವಿಜ್ಞಾನಕ್ಕೆ ಸಂಬಂಧಿಸಿದಂತೆ ಸಂಶೋಧನೆ ನಡೆಸಿ, ಪಿಎಚ್.ಡಿ ಮಹಾಪದವಿಯನ್ನು ಪಡೆದುಕೊಂಡರು. ನೀರಮಾನ್ವಿಯಲ್ಲಿ ಜನರ ಸೇವೆ ಮಾಡಬೇಕೆಂಬ ಉದ್ದೇಶವಿದ್ದುದರಿಂದ ರಾಜಕೀಯದ ಮೂಲಕ ತಮ್ಮ ಆಸೆಯನ್ನು ಈಡೇರಿಸಿಕೊಳ್ಳಲು ಪ್ರಯತ್ನಿಸಿದರು. ಅದಕ್ಕಾಗಿ "ತಾಲ್ಲೂಕು ಪಂಚಾಯತ್" ಚುನಾವಣೆಗೆ ಸ್ಪರ್ಧಿಸಿ ಅದರಲ್ಲಿ ಪರಾಭವವನ್ನು ಕಂಡರು. ಇಷ್ಟಾದರೂ ಎದೆಗುಂದದ ನೀರಮಾನ್ವಿಯವರು, ಮತ್ತೆ ಮುಂದಿನ ವರ್ಷ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಸ್ಪರ್ಧಿಸಿ ಇಲ್ಲಿಯೂ ಸೋಲನ್ನು ಕಂಡರು, ಈ ಎಲ್ಲಾ ಘಟನೆಗಳ ನಂತರ ರಾಜಕೀಯದಲ್ಲಿ ನನಗೆ ಅದೃಷ್ಟವಿಲ್ಲವೆಂದುಕೊಂಡು ಒಕ್ಕಲುತನದಲ್ಲಿ ಸಾಧನೆ ಮಾಡಬೇಕೆಂದು ಇತ್ತ ತಮ್ಮ ದೃಷ್ಟಿಯನ್ನು ಹರಿಸಿದರು. ಮುಂದೆ ೧೯೬೩ರಲ್ಲಿ ಬಳ್ಳಾರಿಯ ವೀರಶೈವ ಕಾಲೇಜಿನಲ್ಲಿ ಭೂ ವಿಜ್ಞಾನ ಪ್ರಾರಂಭವಾಯಿತು. ಅದರಲ್ಲಿ ಉಪನ್ಯಾಸಕರಾಗಿ, ಆ ವಿಭಾಗದ ಮುಖ್ಯಸ್ಥರಾಗಿ ಸೇವೆಯನ್ನು ಸಲ್ಲಿಸಿ ಇತ್ತೀಚಿಗೆ ನಿವೃತ್ತರಾಗಿದ್ದಾರೆ.

೨. ಕೃತಿಗಳು

೧. ಬೇಂದ್ರೆ ಒಂದು ಸಂದರ್ಶನ -ಪ್ರಕಾಶನ ರಾಯಚೂರು.

೨. ಹಂಗಿನರಮನೆಯ ಹೊರಗೆ -ಕಥಾಸಂಕಲನ, ಪ್ರತೀಕ ಪ್ರಕಾಶನ, ಬಳ್ಳಾರಿ.

ಈ ಕಥಾಸಂಕಲನ ಕನ್ನಡ ಸಂಸ್ಕೃತಿ ಇಲಾಖೆಯ ಜನಪ್ರಿಯ ಮಾಲೆಯಲ್ಲಿಪ್ರಕಟವಾಯಿತು. ೨೦೦೦ನೇ ವರ್ಷದಲ್ಲಿ ಗುಲ್ಬರ್ಗಾ ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಪಠ್ಯಕ್ರಮವಾಗಿ ಅಭ್ಯಾಸಕ್ಕೆ ಇಡಲಾಯಿತು. ಅದೇ ವರ್ಷದಲ್ಲಿ ಗುಲ್ಬರ್ಗಾ ವಿಶ್ವವಿದ್ಯಾಲಯದ ಬಿ.ಎಸ್.ಸಿ ಪ್ರಥಮ ವರ್ಷಕ್ಕೆ ಪಠ್ಯಪುಸ್ತಕವಾಗಿ ಅಭ್ಯಾಸಕ್ಕೆ ಇಡಲಾಯಿತು. ಮುಂದೆ ೧೯೯೭ರಲ್ಲಿ ನೀರಮಾನ್ವಿ ಕತೆಗಳು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಬಿ.ಕಾಂ.ಪ್ರಥಮ ವರ್ಷಕ್ಕೆ ಪಠ್ಯ ಪುಸ್ತಕವಾಗಿ ಅಭ್ಯಾಸಕ್ಕೆ ಇಡಲಾಯಿತು. ನಂತರ ಅದರ ೩ನೇ ಆವೃತ್ತಿ ಪ್ರಕಟವಾಯಿತು.

೩. ಭೂತ ನಾಟಕ -೧೯೮೮

೪. ಸಣ್ಣಕತೆ (ಸಂಪಾದಿತ ಕಥಾ ಸಂಕಲನ) ೧೯೮೮, ಕರ್ನಾಟಕ ಸಾಹಿತ್ಯ ಅಕಾಡೆಮಿ

೫. ಕರ್ಪೂರದ ಕಾಯದಲ್ಲಿ (ಕಥಾ ಸಂಕಲನ) ೧೯೯೦, ಲೋಹಿಯಾ ಪ್ರಕಾಶನ.

೬. ಕಥನ ಕಲೆಯ ನೆಲೆಗಳು (ಲೇಖನಗಳು, ಸಂಪಾದಿತ ಕೃತಿ) ೧೯೯೨, ಕರ್ನಾಟಕ ಸಾಹಿತ್ಯ ಅಕಾಡೆಮಿ

೭. ಲೋಹಿಯಾ ಪತ್ರಗಳು ಅನುವಾದ ೧೯೯೭, ಕನ್ನಡ ಸಂಸ್ಕೃತಿ ನಿರ್ದೇಶನಾಲಯ

೮. ಸೀತಾಕಾಂತ ಮಹಾಪಾತ್ರ, ಅನುವಾದ, ಕರ್ನಾಟಕ ಸಾಹಿತ್ಯ ಅಕಾಡೆಮಿ

ಇದೊಂದು ಜೀವನ ಚರಿತ್ರೆಯಾಗಿದೆ. ಒರಿಸ್ಸಾದ ದೊಡ್ಡ ಕವಿ, ಇಂಗ್ಲೀಷಿನಿಂದ ಕನ್ನಡಕ್ಕೆ ರಾಜಶೇಖರ ನೀರಮಾನ್ವಿಯವರು ಅನುವಾದ ಮಾಡಿದರು. ೨೦೦೦ನೇ ವರ್ಷದಲ್ಲಿ ಮೊದಲ ಮುದ್ರಣ ಕಂಡಿತು. ಪ್ರಕಾಶಕರು ಕರ್ನಾಟಕ ಸಾಹಿತ್ಯ ಅಕಾಡೆಮಿ.

೩. ಸಂಘ ಸಂಸ್ಥೆಗಳಲ್ಲಿ ಸದಸ್ಯತ್ವ / ಸೇವೆ

೧. ಬಯಾಲಾಜಿಕಲ್ ಸೊಸೈಟಿ ಆಫ್ ಇಂಡಿಯಾದ ಅಜೀವ ಸದಸ್ಯತ್ವ ಪಡೆದಿದ್ದಾರೆ.

೨. ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ೧೯೮೭ ರಿಂದ ೯೦ರ ತನಕ ಸದಸ್ಯರಾಗಿದ್ದರು. ಆಗ ಜಿ.ಎಸ್.ಶಿವರುದ್ರಪ್ಪನವರು ಅಧ್ಯಕ್ಷರಾಗಿದ್ದರು.

೩. ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ಮತ್ತೊಮ್ಮೆ ೧೯೯೭ರಲ್ಲಿ ಸದಸ್ಯರಾಗಿದ್ದರು. ಆಗ ಶಾಂತರಸರು ಅಧ್ಯಕ್ಷರಾಗಿದ್ದರು.

೪. ಗುಲ್ಬರ್ಗಾ ವಿಶ್ವವಿದ್ಯಾಲಯ ಮತ್ತು ಕರ್ನಾಟಕ ವಿಶ್ವವಿದ್ಯಾಲಯದ ಅಧ್ಯಯನ ಮಂಡಳಿಯ ಸದಸ್ಯರಾಗಿದ್ದರು.

೫. ಅಂತರ್ ವಿಶ್ವವಿದ್ಯಾಲಯದ ಪಠ್ಯಕ್ರಮ ಸಮಿತಿ ಸದಸ್ಯರಾಗಿದ್ದಾರೆ.

೬. ಪ್ರಾಥಮಿಕ ಶಿಕ್ಷಣ ಪಠ್ಯಪುಸ್ತಕ ಸಮಿತಿಯ ಸದಸ್ಯರಾಗಿದ್ದಾರೆ.

೪. ಪ್ರಶಸ್ತಿ ಪುರಸ್ಕಾರಗಳು

೧. ೧೯೬೪-೬೭ರಲ್ಲಿ ಅನ್ವಯಿಕ ಭೂ ವಿಜ್ಞಾನವನ್ನು ಸ್ನಾತಕೋತ್ತರ ಪದವಿಯಲ್ಲಿ ಅಭ್ಯಾಸ ಮಾಡುವಾಗ ವಿಶ್ವವಿದ್ಯಾಲಯದ ಧನ ಸಹಾಯ ಆಯೋಗದ ವಿದ್ಯಾರ್ಥಿ ವೇತನವನ್ನು ಪಡೆದುಕೊಂಡಿದ್ದಾರೆ.

೨. ೧೯೭೯-೮೩ರಲ್ಲಿ ಶೈಕ್ಷಣಿಕ ಅರ್ಹತೆ ಹೆಚ್ಚಿಸಿಕೊಳ್ಳಲು ಶಿಕ್ಷಕರಿಗೆ ನೀಡುವ ಧನ ಸಹಾಯ ಆಯೋಗದ ವಿದ್ಯಾರ್ಥಿವೇತನ ಪಿಎಚ್.ಡಿ ಅಭ್ಯಾಸಕ್ಕಾಗಿ ಪಡೆದುಕೊಂಡರು.

೩. ೧೯೮೦ ಜುಲೈನಲ್ಲಿ ಹಂಗಿನರಮನೆಯ ಹೊರಗೆ ಕಥಾ ಸಂಕಲನಕ್ಕೆ ೧೯೭೮ರಲ್ಲಿ ಪ್ರಕಟಿತ ಅತ್ಯುತ್ತಮ ಕಥಾ ಸಂಕಲನವೆಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯು ನೀಡಿ ಗೌರವಿಸಿದೆ.

೪. ೧೯೮೫ (ಮಾರ್ಚ್),ರಲ್ಲಿ ಅಸ್ಸಾಂ ರಾಜ್ಯದ ಪ್ರವಾಸಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಅನುದಾನ ಪಡೆದುಕೊಂಡಿದ್ದಾರೆ.

೫. ೧೯೮೮ರಲ್ಲಿ (ನವೆಂಬರ್) ಬಳ್ಳಾರಿ ಜಿಲ್ಲಾ ಕನ್ನಡ ಚಳುವಳಿ ಸಂಘದಿಂದ ೩೨ನೇ ಕನ್ನಡ ರಾಜ್ಯೋತ್ಸವ ಅಂಗವಾಗಿ ಸಾಹಿತ್ಯ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಗಾಗಿ ಸನ್ಮಾನಿಸಲಾಗಿದೆ.

೬. ೧೯೯೧ರಲ್ಲಿ (ಜೂನ್) ಕರ್ಪೂರದ ಕಾಯದಲ್ಲಿ ಕಥಾ ಸಂಕಲನಕ್ಕೆ ಚುಕ್ಕಿ ಉಮಾಪತಿ ಪ್ರತಿಷ್ಠಾನದ ಸಾಹಿತ್ಯ ಪ್ರಶಸ್ತಿ ದೊರಕಿದೆ.

೭. ೧೯೯೧ರಲ್ಲಿ (ನವೆಂಬರ್) ಕರ್ಪೂರದ ಕಾಯದಲ್ಲಿ ಕಥಾಸಂಕಲನಕ್ಕೆ ಗುಲಬರ್ಗಾ ವಿಶ್ವವಿದ್ಯಾಲಯ ನೀಡುವ ಪ್ರಶಸ್ತಿ ಮತ್ತು ಲೇಖಕನಿಗೆ ನೀಡುವ ಪ್ರೋತ್ಸಾಹ ಧನ ಪಡೆದುಕೊಂಡಿದ್ದಾರೆ.

೫. ರಾಜಶೇಖರ ನೀರಮಾನ್ವಿಯವರ ಸಂದರ್ಶನ

ಸಂದರ್ಶಕ: ಆರ್.ರಾಜಶೇಖರ

ಸ್ಥಳ: ಬಳ್ಳಾರಿ

ದಿನಾಂಕ: ೨೯.೦೮.೨೦೦೯

೧. ಬಾಲ್ಯದ ಅನುಭವಗಳು ತಮ್ಮ ಸಾಹಿತ್ಯಕ್ಕೆ ಯಾವ ಬಗೆಯಲ್ಲಿ ಪ್ರೇರಣೆಯಾಗಿವೆ. ಒಬ್ಬ ಸಾಹಿತಿಯ ಅಭಿವ್ಯಕ್ತಿ ಮತ್ತು ಯಶಸ್ಸು ಅವನ ಬಾಲ್ಯದ ಅನುಭವಗಳ ಆಧಾರದ ಮೇಲೆಯೇ ನಿಂತಿರುತ್ತಿದೆಯೆಂಬ ಮಾತೊಂದಿದೆ. ನಿಮ್ಮ ಅನುಭವಗಳ ಹಿನ್ನಲೆಯಲ್ಲಿ ಈ ಕುರಿತು ವಿವರಿಸುತ್ತಿರಾ?

☞ ಒಬ್ಬ ಸಾಹಿತಿಯ ಅಭಿವ್ಯಕ್ತಿ ಮತ್ತು ಯಶಸ್ಸು ಬಾಲ್ಯದ ಅನುಭವಗಳ ಆಧಾರದ ಮೇಲೆಯೇ ನಿಂತಿರುತ್ತದೆ ಸರಿ. ಆದರೆ ಮುಂದೆ ಆ ಅನುಭವಗಳನ್ನೇ ತಂದುಕೊಂಡು ಹೋಗದಿದ್ದರೆ. ಬಾಲ್ಯದ ಅನುಭವಗಳಿಂದ ಯಾವ ತೆರನಾದ ಸಾಹಿತ್ಯವನ್ನು ಬರೆಯುತ್ತೇವೆ. ಅಂದರೆ ನಮ್ಮ ವಿಚಾರಧಾರೆಗಳು ಸಕಾರಾತ್ಮಕವಾಗಿದ್ದರೆ ಅದು ಎಲ್ಲಾದಕ್ಕೂ ಉಪಯೋಗವಾಗುತ್ತದೆ ಮತ್ತು ಬೆಳೆಯುತ್ತದೆ. ಆದರೆ ಬಾಲ್ಯದ ಅನುಭವಗಳೇ ಎಲ್ಲಾದಕ್ಕೂ ಕಾರಣವಲ್ಲ. ಅಂದರೆ ಮನುಷ್ಯನಿಗೆ ವಯಸ್ಸಾದಂತೆಲ್ಲಾ ವಯಸ್ಸಿನ ಜೊತೆ ಬೌದ್ಧಿಕ ಪ್ರೌಢತೆ ಬೆಳೆಯಬೇಕು. ಅದು ಅಲ್ಲಿಯೇ ನಿಂತುಕೊಂಡರೆ ಸಾಹಿತ್ಯ ಬರೆಯಲು ಸಾಧ್ಯವಿಲ್ಲ. ಆದರೂ ಕೂಡಾ ಬಾಲ್ಯದ ಅನುಭವಗಳು ನಾನು ಕತೆಯನ್ನು ಬರೆಯಲು ಪ್ರೇರಣೆಯನ್ನು ನೀಡಿವೆ. ಉದಾಹರಣೆಗೆ ಭೂತ ಕತೆಯು ನನ್ನ ಬಾಲ್ಯದ ಅನುಭವಗಳಿಂದ ರಚನೆಯಾದಂತಹ ಕತೆಯಾಗಿದೆ. ನಾನು ಹೈಸ್ಕೂಲ್ ವಿದ್ಯಾಭ್ಯಾಸವನ್ನು ನೀರಮಾನ್ವಿಯಲ್ಲಿ ಓದುವಾಗ, "ಭಾರತ ಸೇವಾ ಸಮಾಜ ಕನಸು" ವತಿಯಿಂದ ವಿದ್ಯಾರ್ಥಿಗಳನ್ನು ಕರೆದುಕೊಂಡು ಹೋಗಿ ರೋಡ್ ಮಾಡಿಸುವುದು, ಚರಂಡಿ ಕೆಲಸ ಮಾಡಿಸುವುದು ಮಾಡುತ್ತಿದ್ದರು. ಆಗ ಅಲ್ಲಿ ಜಹಗೀರದಾರರ ಅರಮನೆಗೆ ಹೋಗಿದ್ವಿ ಆ ಅರಮನೆ ಬಹಳ ದೊಡ್ಡದಿತ್ತು. ಅದನ್ನೆಲ್ಲಾ ಉಪಯೋಗಿಸದೇ ಕೇವಲ ಒಂದು ಕೋಣೆಯನ್ನು ಮಾತ್ರ ಉಪಯೋಗಿಸುತ್ತಿದ್ದರು. ಅದು ನನ್ನ ತಲೆಯಲ್ಲಿಕೊರೆಯಿತು. ಅಲ್ಲದೇ ರಾಯಚೂರದೊಳಗೆ ಜಹಗೀರ್‌ದಾರ ಎಂಬ ಅಬಕಾರಿ ಕಂಟ್ರ್ಯಾಕ್ಟರ್ ಇದ್ದರು. ಅವರ ಮನೆ ಅರಮನೆ ಇದ್ದಂತೆ ಇತ್ತು. ಅವರು ಬಹಳ ಸಾಹುಕಾರರು ಇದ್ದರು. ನಿಜಾಮರ ಕಾಲದಲ್ಲಿ ಆತನಿಗೆ ೧ ರೂ ದಂಡ ಹಾಕಿದಾಗ, ನೀವು ಹಾಕಂಗಿದ್ರೆ ೧೦೦ರೂದಂಡ ಹಾಕ್ರಿ ನಾನೇನು ಏನು ಇಲ್ಲದವ ಅಂತ ತಿಳಿದಿದ್ರೇನು ಅಂತ ಹೇಳಿದ ಮಾತುಗಳು ನನ್ನ ತಲೆಯಲ್ಲಿ ಕೊರೆದು ಕತೆಯನ್ನು ಬರೆಯಬೇಕು ಅಂತ ಅನ್ನಿಸಿತು. ಹೀಗಾಗಿ ಈ ಕತೆಯ ನಾಯಕನಿಗೆ ರಮೇಶ ಅಂತ ಹೆಸರನ್ನು ಇಟ್ಟೆ. ಆ ನಂತರ ಕತೆಯು ರಾಯಚೂರಿನಿಂದ ಪನ್ನೂರಿಗೆ ಹೋಯಿತು. ಪನ್ನೂರು ಹೊಳೆ ದಂಡೆಯಲ್ಲಿ ಇತ್ತು. ಇಲ್ಲಿಯೂ ಕೂಡಾ

ಜಾಗೀರ್‌ದಾರರು ಇದ್ದರು. ಇಲ್ಲಿ ಪೀರಲಹಬ್ಬ ತುಂಬಾ ಪ್ರಸಿದ್ದವಾಗಿತ್ತು. ದೆವ್ವ ಬಿಡಿಸುವುದು, ಗಾಳಿ ಓಡಿಸುವುದು, ಶಾಂತಿ ಮಾಡಿಸುವುದು ಇಂತಹ ಆಚರಣೆಗಳು ನಡೆಯುತ್ತಿದ್ದವು. ಈ ಎಲ್ಲಾ ತೆರನಾದ ಬಾಲ್ಯದ ಅನುಭವಗಳು ಭೂತ ಕತೆಯನ್ನು ಬರೆಯಲು ಪ್ರೇರಣೆ ನೀಡಿತು. ಅದೇ ರೀತಿಯದಾಗಿ ದುರಸ್ತಿ ಕತೆಯೂ ಕೂಡಾ ರಾಯಚೂರಿನಲ್ಲಿ ರಿಕ್ಷಾ ಹೊಡೆಯುವವರನ್ನು ಆಧಾರವಾಗಿಟ್ಟುಕೊಂಡು ದುರಸ್ತಿ ಕತೆಯನ್ನು ಬರೆದಿದ್ದೇನೆ. ಹೀಗೆ ಬಾಲ್ಯದ ಅನುಭವಗಳು ನನ್ನ ಮೇಲೆ ಪ್ರಭಾವ ಪ್ರೇರಣೆ ಬೀರಿವೆ.

೨. ಬರವಣಿಗೆಯನ್ನು ಒಂದು ಅಭಿವ್ಯಕ್ತಿ ಮಾಧ್ಯಮವನ್ನಾಗಿ ಆರಿಸಿಕೊಳ್ಳಲು ಕಾರಣಗಳೇನು? ಸಾಹಿತ್ಯವನ್ನೊರೆತು ಪಡಿಸಿದಂತೆ ಇನ್ನಿತರ ಸೃಜನಶೀಲ ಅಭಿವ್ಯಕ್ತಿಗಳಿಗೂ (ಉದಾ:- ಸಿನಿಮಾ, ನಾಟಕ, ಕಲೆ, ಚಿತ್ರಕಲೆ, ಇತ್ಯಾದಿ) ಸಾಹಿತ್ಯಕ್ಕೂ ಇರುವ ಸಾಧ್ಯತೆಗಳ ಕುರಿತಾಗಿ ತಮ್ಮ ಅನುಭವದ ಹಿನ್ನಲೆಯಲ್ಲಿ ವಿವರಿಸಲು ಸಾಧ್ಯವೇ?

☞ ನನ್ನ ಮನಸ್ಸಿನಲ್ಲಿರುವಂತಹ ವಿಚಾರಗಳಿಗೆ ಒಂದು ಮೂರ್ತರೂಪ ಕೊಡಲು ಬರವಣಿಗೆಯನ್ನು ಅಭಿವ್ಯಕ್ತಿ ಮಾಧ್ಯಮವನ್ನಾಗಿ ಆರಿಸಿಕೊಂಡೆ. ಸಾಹಿತ್ಯಕ್ಕೂ ಮತ್ತು ಸೃಜನಶೀಲ ಅಭಿವ್ಯಕ್ತಿಗೂ ಒಂದಕ್ಕೊಂದು ಸಂಬಂಧವಿದೆ. ಅಂದರೆ ನಾನು ಸಾಹಿತ್ಯದ ಕೃಷಿ ಮೊದಲಿಗೆ ಪ್ರಾರಂಭ ಮಾಡಿದಾಗ ಎಲ್ಲಾರಿಗೂ ಕವಿಗಳಾಗಬೇಕೆಂಬ ಹುಚ್ಚು ಇರುತ್ತದೆ. ಅದೇ ರೀತಿಯದಾಗಿ ೬೦ರ ದಶಕ ನಾನು ಕವನಗಳನ್ನು ಬರೆಯುತ್ತಿದ್ದೆ, ಆವಾಗ ನವ್ಯ ಸಾಹಿತ್ಯದ ಅಂಶಗಳು ನನಗೆ ಇಷ್ಟವಾಗಲಿಲ್ಲ. ಅಂದರೆ ಇಲ್ಲಿಂದ ಪ್ರಾರಂಭಮಾಡಬೇಕು, ಇಲ್ಲಿಯೇ ಮುಗಿಸಬೇಕು ಎಂಬಂತಹ ನಿರ್ಬಂಧಗಳು ಇದ್ದುದರಿಂದ ಇದರ ಸಹವಾಸ ಬೇಡವೆಂದು ನಾನು ಗದ್ಯದತ್ತ ಮರಳಿ ಕಥಾ ಕ್ಷೇತ್ರವನ್ನು ಆರಿಸಿಕೊಂಡೆ. ಮುಂದೆ ನಾನು ಕಾಲೇಜು ವಿದ್ಯಾಭ್ಯಾಸವನ್ನು ಪಡೆಯುವಾಗ ನಾಲ್ಕು ನಾಟಕಗಳನ್ನು ಬರೆದೆ. ಕರ್ನಾಟಕ ಕಾಲೇಜಿನಲ್ಲಿ ಒಂದು ನಾಟಕವನ್ನು ಬರೆದೆ. ಎಂ.ಎಸ್.ಸಿ ಮೂರು ವರ್ಷದ ಪದವಿಯನ್ನು ಪಡೆಯುವಾಗ ಮೊದಲನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ನಾಟಕದಲ್ಲಿ ಪಾತ್ರವನ್ನು ಮಾಡಿದ್ದೆ ಅದರ ನಂತರ ಎರಡನೆಯ ವರ್ಷ, ಮೂರನೆಯ ವರ್ಷ ನಾನೇ ನಾಟಕವನ್ನು ಬರೆದು ನಾನೇ ಆಡಿಸಿದ್ದೇನೆ. ಹೀಗೆ ಕವಿತೆ, ಕತೆ , ನಾಟಕ ಮೂರು ಕ್ಷೇತ್ರಗಳಲ್ಲಿ ಸೇವೆಯನ್ನು ಸಲ್ಲಿಸಿದ್ದೇನೆ. ಆ ನಂತರ ಹಲವಾರು ಪುಸ್ತಕಗಳಿಗೆ ಮುನ್ನುಡಿಯನ್ನು ಕೂಡಾ ಬರೆದಿದ್ದೇನೆ. ಗೀತಾನಾಗಭೂಷಣರ ಕಾದಂಬರಿಗೆ ಮುನ್ನುಡಿ ಬರೆದಿದ್ದೇನೆ. ಅದಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಿಕ್ಕಿತು. ಚಂದ್ರಕಾಂತ ಕುಸನೂರರ ಕಾದಂಬರಿಗೆ ಮುನ್ನುಡಿಯನ್ನು ಬರೆದಿದ್ದೇನೆ. ಚೆನ್ನಣ್ಣವಾಲೀಕಾರರ ಕಥಾಸಂಕಲನಕ್ಕೆ ಮುನ್ನುಡಿಯನ್ನು ಬರೆದಿದ್ದೇನೆ. ಇದುವೆಲ್ಲಾ ಸಾಹಿತ್ಯವನ್ನೊರೆತು ಪಡಿಸಿ ಸೃಜನಶೀಲ ಅಭಿವ್ಯಕ್ತಿ ಎಂದು ಹೇಳಬಹುದು. ಆದುದರಿಂದ ಒಂದಕ್ಕೊಂದು ಸಂಬಂಧವನ್ನು ಹೊಂದಿವೆ.

೩. ತೇಜಸ್ವಿಯವರಂತೆ ನಿಮಗೂ, ವಿಜ್ಞಾನ ಮತ್ತು ಪರಿಸರದ ಬಗ್ಗೆ ಬರೆಯಲು ಸಾಧ್ಯವಾಗಿದ್ದಲ್ಲಿ ಅದ್ಭುತವಾದುದನ್ನು ತಮ್ಮಿಂದ ನಿರೀಕ್ಷಿಸಬಹುದಾಗಿತ್ತು. ಯಾಕೆ ಈ ನಿಟ್ಟಿನಲ್ಲಿ ತಾವು ಯೋಚಿಸಲಿಲ್ಲ?

☞ ಈಗ ಸಾಹಿತ್ಯ ಅಂದ ಕೂಡಲೇ ಒಬ್ಬ ಸಾಹಿತಿ ಹೀಗೆಯೇ ವಿಚಾರ ಮಾಡಬೇಕು, ಹೀಗೆಯೇ ಬರೆಯಬೇಕು, ಎಂಬಂತಹ ನಿರ್ಬಂಧವಿಲ್ಲ. ತನಗೆ ಹೇಗೆ ಅನ್ನಿಸುತ್ತದೆಯೋ ಅದನ್ನು ಬರೆಯುತ್ತಾನೆ. ಸಹೃದಯರಾದವರು ಅದನ್ನು ಹೇಗೆ ಬೇಕಾದರೂ ಗ್ರಹಿಸಬಹುದು. ಎಷ್ಟೇ ಆಗಲಿ ತೇಜಸ್ವಿ ಬರೆದಂತೆ ಅವರನ್ನು ಅನುಕರಿಸಿ ನಾನು ಬರೆದದ್ದೇ ಆದರೆ ತೇಜಸ್ವಿಯವರ ಬಾಲವಾಗುತ್ತಿದ್ದೆನೇ ಹೊರತು, ಸ್ವತಂತ್ರ್ಯ ಲೇಖಕ ಆಗುತ್ತಿರಲಿಲ್ಲ ತನ್ನತನವನ್ನು ಗಳಿಸಿಕೊಳ್ಳಲು ಬೇರೆಯವರ ಮಾದರಿಯನ್ನು ಅನುಸರಿಸಬಾರದು. ನನ್ನ ಸ್ನೇಹಿತ ಬೆಸಗರಹಳ್ಳಿ ರಾಮಣ್ಣ ಕೂಡಾ ಕತೆ ಕಾದಂಬರಿ, ಕಾವ್ಯ ಬರೆದಿದ್ದಾನೆ. ಆತನ ಎಲ್ಲಾ ಪ್ರಕಾರಗಳನ್ನು ಕೂಡಾ ಓದಿದ್ದೇನೆ. ಅಂದಾಗ ಆತನ ಮಾದರಿಯಲ್ಲಿಯೇ ಬರೆದಿದ್ದೀರಿ ಎಂದರೆ ತಪ್ಪಾಗುತ್ತದೆ, ಯಾವಾಗಲೂ ಏನೇ ಓದಿದರೂ ಕೂಡಾ ಅದನ್ನು ಗ್ರಹಿಸಿಕೊಂಡು ನಮ್ಮ ಮಟ್ಟವನ್ನು ಸುಧಾರಿಸಿಕೊಳ್ಳಲು ಪ್ರಯತ್ನಿಸಬೇಕು. ಆದುದರಿಂದ ನಾನು ಯಾರದೇ ಮಾದರಿಯನ್ನು ಕೂಡಾ ಅನುಸರಿಸಿಲ್ಲ. ಸ್ವತಂತ್ರ್ಯವಾಗಿ ಕತೆಗಳನ್ನು ರಚಿಸಿದ್ದೇನೆ.

೪. ತಾವು ಬಂಡಾಯ ಚಳುವಳಿಯಲ್ಲಿ ಗುರುತಿಸಿಕೊಂಡರೂ ಕೂಡಾ, ತಮ್ಮ ಬರವಣಿಗೆಯು ನವ್ಯದ ಪರಿಧಿಯಲ್ಲೇ ಇದೆಯೆಂದು ಅನ್ನಿಸುತ್ತದೆಯಲ್ಲವೇ? ಇದು ಒಂದು ರೀತಿಯಲ್ಲಿ ಹುಸಿ ಬಂಡಾಯದ ಅಬ್ಬರದ ನಡುವೆ ನಿಜವಾದ ನೀರಮಾಸ್ತಿಯವರನ್ನು ಪ್ರತ್ಯೇಕಿಸುತ್ತದೆಯೆಂದು ಹೇಳಬಹುದು ನಿಮ್ಮ ಅಭಿಪ್ರಾಯವೇನು?

☞ ಈ ಪ್ರಶ್ನೆಯ ಬಗ್ಗೆ ನನ್ನ ಅಭಿಪ್ರಾಯವೇನೆಂದರೆ ನನ್ನ ಕತೆಗಳನ್ನು ಬರೆಯುವುದಕ್ಕೆ ಪ್ರಾರಂಭ ಮಾಡಿದಾಗ ಸ್ವಲ್ಪ ನವ್ಯದ ಪ್ರಭಾವ ಇತ್ತು. ಅದನ್ನು ನಾನು ಎಂದಿಗೂ ಕಾಫಿ ಮಾಡಿಲ್ಲ, ಅದನ್ನು ಮುಂದುವರೆಸಿಕೊಂಡು ಕೂಡಾ ಬಂದಿಲ್ಲ. ಸಾಹಿತ್ಯಿಕ ವಾತಾವರಣ ಹೇಗೆ ಇರುತ್ತದೆಯೋ ಅದಕ್ಕೆ ನಾವು ಹೊಂದಾಣಿಕೆ ಮಾಡಿಕೊಂಡು ಹೋಗಬೇಕು. ನವ್ಯದ ಕಾರಣದಿಂದಲೇ, ನವ್ಯದ ನಿರ್ಬಂಧದಿಂದಲೇ ಕಾವ್ಯ ಬರೆಯುವುದನ್ನು ಬಿಟ್ಟು ಕಥಾ ಕ್ಷೇತ್ರವನ್ನು ಅರಿಸಿಕೊಂಡು ಬಂದೆ. ನಾನು ಯಾವತ್ತಿಗೂ ನವ್ಯದ ಪ್ರಭಾವಕ್ಕೆ ಒಳಗಾಗಿ ಕತೆಗಳನ್ನು ರಚಿಸಿಲ್ಲ. ಸ್ವತಂತ್ರ್ಯವಾಗಿ ಬರೆದಿದ್ದೇನೆ. ನನ್ನ ಮೊದಲ ಕತೆ ವೃತ್ತ ನನ್ನ ತಾತನ ಕತೆ. ಆತ ಎಲ್ಲಾರು ಸುಖವಾಗಿರಬೇಕೆಂದು ಬಯಸುತ್ತಿದ್ದ ಆದರೆ ಮುಂದೆ ಆತನ ಮಗ ಸಂಬಂಧವಿಲ್ಲದಂತೆ ಇರುತ್ತಿದ್ದ ಅಂದರೆ ಜೀವನಕ್ಕೆ ಸಂಬಂಧಿಸಿದ್ದೇ ಕತೆಯಲ್ಲಿ ಇರುತ್ತದೆ. ಮಾಸ್ತಿಯವರಂತಹ ದೊಡ್ಡ ಸಾಹಿತಿಗಳ ಕಥಾ ಸಂಕಲನ ಮುದ್ರಣ ಆಯಿತು. ಅದರಲ್ಲಿ ನನ್ನ ಕತೆಯನ್ನು ಕೂಡಾ ಹಾಕಿಸಿಕೊಂಡರು ಅಂದರೆ ನಾವು ಬಂಡಾಯದವರು ಇವರ ಕತೆಯನ್ನು ಏಕೆ

[illegible]

ಹಾಕಿಕೊಳ್ಳಬೇಕು ಎಂದು ಬಿಡಬಹುದಿತ್ತು. ಆದರೆ ಎಲ್ಲಾರಿಗೂ ಸಲ್ಲುವುದು ಎಂಬ ಅಭಿಪ್ರಾಯವಿದ್ದುದರಿಂದ ನನ್ನ ಕತೆ ಮುದ್ರಣ ಆಯಿತು. ಆದುದರಿಂದ ನವ್ಯ, ದಲಿತ ಬಂಡಾಯ ಎಂದು ಗುರುತಿಸುವುದು ತಪ್ಪು ಎಂಬುದು ನನ್ನ ಅಭಿಪ್ರಾಯವಾಗಿದೆ.

೫. ಇಂದು ದಲಿತ ಬಂಡಾಯದ ಬದ್ಧತೆಯು ಸರ್ಕಾರದ ಉನ್ನತ ಸ್ಥಾನ ಮಾನಗಳನ್ನು ಪಡೆಯುವ ಮೆಟ್ಟಿಲಾಗಿದ್ದುದು ಒಂದು ವಿಪರ್ಯಾಸವಲ್ಲವೇ? ಉದಾ:- ಸಿದ್ಧಲಿಂಗಯ್ಯ, ಚಂಪಾ.

☞ ದಲಿತ ಬಂಡಾಯದ ಬಗ್ಗೆ ಯಾರು ಬೇಕಾದರೂ ಬರೆಯಬಹುದು. ದಲಿತ ಬರೆದದ್ದೇ ದಲಿತ ಸಾಹಿತ್ಯವಾಗುವುದಿಲ್ಲ. ಚಂಪಾರಂತವರು ಜಂಗಮರು ಈತ ಕೂಡಾ ದಲಿತ ಸಾಹಿತಿಯಾಗಿದ್ದಾನೆ. ಅದೇ ರೀತಿಯದಾಗಿ ನನ್ನ ಕತೆಗಳಲ್ಲಿಯೂ ಕೂಡಾ ದಲಿತತ್ವದ ಅಂಶಗಳು ಕಂಡುಬರುತ್ತವೆ. ಶಿವರಾಮಕಾರಂತ, ಕುವೆಂಪು, ಮೊದಲಾದವರ ಕಾದಂಬರಿಗಳಲ್ಲಿಯೂ ಕೂಡಾ ದಲಿತ ಅಂಶಗಳು ಕಂಡು ಬರುತ್ತವೆ. ಇದು ದಲಿತ ಸಾಹಿತ್ಯವಾಗುವುದಿಲ್ಲವೇ, ಸಾಹಿತ್ಯವನ್ನು ಇಂತಹವರೇ ಬರೆಯಬೇಕೆಂಬ ಹಣೆ ಪಟ್ಟಿಯನ್ನು ಅಚ್ಚುವುದು ತಪ್ಪಾಗುತ್ತದೆ. ದಲಿತ ಬಂಡಾಯವು ಸರ್ಕಾರದ ಉನ್ನತ ಸ್ಥಾನ ಮಾನಗಳನ್ನು ಪಡೆಯಲು ಮೆಟ್ಟಿಲು ಅಲ್ಲ ಯಾಕೆಂದರೆ ಕೇವಲ ಸಿದ್ಧಲಿಂಗಯ್ಯ, ಚಂಪಾರಂತಹವರು ಮಾತ್ರ ಉನ್ನತ ಸ್ಥಾನಮಾನವನ್ನು ಪಡೆದಿದ್ದಾರೆ. ಉಳಿದವರ್ಯಾರು ಅಂತಹ ಸ್ಥಾನ ಮಾನಗಳನ್ನು ಪಡೆದಿಲ್ಲ. ಒಟ್ಟಾರೆಯಾಗಿ ಸಾಹಿತ್ಯವೆಂಬುದು ಅಧಿಕಾರವನ್ನು ಗಳಿಸುವುದಕ್ಕೆ ದಾರಿ ಅಲ್ಲ ಅದು ಯಾವುದೇ ಪ್ರಕಾರದ ಸಾಹಿತ್ಯವಾಗಿರಬಹುದು.

೬. ಸಾಹಿತ್ಯಕ್ಕೆ ಚಳುವಳಿಗಳು ಮುಖ್ಯವೇ? ಉದಾಹರಣೆಗೆ ನವೋದಯ, ನವ್ಯ, ನವ್ಯೋತ್ತರ ಇಂತಹ ಚಳುವಳಿಗಳು ಇಲ್ಲದೆ ಪ್ರಸ್ತುತ ಸಾಹಿತ್ಯ ಲೋಕ ಸೊರಗಿದೆಯೆಂದು ಅನ್ನಿಸುತ್ತಿದೆಯೇ?

☞ ನನ್ನ ಅಭಿಪ್ರಾಯದ ಪ್ರಕಾರ ಸಾಹಿತ್ಯಕ್ಕೆ ಘಟ್ಟಗಳು ಪ್ರಮುಖವಾಗಿ ಕಂಡು ಬರುವುದಿಲ್ಲ. ಇದರ ಅವಶ್ಯಕತೆಯೇ ಇಲ್ಲ. ಯಾಕೆಂದರೆ ಜಿ.ಎಸ್.ಶಿವರುದ್ರಪ್ಪರಂತಹ ಕವಿಗಳು ತಾವು ಬರವಣಿಗೆ ಪ್ರಾರಂಭಿಸಿದ ನಂತರ ನವ್ಯ, ನವ್ಯೋತ್ತರ ಎಂಬ ಘಟ್ಟಗಳು ಆದವು. ಆದರೆ ಇವರು ಈ ಎಲ್ಲಾ ಘಟ್ಟಗಳನ್ನು ದಾಟಿ ಕೇಂದ್ರ ಸಾಹಿತ್ಯ ಅಕಾಡೆಮಿ, ನಾಡೋಜ ನಂತರ ರಾಷ್ಟ್ರಕವಿ ಪ್ರಶಸ್ತಿಯನ್ನು ಪಡೆದುಕೊಂಡರು. ಆದರೆ ಇವರು ಯಾವುದೇ ಘಟ್ಟದಲ್ಲಿರಲಿಲ್ಲ. ತಮ್ಮದೇ ಆದ ಮಾರ್ಗದಲ್ಲಿ ಬರೆದುಕೊಂಡು ಹೋದರು. ಅದೇ ರೀತಿಯದಾಗಿ ಚೆನ್ನವೀರಕಣವಿಯವರು ಕೂಡ ಸಾಹಿತ್ಯ ಕೃಷಿ ಮಾಡಿದರು. ಸಾಹಿತ್ಯ ಸಾಹಿತ್ಯವೇ ಹೊರತು ಸಾಹಿತ್ಯಕ್ಕೆ ಘಟ್ಟಗಳು ಮುಖ್ಯವಲ್ಲ. ಆ ಮೇಲೆ ಒಂದು ಘಟ್ಟದಲ್ಲಿ ಬರುವವರು ಅದನ್ನು ದಾಟಿ ಬರೆಯುವುದಕ್ಕೆ ಸಾಧ್ಯವೇ ಆಗುವದಿಲ್ಲ. ಆದ್ದರಿಂದ ಇಂತಹ ಘಟ್ಟಗಳಲ್ಲಿ ನನಗೆ ನಂಬಿಕೆಯಿಲ್ಲ.

೭. ಶಾಂತರಸರು ಮತ್ತು ನೀವು ಕನ್ನಡದಲ್ಲಿ ಕ್ಲಾಸಿಕ್ ಆದಂತಹ ಬರವಣಿಗೆಯ ಮಾದರಿಯೊಂದನ್ನು ತೋರಿಸಿಕೊಟ್ಟವರು. ಆದರೆ ಹಂಗಿನರಮನೆಯಂತಹ ಶ್ರೇಷ್ಠ ಕತೆಯನ್ನು ಕೊಟ್ಟವರು ನಿಮ್ಮ ಸಹಜ ಶೈಲಿಯನ್ನು ಮರೆತು ಉಳಿದವರಂತೆ ಪ್ರಾದೇಶಿಕ ನುಡಿಕಟ್ಟಿನಲ್ಲಿ ಬರೆಯ ಹೊರಟದ್ದು ಹತಾಶೆಯಲ್ಲವೇ?

☞ ನಾನು ಎಲ್ಲಿಯೂ ಸಹಜ ಶೈಲಿಯನ್ನು ಮರೆತಿಲ್ಲ ಮತ್ತು ನನ್ನತನವನ್ನು ಬಿಟ್ಟುಕೊಟ್ಟಿಲ್ಲ. ಎಲ್ಲಾ ಸಾಹಿತಿಗಳು ತಮ್ಮ ಪ್ರಾದೇಶಿಕ ಭಾಷೆಯಲ್ಲಿಯೇ ಸಾಹಿತ್ಯವನ್ನು ಬರೆದರು. ಅದೇ ರೀತಿಯದಾಗಿ ನಮ್ಮ ಹೈದ್ರಾಬಾದ ಕರ್ನಾಟಕದ ಭಾಷೆಯನ್ನು ಬರೆಯುವವರು ಯಾರು? ನಾನು ಹೈದ್ರಬಾದ ಕರ್ನಾಟಕ ಭಾಗಕ್ಕೆ ಸೇರಿದವನಾಗಿದ್ದರಿಂದ ಉಳಿದವರಂತೆ ಆಡು ಭಾಷೆಯಲ್ಲಿಯೇ ಸಾಹಿತ್ಯವನ್ನು ಬರೆಯಬೇಕೆಂಬ ಆಸೆಯಿದ್ದುದರಿಂದ ದುರಸ್ತಿಯಂತಹ ಕತೆಯನ್ನು ಬರೆದೆ. ಇದರಿಂದ ನನಗೆ ಪ್ರಶಸ್ತಿ ಸಿಗುತ್ತವೆ ಎಂದು ಬರೆಯಲಿಲ್ಲ ಹೀಗೆ ಪ್ರಶಸ್ತಿಯನ್ನು ಕೊಡಿ ಎಂದು ಕೇಳಿದರೆ ಯಾರೂ ಕೊಡುವುದಕ್ಕೆ ತಯಾರಿಲ್ಲ. ಆದುದರಿಂದ ಇಲ್ಲಿ ಹತಾಶೆಯ ಪ್ರಶ್ನೆಯೇ ಉದ್ಭವಿಸುವುದಿಲ್ಲ.

೮. ಬೆತ್ತಲೆ ಸ್ವಾಮಿ ಕತೆಯು ಉಳಿದೆಲ್ಲ ಕತೆಗಳಿಗಿಂತ ಭಿನ್ನವಾಗಿದ್ದು, ಆ ಭಾಗದಲ್ಲಿ ಇಂದಿಗೂ ಮೂಡ ನಂಬಿಕೆಗಳು ಆಚರಣೆಗಳು, ಸಂಪ್ರದಾಯಗಳು ಅಸ್ತಿತ್ವದಲ್ಲಿವೆ ಎಂದು ತಿಳಿಸಿಕೊಟ್ಟಿದ್ದೀರಿ? ಇಂತಹ ವಸ್ತುವಿನ ಆಯ್ಕೆಯಲ್ಲಿ ನಿಮಗೆ ಪ್ರಭಾವ ಬೀರಿದ ಅಂಶಗಳಾವುವು?

☞ ಬೆತ್ತಲೆಸ್ವಾಮಿ ಎಂಬಂತಹ ಕತೆಯನ್ನು ಬರೆಯುವುದಕ್ಕೆ ಪ್ರೇರಣೆ ನೀಡಿದ ಅಂಶವೆಂದರೆ ನಮ್ಮೂರಲ್ಲಿ ಅನ್ನಮಯ್ಯ ಎಂಬ ವ್ಯಕ್ತಿ ಬೆತ್ತಲೆಯಾಗಿ ಓಡಾಡುತ್ತಿದ್ದ. ಆತ ಮೂಕನಾಗಿದ್ದ. ದಾರಿಯಲ್ಲಿ ತಿರುಗಾಡುತ್ತಾ ಅನ್ನ ನೀರು ತಿಂದುಕೊಂಡು ಜೀವಿಸುತ್ತಿದ್ದ. ಜನರು ಅವನನ್ನು ನಂಬಿದರು ಬೆತ್ತಲೆಸ್ವಾಮಿಯನ್ನಾಗಿ ಮಾಡಿದರು. ಈತನ ಪ್ರಭಾವದಿಂದ ಮಟ್ಕಾ ನಂಬರ್ ಗೊತ್ತಾಗುವುದು. ಮಕ್ಕಳಿಲ್ಲೋರಿಗೆ ಮಕ್ಕಳ ಆಗುವುದು, ರಾಜಕೀಯದಲ್ಲಿ ಗೆಲುವು ಸಾಧಿಸುವುದು, ಇಂತಹ ಪ್ರಯೋಜನಗಳು ಜನರಿಗೆ ಆದವು. ಇದರಿಂದಾಗಿ ಈತನನ್ನು ದೇವರನ್ನಾಗಿ ಮಾಡಿ, ಈತನ ಗುಡಿಯನ್ನು ಕಟ್ಟಿದರು. ಇಂದಿಗೂ ಸಹ ಪ್ರತೀ ವರ್ಷ ಬೆತ್ತಲೆಸ್ವಾಮಿಯ ಜಾತ್ರೆ ನಡೆಯುವುದನ್ನು ಕಾಣಬಹುದು. ಈ ಎಲ್ಲಾ ಅಂಶಗಳಿಂದ ಬೆತ್ತಲೆಸ್ವಾಮಿ, ಕತೆಯನ್ನು ಬರೆಯಲು ಪ್ರಭಾವ ಮತ್ತು ಪ್ರೇರಣೆ ಒದಗಿ ಬಂದಿತು.

೯. ತಮಂಧಕಿರಿದೆನ್ನಬಹುದೇ ಅಯ್ಯಾ ಎಂಬು ಕತೆಯ ಶೀರ್ಷಿಕೆಯನ್ನಿಡಲು ಕಾರಣವೇನು

☞ ಬಸವಣ್ಣನವರ "ತಮಂಧ ಘನಕಿರಿದೆನ್ನಬಹುದೇ ಅಯ್ಯಾ" ಎಂಬ ವಚನದ ಸಾಲಿನಿಂದ ಪ್ರಭಾವ ಮತ್ತು ಪ್ರೇರಣೆಗಳಿಗೆ ಒಳಗಾಗಿ ಈ ಶೀರ್ಷಿಕೆಯನ್ನಿಟ್ಟು ಕತೆಯನ್ನು ಬರೆದಿದ್ದೇನೆ.

೧೦. ಪ್ರಜಾಪ್ರಭುತ್ವದಲ್ಲಿ ಸಾವು ಕತೆಯಲ್ಲಿಯೂ ಕೂಡಾ ಬಂಡಾಯದ ಅಂಶಗಳನ್ನು ಗುರುತಿಸಬಹುದು. ಇಂತಹ ವಸ್ತುವಿನ ಆಯ್ಕೆಯಲ್ಲಿ ಪ್ರಭಾವ ಮತ್ತು ಪ್ರೇರಣೆಗಳೇನು?

☞ ಈ ಕತೆಯನ್ನು ಬರೆಯವುದಕ್ಕೆ ಮುಖ್ಯ ಪ್ರೇರಣೆ ರಾಜಕಾರಣಿಗಳು. ಇಂದಿರಾಗಾಂಧಿ ಹಾಗೂ ರಾಜೀವ್‌ಗಾಂಧಿ ಸತ್ತಾಗ ವಿಜೃಂಭಣೆಯಿಂದ ಹೇಳುವುದು, ಶಾಲಾ ಕಾಲೇಜು ರಜೆಮಾಡಿಸುವುದು, ಬಂದ್ ಮಾಡಿಸುವುದು ಇಡೀ ದಿನ ವಾರ್ತೆಗಳ ಪ್ರಸಾರ ಮುಂದುವರಿಯುತ್ತದೆ. ಆದರೆ ಪ್ರಜಾಪ್ರಭುತ್ವ ದೇಶದಲ್ಲಿ ಒಬ್ಬ ಸಾಮಾನ್ಯ ಪ್ರಜೆ ಸತ್ತರೆ ಇಂತಹ ಘಟನೆಗಳು ಸಂಭವಿಸುವುದಿಲ್ಲ ಎಂಬಂತಹ ಅಂಶದ ಆಧಾರದ ಮೇಲೆ ಈ ಕತೆಯನ್ನು ಬರೆದಿದ್ದೇನೆ.

೧೧. ಗುಡಿಯ ನೋಡಿರಣ್ಣಾ ಎಂಬಂತಹ ಕತೆಯ ಶೀರ್ಷಿಕೆಯನ್ನಿಡಲು ಕಾರಣವೇನು? ಇಂತಹ ಸಾಮಾಜಿಕ ಆಶಯವುಳ್ಳ ಕತೆಯನ್ನು ರಚಿಸಲು ನಿಮಗೆ ಆದಂತಹ ಪ್ರಭಾವ ಪ್ರೇರಣೆಗಳೇನು?

☞ ಗುಡಿಯ ನೋಡಿರಣ್ಣಾ ಕತೆಯು ಶಿಶುನಾಳ ಶರೀಫರ ದೇಹವೇ ಗುಡಿ ಎಂಬ ತತ್ವಪದದ ಹಿನ್ನಲೆಯಲ್ಲಿ ಈ ಕತೆಯನ್ನು ರಚಿಸಿದ್ದಾರೆ. ಮನುಷ್ಯ ಏನನ್ನಾದರು ಸಾಧಿಸಬೇಕೆಂದರೆ ಮನಸ್ಸು ಮುಖ್ಯವಾಗುತ್ತದೆ. ಇಲ್ಲವಾದರೆ ದೆವ್ವವಾಗುತ್ತಾನೆ ಎಂಬ ಕಲ್ಪನೆಯ ಆಧಾರದ ಮೇಲೆ ಈ ಕತೆಯನ್ನು ಬರೆದಿದ್ದೇನೆ.

ಗ್ರಂಥಋಣ

೦೧. ಆಮೂರ ಜಿ.ಎಸ್, ಕನ್ನಡ ಕಥನ ಸಾಹಿತ್ಯ ಕಾದಂಬರಿ, ಶ್ರೀಹರಿ ಪ್ರಕಾಶನ, ಧಾರವಾಡ, ೧೯೯೪

೦೨. ಆಮೂರ ಜಿ.ಎಸ್, ಕನ್ನಡ ಕಥನ ಸಾಹಿತ್ಯ ಸಣ್ಣಕತೆ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು

೦೩. ಆಮೂರ ಜಿ.ಎಸ್, ಕನ್ನಡ ಶಾಸ್ತ್ರ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೦೪. ಆಮೂರ ಜಿ.ಎಸ್, ಅರ್ಥಲೋಕ, ಸ್ನೇಹ ಪ್ರಕಾಶನ, ಬೆಂಗಳೂರು

೦೫. ಕರೀಗೌಡ ಬೀಚನಹಳ್ಳಿ, ವ್ಯಷ್ಟಿಸಮಷ್ಟಿ, ಅಜಂತ ಪ್ರಕಾಶನ, ಬೆಂಗಳೂರು. ೨೦೦೭

೦೬. ಕರೀಗೌಡ ಬೀಚನಹಳ್ಳಿ, ಶತಮಾನದ ಸಣ್ಣಕತೆಗಳ ಸಮೀಕ್ಷೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೩

೦೭. ಕೀರ್ತಿನಾಥ ಕುರ್ತುಕೋಟಿ, ಯುಗಧರ್ಮ ಹಾಗೂ ಸಾಹಿತ್ಯ ದರ್ಶನ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೮೩

೦೮. ಕೋದಂಡರಾಮ ಎಸ್.ಕೆ, ಕನ್ನಡ ಕಥಾ ಸಾಹಿತ್ಯ ಲೋಕದಲ್ಲಿ ಸಾಂಸ್ಕೃತಿಕ ಸಂಘರ್ಷ, ೧೯೯೬

೦೯. ಗಿರಡ್ಡಿ ಗೋವಿಂದರಾಜ, ಸಣ್ಣಕತೆಯ ಹೊಸ ಒಲವುಗಳು, ೧೯೭೮

೧೦. ಗಿರಡ್ಡಿ ಗೋವಿಂದರಾಜ, ನವ್ಯ ವಿಮರ್ಶೆ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೭೫

೧೧. ಚೆನ್ನಯ್ಯ ಎಚ್.ಎಂ, ಕನ್ನಡ ನವ್ಯ ಚಳುವಳಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೦

೧೨. ಜಂಬಣ್ಣ ಅಮರು ಚಿಂತಕ ಮತ್ತು ರಾಜಶೇಖರ ನೀರಮಾನ್ವಿಯವರ ಸಾಹಿತ್ಯ, ಸಂಪಾದಕರು, ಡಾ.ದಸ್ತಗೀರ್ ಸಾಬ್‌ದಿನ್ನಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೮

೧೩. ತಿರುಮಲೇಶ ಕೆ.ವಿ, ಅಸ್ತಿತ್ವವಾದ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೬

೧೪. ನರಹಳ್ಳಿ ಬಾಲಸುಬ್ರಹ್ಮಣ್ಯ, ನವ್ಯತೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೧೫. ನಾಗರಾಜ ಡಿ.ಆರ್, ಸಾಹಿತ್ಯ ಕಥನ, ಅಕ್ಷರ ಪ್ರಕಾಶನ, ಸಾಗರ, ೧೯೯೬

೧೬. ನಾಯಕ ಜಿ.ಎಚ್, ಶತಮಾನದ ಕನ್ನಡ ಸಾಹಿತ್ಯ, ರಾಘವೇಂದ್ರ ಪ್ರಕಾಶನ, ಅಂಕೋಲ, ಉತ್ತರ ಕನ್ನಡ, ೨೦೦೦

೧೭. ಎಸ್.ಎಲ್.ಪ್ರಭಾವತಿ, ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ನೆಲೆಗಳು, ಅಂಕಿತ ಪ್ರಕಾಶನ, ಬೆಂಗಳೂರು

೧೮. ಬರುಗೂರು ರಾಮಚಂದ್ರಪ್ಪ, ಸಂಸ್ಕೃತಿ ಮತ್ತು ಸೃಜನಶೀಲತೆ, ಅಂಕಿತ ಪ್ರಕಾಶನ, ಬೆಂಗಳೂರು, ೧೯೮೭

೧೯. ಯೆರವಿನ ತಲೆಮಠ ಸಿ.ಆರ್, ಪಾಶ್ಚಾತ್ಯ ಸಾಹಿತ್ಯ ವಾದಗಳು ಮತ್ತು ಕನ್ನಡ ಸಾಹಿತ್ಯ ಸಂದರ್ಭ, ೨೦೦೦

೨೦. ರಾಜಶೇಖರ ನೀರಮಾನ್ವಿ, ಹಂಗಿನರಮನೆಯ ಹೊರಗೆ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೦

೨೧. ರಾಜಶೇಖರ ನೀರಮಾನ್ವಿ, ಕರ್ಪೂರದ ಕಾಯದಲ್ಲಿ, ಲೋಹಿಯಾ ಪ್ರಕಾಶನ, ಬಳ್ಳಾರಿ, ೧೯೯೦

೨೨. ರಾಮಚಂದ್ರನ್ ಸಿ.ಎನ್, ನವ್ಯಃ ಸತ್ಯದ ಬಹುಮುಖಿ ಶೋಧ ಪ್ರಜಾವಾಣಿ ೧೧ನೇ ಫೆಬ್ರವರಿ ೨೦೦೭

೨೩. ಶಾಂತಿನಾಥದೇಸಾಯಿ, ನವ್ಯ ಸಾಹಿತ್ಯ ದರ್ಶನ, ಪರಿಸರ ಸಾಹಿತ್ಯ ಪ್ರಕಾಶನ, ಶಿವಮೊಗ್ಗ, ೧೯೯೦

೨೪. ಶೇಷಗಿರಿರಾವ್ ಎಲ್.ಎಸ್, ಹೊಸಗನ್ನಡ ಸಾಹಿತ್ಯ ಚರಿತ್ರೆ, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೦೮

೨೫. ಸಾಹಿತ್ಯ ವಾದಗಳು ಮತ್ತು ಚಳುವಳಿಗಳು, ಖ್ಯಾತ ವಿದ್ವಾಂಸರುಗಳ ಲೇಖನಗಳ ಸಂಪುಟ, ಸುಂದರ ಪುಸ್ತಕ ಪ್ರಕಾಶನ, ಧಾರವಾಡ

೨೬. ಹನುಮಂತಯ್ಯ ಎಲ್, ದಲಿತಲೋಕದ ಒಳಗೆ, ಕರ್ನಾಟಕ ದಲಿತ ಪ್ರಕಾಶನ, ಬೆಂಗಳೂರು, ೧೯೯೦